UNIVERSAL
LIBRARY
OU_200216
UNIVERSAL
LIBRARY

NARASIMHARAJA WADIYAR SERIES

(ಎರಡನೆಯ ಸಂಸ್ಕರಣ)

ಬಿ. ವೆಂಕಟಾಚಾರ್ಯ

ಎಂ. ಎಸ್. ರಾವ್ ಕಂಪೆನಿ,
ಪುಸ್ತಕ ವ್ಯಾಪಾರಿಗಳು, ಬೆಂಗಳೂರು ಸಿಟಿ

[ಕ್ರಯ 0—6—0]

## ವಿಜ್ಞಾಪನೆ

ಈ ಗ್ರಂಥವು ಶ್ರೀ ಯೋಗಿಂದ್ರನಾಥ ಬಾಬುಯವರ ಗ್ರಂಥವನ್ನು ಅವಲಂಬಿಸಿ ಬರೆದಿರುವುದು. ಇದು ಚಿಕ್ಕದಾದರೂ ಒಂದು ಮನೋಹರವಾದ ಚಿತ್ರವಾಗಿ ಸಾಮಾಜಿಕ ನೀತಿಬೋಧಕವಾಗಿರುವುದು.

ಮೈಸೂರು.
1901.

ಇತಿ
ಬಿ. ವೆಂಕಟಾಚಾರ್ಯ.

---

## ವಿಜ್ಞಾಪನೆ.

"ಸುವಾಸಿನಿ" ಮಾಸಪತ್ರಿಕೆಯಿಂದ ಉದ್ಧೃತವಾಗಿ ಪ್ರಕಟವಾಗಿದ್ದ ಈ ಗ್ರಂಥದ ಪ್ರಥಮ ಮುದ್ರಣದ ಪ್ರತಿಗಳೆಲ್ಲ ಮುಗಿದು ಬಹು ದಿನಗಳಾದುವು. ಪ್ರಿಯರಾದ ಕರ್ಣಾಟಕ ವಾಚಕರ ಆಜ್ಞಾನುಸಾರವಾಗಿ ಪುನಃ ಮುದ್ರಿಸಿರುತ್ತದೆ. ಇತರ ಗ್ರಂಥಗಳಂತೆಯೇ ಇದಕ್ಕೂ ಪ್ರೋತ್ಸಾಹ ದೊರೆತರೆ ಶ್ರಮವು ಸಾರ್ಥಕವೆಸರಿ.

ಮೈಸೂರು.
1918

ಇತಿ
ಬಿ. ವಿ. ನರಸಿಂಹಯ್ಯಂಗಾರ್.

PRINTED AND PUBLISHED BY B. V. NARASIMHA IYENGAR
AT THE ROYAL PRESS, MYSORE.—1918.

ಶ್ರೀಃ.



|| ಶ್ರಿಯೈನಮಃ ||

# ಉನ್ಮಾದಿನೀ.

## ಮೊದಲನೆಯ ಪರಿಚ್ಛೇದ.

"ಈ ಪ್ರಕಾರ ಗೋಪ್ಯವಾಗಿ ವಿವಾಹ ಮಾಡಲೇಕೆ?" ತರ್ಕಾಲಂಕಾರ ಮಹಾಶಯರು ಎಡಗೈಯಲ್ಲಿದ್ದ ನಸ್ಯದ ಡಬ್ಬಿಯನ್ನು ಬಲಗೈತೋರ್ಬೆಟ್ಟಿನಿಂದ ಒಂದೆರಡು ಶಡವೆ ಹೊಡೆದು, ಅದರ ಮುಚ್ಚಳವನ್ನು ತೆಗೆದು, ಒಂದು ಚಿಟಿಕೆ ನಸ್ಯವನ್ನು ಹಿಡಿದು, ಶಬ್ದವಾಗುವ ಹಾಗೆ ಬಲವಾಗಿ ಮೂಗಿಗೇರಿಸಿ "ಈ ಪ್ರಕಾರ ಗೋಪ್ಯವಾಗಿ ವಿವಾಹ ಮಾಡಲೇಕೆ?" ಎಂದು ಕೇಳಿದರು.

ಪ್ರಶ್ನೆಗೆ ಉತ್ತರವಾಗಿ ರಾಮಗೋಪಾಲನು ವಿನೀತಭಾವದಿಂದ, "ತಾವು ನಮ್ಮ ಕುಲಪುರೋಹಿತರಾಗಿರುವುದರಿಂದ, ತಮಗೆ ಯಾವುದನ್ನೂ ಮುಚ್ಚುಮರೆ ಮಾಡುವುದಿಲ್ಲ. ತಮ್ಮ ಸೋದರಮಾವಂದಿರು ನಮ್ಮ ಸಾಂಸಾರಿಕವಾದ ವಿಚಾರವನ್ನೆಲ್ಲಾ ಚೆನ್ನಾಗಿ ಅರಿತಿರುವರು. ದುರ್ಗಾವತಿಯು ನನ್ನ ಮಗಳಲ್ಲವೆಂಬುದನ್ನು ತಾವು ಬಲ್ಲಿರೋ?" ಎಂದನು.

ತರ್ಕಾಲಂಕಾರ ಮಹಾಶಯರು ಆಶ್ಚರ್ಯಪಟ್ಟು, "ಇದೇನು ಸೋಜಿಗ! ಅದನ್ನು ನಾನು ಅರಿಯೆನು. ಅವಳು ನಿನ್ನ ಮಗಳೆಂತಲೇ ತಿಳಿದಿದ್ದೆನು" ಎಂದು ಹೇಳಿದರು.

ರಾಮಗೋಪಾಲ :—" ದುರ್ಗಾವತಿಯು ನನ್ನ ಕಿರೇ ತಮ್ಮನಾದ ನವೀನ ಗೋಪಾಲನ ಮಗಳು. ನವೀನಗೋಪಾಲನು ಒಬ್ಬ ಹೆಸರ್ಗೊಂಡ ಬ್ರಹ್ಮೋ ಎಂಬುದನ್ನು ನೀವು ತಿಳಿದಿರಬಹುದೆಂದು ತೋರುತ್ತಿದೆ.''

ತರ್ಕಾಲಂಕಾರ :—" ನಿನ್ನ ಕಿರೇ ತಮ್ಮನು ಬ್ರಹ್ಮಧರ್ಮಾವಲಂಬಿಯಾಗಿ, ಸಪರಿವಾರವಾಗಿ ಮನೆಯನ್ನು ಬಿಟ್ಟುಹೋದನೆಂದು ನಮ್ಮ ಸ್ವರ್ಗಸ್ಥರಾದ ಮಾವಂದಿರು ಹೇಳುತಲಿದ್ದುದನ್ನು ಕೇಳಿರುವೆನು.''

ರಾಮಗೋಪಾಲ :—" ದುರ್ಗಾವತಿಯು ಹುಟ್ಟಿದ ಒಂದೂವರೆ ವರ್ಷದಲ್ಲಿಯೇ ನವೀನಗೋಪಾಲನಿಗೆ ಒಂದು ಗಂಡುಮಗು ಹುಟ್ಟಿತು. ತಾಯಿಯೇ ಆ ಮಗುವನ್ನು ಮುಂದಕ್ಕೆ ತಂದಳು. ಅದು ಮೊದಲ್ಗೊಂಡು ಮಕ್ಕಳು ಇಲ್ಲದ ನನ್ನ ಹೆಂಡತಿಯು ದುರ್ಗಾವತಿಯನ್ನು ಸಾಕಿ ದೊಡ್ಡವಳನ್ನಾಗಿ ಮಾಡಿದಳು. ನವೀನಗೋಪಾಲನು ಪಿತ್ರಾರ್ಜಿತವಾದ ಆಸ್ತಿಯನ್ನೆಲ್ಲಾ ನನಗೆ ಮಾರಿಬಿಟ್ಟು, ಸಪರಿವಾರವಾಗಿ ಮನೆಯನ್ನು ಬಿಟ್ಟು ಹೋಗುವಾಗ, ದುರ್ಗಾವತಿಗೆ ಐದುವರ್ಷವಿರಬಹುದು. ಅವಳು ದೊಡ್ಡಮ್ಮನನ್ನು ಬಿಟ್ಟು ತನ್ನ ತಾಯಿತಂದೆಗಳೊಡನೆ ಹೋಗುವುದಕ್ಕೊಪ್ಪಲಿಲ್ಲ. ನನ್ನ ಹೆಂಡತಿಯೂ ಅವಳನ್ನಗಲಿರುವುದಕ್ಕೆ ಸಮ್ಮತಿಸಲಿಲ್ಲ. ಆಗಿನಿಂದಲೂ ದುರ್ಗಾವತಿಗೆ ತಾಯಿತಂದೆಗಳ ಸಂಬಂಧವು ತಪ್ಪಿತು. ಅವಳು ನನ್ನನ್ನೇ ತನ್ನ ತಂದೆಯೆಂದೂ ನನ್ನ ಗತಿಸಿಹೋದ ಹೆಂಡತಿಯನ್ನೇ ತನ್ನ ಗರ್ಭಧಾರಿಣಿಯೆಂದೂ ತಿಳಿದುಕೊಂಡಿದ್ದಳು.

ತರ್ಕಾಲಂಕಾರ :—" ಒಳ್ಳೆಯದಾಯಿತು. ಆ ಮಗುವಿಗೆ ಇಷ್ಟು ಏಕಾಂತವಾಗಿ ಮದುವೆ ಮಾಡಲೇಕೆ ? ''

ರಾಮಗೋಪಾಲ :—ಅದಕ್ಕೆ ಒಂದು ಕಾರಣವುಂಟು. ನನ್ನ ಹೆಂಡತಿಯು ಹೋದ ಮೊದಲ್ಗೊಂಡು ನವೀನಗೋಪಾಲನು ತನ್ನ ಮಗಳನ್ನು ಕಳುಹಿಸಿಕೊಡಬೇಕೆಂದು ಕೇಳುತ್ತಿರುವನು. ನನಗೆ ಸ್ವಲ್ಪ ಆಸ್ತಿಯುಂಟು. ಆದರಮೇಲಿನ ಆಸೆಯಿಂದ ಅವನು ಹುಡುಗಿಯನ್ನು ಇಲ್ಲಿಯೇ ಇಟ್ಟುಕೊಂಡಿರುವುದಕ್ಕೆ ಸಮ್ಮತಿಸಿರುವನು. ಆದರೆ ನಮ್ಮ ಹಿಂದೂಮತದ ಪ್ರಕಾರ ಆ ಮಗುವಿಗೆ ಇಷ್ಟು ಚಿಕ್ಕವಯಸ್ಸಿನಲ್ಲಿ ಮದುವೆಮಾಡುವುದಕ್ಕೆ ಅವನಿಗೆ ಒಪ್ಪಿತವಿಲ್ಲ. ಅವನು ಬಂದು ರಚ್ಚೆಗೊಂಡು ಗದ್ದಲಿಸಿ ಮದುವೆ ಮಾಡದಹಾಗೆ ಅಡ್ಡಗಿಸುವನು. ಅದುಕಾರಣ ಮದುವೆಯನ್ನು ಗೋಪ್ಯವಾಗಿ ಮಾಡಬೇಕಾಗಿರುವುದು.''

ತರ್ಕಾಲಂಕಾರ ಮಹಾಶಯರು ಸ್ವಲ್ಪ ಯೋಚಿಸಿ, ಅನಂತರ ಎರಡು ಮೂರು ಸಲ ನಸ್ಯ ಗ್ರಹಣಮಾಡಿ, ಹುಡುಗಿಗೆ ಎಷ್ಟು ವರ್ಷವೆಂದು ಕೇಳಿದರು,

ರಾಮಗೋಪಾಲ :—" ಹುಡುಗಿಗೆ ಹನ್ನೆರಡನೆಯ ವರ್ಷ. ನನ್ನ ತಮ್ಮನು ಇಷ್ಟು ಚಿಕ್ಕವಯಸ್ಸಿನಲ್ಲಿ ಹಿಂದೂಮತಾನುಸಾರವಾಗಿ ಹುಡುಗಿಗೆ ಮದುವೆಮಾಡಿದರೆ, ಬ್ರಹ್ಮೋಸಮಾಜದಲ್ಲಿ ತನಗೆ ತಲೆ ತಗ್ಗಿಹೋಗುವುದೆಂದು ಹೇಳುತ್ತಲಿರುವನು."

ತರ್ಕಾಲಂಕಾರ ಮಹಾಶಯರು ವಿಸ್ಮಿತರಾಗಿ, " ಅದು ಹೇಗೆ? ಕನ್ಯಾಕಾಲವು ಮೀರಿಹೋಯಿತು! ಇನ್ನು ವಿಳಂಬಮಾಡುವುದು ಸರಿಯಲ್ಲ. ಏಕಾಂತವಾಗಿಯೇ ಮದುವೆ ಮಾಡಿಬಿಡು. ಒಳ್ಳೆಯದು, ಪಾತ್ರನನ್ನೆಲ್ಲಿ ಗೊತ್ತುಮಾಡಿರುವೆ? " ಎಂದು ಕೇಳಿದರು.

ರಾಮಗೋಪಾಲ :—" ಪಾತ್ರನು ನಮ್ಮ ಮನೆಯಲ್ಲಿಯೇ ಇರುವನು. ಪಾತ್ರನ ತಂದೆಯು ನನಗೆ ಪರಮ ಸ್ನೇಹಿತನಾಗಿದ್ದನು. ಈಗವನು ಇಲ್ಲ. ಪಾತ್ರನಿಗೆ ಯಾರೂ ಇಲ್ಲ. ಈ ಮದುವೆಗೋಸ್ಕರ ನಾನವನನ್ನು ಕರೆತಂದು, ಮನೆಯಲ್ಲಿಟ್ಟು ಕೊಂಡಿರುವೆನು."

ತರ್ಕಾಲಂಕಾರ ಮಹಾಶಯರು ಆಹ್ಲಾದಿತರಾಗಿ, " ಹಾಗಾದರೆ ಎಲ್ಲವನ್ನೂ ಸಿದ್ಧಪಡಿಸಿರುವೆ. ಪಾತ್ರನು ಸುಪಾತ್ರನಷ್ಟೆ? " ಎಂದು ಹೇಳಿದರು.

ರಾಮಗೋಪಾಲನು ಕೂಡಲೆ, " ಹೌದು, ಪಾತ್ರನು ಸರ್ವಾಂಶದಲ್ಲಿಯೂ ಸುಪಾತ್ರನಾಗಿರುವನು ; ನನಗೂ ಸಂಬಂಧ. ಅವನನ್ನು ಈಗಲೇ ಕರೆಯಿಸುವೆನು. ಅವನ ಸಂಗಡ ಮಾತನಾಡುವ ಕೆಲವು ಸಂಗತಿಗಳುಂಟು. ಅದನ್ನೆಲ್ಲಾ ತಮ್ಮ ಸಮಕ್ಷಮ ಮಾತನಾಡುವುದು ಒಳ್ಳೆಯದು " ಎಂದನು.

ಹೀಗೆಂದು ಹೇಳಿ, ' ಖಗೇಂದ್ರ! ' ಎಂದು ಕೂಗಿದನು. ಕೂಡಲೇ ಒಬ್ಬ ಹದಿನೆಂಟು ವರುಷ ವಯಸ್ಸಿನ ಯುವಕನು ಬಂದು ನಿಂತನು. ರಾಮಗೋಪಾಲನು ಖಗೇಂದ್ರನನ್ನು ಕುರಿತು, ಪುರೋಹಿತರಿಗೆ ನಮಸ್ಕಾರಮಾಡೆಂದು ಹೇಳಿದನು.

ಖಗೇಂದ್ರನು ತತ್‌ಕ್ಷಣದಲ್ಲಿ ಭೂಮಿಷ್ಠನಾಗಿ ತರ್ಕಾಲಂಕಾರಮಹಾಶಯರಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿದನು. ರಾಮಗೋಪಾಲನು ಅವನಿಗೆ ಕುಳಿತುಕೊಳ್ಳುವುದಕ್ಕೆ ಅಪ್ಪಣೆ ಮಾಡಿದನು. ಖಗೇಂದ್ರನು ಕುಳಿತುಕೊಂಡನು. ರಾಮಗೋಪಾಲನು, " ಖಗೇಂದ್ರ! ನಾನು ನಿನ್ನನ್ನು ನನ್ನ ಮಗನಹಾಗೆ ನೋಡುತ್ತಲಿರುವೆನು. ಅದುಕಾರಣ ನಿನಗೆ ದುರ್ಗಾವತಿಯನ್ನು ಕೊಟ್ಟು ಮದುವೆಮಾಡುವೆನು. ನೀನು ದುರ್ಗಾವತಿಯನ್ನು ಪ್ರೀತಿಸುವುದನ್ನೂ ನಾನು ಕಂಡಿರುವೆನು. ಆದರೆ ನೀನೊಂದು ಪ್ರತಿಜ್ಞೆಯನ್ನು ಮಾಡಬೇಕು " ಎಂದನು.

ಖಗೇಂದ್ರನಾಥನು ವಿನೀತಭಾವದಿಂದ, "ಏನು ಪ್ರತಿಜ್ಞೆಯೋ ಅಪ್ಪಣೆಯಾ ಗಲಿ" ಎಂದನು.

ರಾಮಗೋಪಾಲನು ಸ್ವಲ್ಪಹೊತ್ತು ಚಿನ್ತಿಸಿ, "ನಾನು ಬದುಕಿರುವವರೆಗೂ ನೀನು ಈ ವಿವಾಹವಿಚಾರವನ್ನು ಏಕಾಂತವಾಗಿಡಬೇಕು. ಈ ವಿವಾಹವಾದಮೇಲೆ, ನೀನು ನನ್ನ ಮನೆಗೆ ನಾನು ಬದುಕಿರುವವರೆಗೂ ಬಾರದಿರಬೇಕು. ನನ್ನ ಮರಣಾನಂತರ ಈ ಮದುವೆಯಾದ ವಿಚಾರವನ್ನು ಬಹಿರಂಗಪಡಿಸಿ, ನಾನು ಇರಿಸಿಹೋಗುವ ಆಸ್ತಿಯನ್ನು ನೀವು ಗಂಡಹೆಂಡಿರಿಬ್ಬರೂ ಅನುಭವಿಸಬೇಕು. ಈಗ ಮದುವೆಯಾದ ಮೇಲೆ ಅಲಹಾಬಾದಿಗೆ ಹೋಗಿ, ಅಲ್ಲಿ ನನ್ನ ಸಂಬಂಧರಾದವರೊಬ್ಬರ ಮನೆಯಲ್ಲಿರಬೇಕು. ನಿನಗೆ ಬೇಕಾಗುವ ವೆಚ್ಚಗಳಿಗೆಲ್ಲಾ ನಾನು ಹಣವನ್ನು ಕಳುಹಿಸುತ್ತಲಿರುವೆನು. ಅಲ್ಲಿ ಕಾಲೇಜಿನಲ್ಲಿ ಓದಬೇಕು. ಇದಕ್ಕೆ ನೀನೊಪ್ಪುವಿಯೋ ಹೇಳು?" ಎಂದನು.

ಖಗೇಂದ್ರನು ಪುನಃ ವಿನೀತಭಾವದಿಂದ, "ತಾವು ಹೇಗೆ ಅಪ್ಪಣೆ ಮಾಡುವಿರೋ, ಹಾಗೆ ಮಾಡುವುದಕ್ಕೆ ಸಿದ್ಧನಾಗಿರುವೆನು" ಎಂದು ಹೇಳಿದನು.

ರಾಮಗೋಪಾಲ :—"ಒಳ್ಳೆಯದು, ಈಗ ನೀನು ಹೋಗಬಹುದು."

ಖಗೇಂದ್ರನಾಥನು ಹೊರಟುಹೋದ ಮೇಲೆ, ತರ್ಕಾಲಂಕಾರ ಮಹಾಶಯರು, "ಹಾಗಾದರೆ ನಾಳೆ ವಿವಾಹಕ್ಕೆ ಬಹಳ ಒಳ್ಳೆಯ ದಿನವಾಗಿರುವುದು. ಎರಡು ಪ್ರಹರದ ಮೇಲೆ ಲಗ್ನವಿಡಬಹುದು. ಪ್ರಸ್ತಕ್ಕೆ ಎಲ್ಲಾ ಸಿದ್ಧಮಾಡಿಡಬಹುದು" ಎಂದರು.

ರಾಮಗೋಪಾಲ :—"ಇನ್ನೊಂದು ಮಾತು ಹೇಳುವುದಿರುವುದು. ಪ್ರಸ್ತವು ನನ್ನ ಮನೆಯಲ್ಲಿ ನಡೆಯಕೂಡದು. ಎಲ್ಲಾ ಸಿದ್ಧಪಡಿಸಿಡುವೆನು. ಬೇಕಾದ ಹಣಕಾಸೆಲ್ಲಾ ತಮ್ಮ ವಶಕ್ಕೆ ಕೊಡುವೆನು. ಸಂಪ್ರದಾನಕಾರ್ಯವು ತಮ್ಮ ಕಾಳಿಯ ದೇವಸ್ಥಾನದಲ್ಲಿ ನಡೆಯಬೇಕು. ಈ ಕಾರ್ಯವನ್ನು ಸಾಧ್ಯವಾದ ಮಟ್ಟಿಗೂ ಏಕಾಂತವಾಗಿ ನಡೆಯಿಸಿಬಿಡಬೇಕೆಂಬುದು ನನ್ನ ಇಷ್ಟ."

ತರ್ಕಾಲಂಕಾರ ಮಹಾಶಯರು ಹಾಗೆಯೇ ಸ್ವಲ್ಪ ಯೋಚಿಸಿ ಬಹಳ ಆಹ್ಲಾದದಿಂದ, "ಅದು ಬಹಳ ಸರಿಯಾದುದು. ಅದರ ವಿಚಾರದಲ್ಲಿ ನೀನು ಚಿಂತಿಸಬೇಕಾದ ಆವಶ್ಯಕವಿಲ್ಲ. ನಾನು ಎಲ್ಲವನ್ನೂ ಸಿದ್ಧಪಡಿಸುವೆನು" ಎಂದು ಹೇಳಿದರು.

ಮೂರನೆಯ ದಿನ ರಾತ್ರಿ ಎರಡನೆಯ ಪ್ರಹರದಲ್ಲಿ ಶಾಮಪುರಗ್ರಾಮದಲ್ಲಿ ರೇವತೀನದಿಯ ತೀರದಲ್ಲಿದ್ದ ಕಾಳಿಯ ದೇವಸ್ಥಾನದಲ್ಲಿ ಅತ್ಯಂತ ಏಕಾಂತವಾಗಿ ಈ

ವಿವಾಹಕಾರ್ಯವು ನಡೆದುಹೋಯಿತು. ಪಾತ್ರನಾದ ಖಗೇಂದ್ರನಾಥನು ತಾನು ಮೆಚ್ಚಿದ್ದ ಪಾತ್ರಿಯಾದ ದುರ್ಗಾವತಿಯೊಡನೆ ಪರಿಣಯಸೂತ್ರದಿಂದ ಆಬದ್ಧನಾದನು. ಅದುಕಾರಣ ಅವನ ಆನಂದಕ್ಕೆ ಪಾರವಿರಲಿಲ್ಲ. ಪಾತ್ರಿಯಾದ ದುರ್ಗಾವತಿಯ ಆ ಸಣ್ಣ ಹೃದಯದಲ್ಲಿ ಹಿಡಿಯಲಾರದಷ್ಟು ಆನಂದವುಂಟಾಯಿತು. ಪಾತ್ರನು ಅವಳಿಗೆ ವಿಶೇಷ ಪರಿಚಿತನಾಗಿ ಬಾಲ್ಯಸ್ನೇಹಿತನಾಗಿದ್ದನು. ಇಬ್ಬರಿಗೂ ಪರಸ್ಪರ ಗಾಢಪ್ರಣಯವಿತ್ತೋ ಇಲ್ಲವೋ, ಅದನ್ನು ಈ ಹಿಂದೂ ವಿವಾಹದಲ್ಲಿ ಅನುಸಂಧಾನಮಾಡುವುದು ನಮಗೆ ಅವಶ್ಯವಿಲ್ಲ. ಆದರೆ ವಿವಾಹಕ್ಕೆ ಪೂರ್ವವೇ ಇಬ್ಬರೂ ಪರಸ್ಪರ ಒಂದು ಪ್ರಕಾರವಾಗಿ ಪ್ರೀತಿಸುತ್ತಲಿದ್ದರೆಂದು ನಾವು ಖಂಡಿತವಾಗಿ ಹೇಳಬಲ್ಲೆವು. ಕನ್ಯೆಯ ಕರ್ತನಾದ ರಾಮಗೋಪಾಲನೂ ಆನಂದದಿಂದ ಅಧೀರನಾದನು. ಬಹಳ ದಿವಸಗಳ ಅವನ ಆಶೆಯು ಈ ದಿನ ಕೈಗೂಡಿತು. ಪುರೋಹಿತ ತರ್ಕಾಲಂಕಾರ ಮಹಾಶಯರು ಈ ದಿನ ಆನಂದದಿಂದ ಉಲ್ಲಾಸಿತರಾಗಿದ್ದರು. ಏಕೆಂದರೆ, ಈ ವಿವಾಹದಿಂದ ಅವರಿಗೆ ಆಶಾತೀತ ಅರ್ಥಲಾಭ ಉಂಟಾಯಿತು. ಆದರೆ ಈ ಆಖ್ಯಾಯಿಕೆಯ ನಾಯಕನಾಯಕಿಯರ ಮದುವೆಯು ಸಲುವಾಗಿ, ನಮ್ಮ ಪಾಠಕಮಹಾಶಯರ ಆನಂದವನ್ನು ಹೇಗೆ ವೃದ್ಧಿಗೊಳಿಸಬೇಕೋ, ಅದನ್ನು ಕುರಿತು ನಾವು ಏನೂ ಸ್ಥಿರಮಾಡಲಾರದವರಾಗಿರುವೆವು. ಯಾವ ಮದುವೆಯಲ್ಲಿ ಗೋಧಿಕಲ್ಲುಶಾಸ್ತ್ರ, ಒಂದಕ್ಕಿಶಾಸ್ತ್ರ, ದೇವರನ್ನು ತರುವುದು, ದಿಬ್ಬಣದವರ ಒಡ್ಡಣೆ ಮುಂತಾದವು ಇಲ್ಲವೋ, ಅಂತಹ ಮದುವೆಯು ಪಾಠಕರ ಮನೋಮತವಲ್ಲವೆಂಬುದು ಖಂಡಿತ ಹೇಳಬಲ್ಲೆವು. ಓಲಗ, ಬಾಜಾ ಬಜಂತರಿ, ಮೇಳತಾಳ, ಇಂಗ್ಲೀಷು ಬಾಂಡು ಇವುಗಳ ಮಾತು ಹಾಗಿರಲಿ— ಮುಹೂರ್ತಕಾಲದಲ್ಲಿ ಆನಂದಸೂಚಕವಾದ ಒಂದು ಘಂಟಾಶಬ್ದವುಕೂಡ ಇಲ್ಲದ ಮದುವೆಯು ಪಾಠಕಮಹಾಶಯರಿಗೆ ಮದುವೆಯಾಗಿ ಗಣ್ಯವಾಗಲಾರದು. ಯಾವ ವಿವಾಹದಲ್ಲಿ ಕಾಶೀಯಾತ್ರೆ ಇಲ್ಲವೋ, ನಾಗವಲಿ ಮೆರವಣಿಗೆ ಇಲ್ಲವೋ, ಅಂತಹ ವಿವಾಹವನ್ನು ಕುರಿತು ಅನೇಕರು ಜರೆದಾಡುವರೆಂದು ನಾವು ಖಂಡಿತವಾಗಿ ಹೇಳಬಲ್ಲೆವು. ಈ ಪ್ರಕಾರ ನಡೆದ ವಿವಾಹ ಮಹೋತ್ಸವವನ್ನು ಕುರಿತು ನಾವು ಮತ್ತೇನು ತಾನೇ ವರ್ಣಿಸಲಾಪೆವು ? ಶುಭಮುಹೂರ್ತದಲ್ಲಿಯೋ ಅಥವಾ ಅಶುಭಮುಹೂರ್ತದಲ್ಲಿಯೋ, ಮಾರನೆಯ ದಿನ ಗಭೀರರಾತ್ರಿಯಾವುದೋ ಒಂದು ಮುಹೂರ್ತದಲ್ಲಿ ಆ ಕರಾಳಮೂರ್ತಿ ಕಾಳಿಕಾದೇವಿಯ ಸಮಕ್ಷಮದಲ್ಲಿ, ಈ ಮದುವೆಯು ಅತ್ಯಂತ ಏಕಾಂತವಾಗಿ ನಡೆದುಹೋಯಿತು.

# ಎರಡನೆಯ ಪರಿಚ್ಛೇದ.

ಮೇಲೆ ಹೇಳಿದ ಮದುವೆಯಾದ ಎರಡು ವರ್ಷವಾದಮೇಲೆ ವಿಸೂಚಿಕಾರೋಗದಿಂದ ರಾಮಗೋಪಾಲನಿಗೆ ಲೋಕಾಂತರಪ್ರಾಪ್ತಿಯುಂಟಾಯಿತು. ದುರ್ಗಾವತಿಗೆ ದಿಕ್ಕಿಲ್ಲದೆ ಹೋಯಿತು. ಕಲಿಕತ್ತೆಯಲ್ಲಿ ನವೀನಗೋಪಾಲನಿಗೆ ಈ ಸಮಾಚಾರವು ಮುಟ್ಟಿತು. ಆದರೆ ಅಲಹಾಬಾದಿನಲ್ಲಿ ಖಗೇಂದ್ರನಾಥನಿಗೆ ಈ ಸಮಾಚಾರವನ್ನು ಯಾರೂ ಬರೆದು ಕಳುಹಿಸಲಿಲ್ಲ. ಈ ಸಮಾಚಾರವನ್ನು ಕಳುಹಿಸುವ ಭಾರವು ಯಾರಮೇಲೆ ಇತ್ತೋ, ಆ ತರ್ಕಾಲಂಕಾರ ಮಹಾಶಯರು ಆಗ ಊರಲ್ಲಿರಲಿಲ್ಲ. ಆ ಏಕಾಂತ ವಿವಾಹದ ಸಮಾಚಾರವನ್ನು ಮತ್ತಾರೂ ಅರಿಯರು. ಅದ ಕಾರಣ ಖಗೇಂದ್ರನಿಗೆ ಸಮಾಚಾರವನ್ನು ಕೊಡುವವರು ಯಾರು ? ನವೀನಗೋಪಾಲನಿಗೆ ಸಮಾಚಾರ ಮುಟ್ಟಿದಕೂಡಲೆ, ಅವನು ಸ್ವಗ್ರಾಮಕ್ಕೆ ಬಂದು, ಅಣ್ಣನು ಬಿಟ್ಟುಹೋಗಿದ್ದ ಆಸ್ತಿಯನ್ನೆಲ್ಲಾ ಭದ್ರಪಡಿಸಲಾರಂಭಿಸಿದನು. ರಾಮಗೋಪಾಲನು ಸಾಯುವುದಕ್ಕೆ ಪೂರ್ವ ಒಂದು ಉಯಿಲನ್ನು ಬರೆದಿಟ್ಟಿದ್ದನು. ಅದು ನವೀನಗೋಪಾಲನಿಗೆ ಸಿಕ್ಕಿತು. ಅದರಲ್ಲಿ ರಾಮಗೋಪಾಲನು ತನ್ನ ಸ್ಥಾವರ ಜಂಗಮ ಆಸ್ತಿಯನ್ನೆಲ್ಲಾ ದುರ್ಗಾವತಿಗೆ ದಾನವಾಗಿ ಬರೆದಿದ್ದನು. ನವೀನಗೋಪಾಲನ ಇತರ ಮಕ್ಕಳಿಗೆ ಅದರಮೇಲೆ ಅಧಿಕಾರವಿರಲಿಲ್ಲ. ದುರ್ಗಾವತಿಯು ಮನುಷ್ಯಳಾಗುವವರೆಗೂ ಆ ಆಸ್ತಿಯೆಲ್ಲಾ ಅವಳ ಗಂಡನ ಸ್ವಾಧೀನದಲ್ಲಿರಬೇಕೆಂದೂ ಉಯಿಲಿನಲ್ಲಿ ಬರೆದಿತ್ತು. ಆದರೆ ಅದರಲ್ಲಿ ಗಂಡನ ಹೆಸರು ಬರೆದಿರಲಿಲ್ಲ. ರಾಮಗೋಪಾಲನ ಒಂದು ಲಕ್ಷ ರೂಪಾಯಿಗಿಂತಲೂ ಹೆಚ್ಚಿನ ಆಸ್ತಿಯನ್ನು ಇಟ್ಟುಹೋಗಿದ್ದನು. ಅದ ಕಾರಣ ನವೀನಗೋಪಾಲನಿಗೆ ಭ್ರಾತೃವಿಯೋಗದಿಂದ ಆನಂದವೋ ಅಥವಾ ದುಃಖವೋ, ಇದರಲ್ಲಿ ಯಾವುದು ಹೆಚ್ಚಾಗಿತ್ತೋ, ಅದನ್ನು ಕಂಡು ಹಿಡಿಯುವುದು ನಮಗೆ ಇನ್ನೂ ಸಾಧ್ಯವಾಗಿಲ್ಲ. ಆದರೆ ಉಯಿಲಿನಲ್ಲಿ ತನ್ನ ಹೆಸರು ಇಲ್ಲವಾದುದಕ್ಕೆ ಬಹಳ ದುಃಖಿತನಾಗಿದ್ದನೆಂದು ನಾವು ವಿಚಾರಿಸಿದುದರಲ್ಲಿ ತಿಳಿಯಬಂದಿತು.

ನವೀನಗೋಪಾಲನು ಒಬ್ಬ ಪೂರ್ಣವಾಗಿಯೂ ಬ್ರಹ್ಮೋವಾಗಿದ್ದನು. ಅದುದರಿಂದ ಅವನು ತನ್ನ ಮೃತನಾದ ಅಣ್ಣನ ಶ್ರಾದ್ಧಾದಿಗಳಿಗೆ ಏರ್ಪಾಡಾವುದೂ ಮಾಡದೆ, ಮನೆಯಲ್ಲಿದ್ದ ರೊಕ್ಕ ಚರಸ್ವತ್ತು ಮುಂತಾದುದನ್ನೆಲ್ಲಾ ಒಟ್ಟುಮಾಡಿಕೊಂಡು, ಸಂಗಡ ಮಗಳಾದ ದುರ್ಗಾವತಿಯನ್ನೂ ಕರೆದುಕೊಂಡು, ಕಲಿಕತ್ತೆಗೆ ಹೊರಟುಹೋದನು. ದುರ್ಗಾವತಿಯು ಪ್ರಕೃತಿಯು ಅತಿ ಕೋಮಲವಾದುದು,

ಅವಳು ಬಹಳ ಲಜ್ಜಾಶೀಲೆ. ತಂದೆಯ ಇದಿರಿಗೂ ಅವಳು ತಲೆಯೆತ್ತಿ ಮಾತನಾಡಳು. ಬ್ರಹ್ಮೋಮತಾವಲಂಬಿಯಾದ ತಂದೆಯ ಸಂಗಡ ಕಲಿಕತ್ತೆಗೆ ಬರುವುದಕ್ಕೆ ಅವಳಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಆದರೆ ಆಗ ಅವಳು ಆ ಮಾತನ್ನು ಬಾಯಿಬಿಟ್ಟು ಹೇಳಬಲ್ಲಳಾಗಿದ್ದಳೆ? ಮತ್ತು ಅವಳ ಪ್ರಾಣವು ಯಾರಿಗೋಸ್ಕರ ಸರ್ವದಾ ತುಡಿದು ಸಂಕಟಪಡುತ್ತಲಿತ್ತೋ, ಆತನು ಈ ದುಃಖದ ಸಮಯದಲ್ಲಿ ಎಲ್ಲಿಗೆ ಹೋದನು? ಎದೆ ಸೀಳಿ ಹೋದರೂ ಆ ಮಾತು ಅವಳ ಬಾಯಿಯಿಂದ ಹೊರಡದು. ದುರ್ಗಾವತಿಯು ಮನಸ್ಸಿನಲ್ಲಿ, ತನ್ನ ದೊಡ್ಡಪ್ಪನು ಸತ್ತ ಸಮಾಚಾರವನ್ನು ಕೇಳಿದ ಕೂಡಲೆ, ಖಗೇಂದ್ರನಾಥನು ಬಂದು ಸಮಸ್ತ ಭಾರವನ್ನೂ ವಹಿಸಿಕೊಳ್ಳುವನೆಂದು ತಿಳಿದಿದ್ದಳು. ದುರ್ಗಾವತಿಯು ಅಲಹಾಬಾದಿಗೆ ಎಷ್ಟು ದಿನಗಳೊಳಗೆ ಸಮಾಚಾರವು ಮುಟ್ಟುವುದೋ ಎಂದು ಯೋಚನೆಯಲ್ಲಿದ್ದಳು. ಅಲ್ಲಿಗೆ ಸಮಾಚಾರವನ್ನು ಯಾರೂ ಬರೆದು ಕಳುಹಿಸಲಿಲ್ಲವೆಂಬುದು ಅವಳ ಮನಸ್ಸಿಗೆ ಹತ್ತಲಿಲ್ಲ. ತರ್ಕಾಲಂಕಾರ ಮಹಾಶಯರು ಗ್ರಾಮದಲ್ಲಿಲ್ಲವೆಂಬುದೂ ಅವಳಿಗೆ ತಿಳಿಯದು. ಅವಳ ಸ್ವಭಾವಕ್ಕನುಗುಣವಾಗಿ ಏನೊಂದೂ ಮಾತನಾಡದೆ, ಅಳುತ್ತಳುತ್ತ ತಂದೆಯೊಡನೆ ಹೊರಟು ಕಲಿಕತ್ತೆಗೆ ಬಂದಳು. ಹೊರಡುವಾಗ ಗ್ರಾಮದಲ್ಲಿದ್ದ ಅವಳ ಸಮವಯಸ್ಕರಾದ ಗೆಳತಿಯರು ಅವಳನ್ನು ನೋಡುವುದಕ್ಕೆ ಬಂದಿದ್ದರು. ಆಗ ಅವಳು ಬಹಳ ಅತ್ತಳು. ಅಳುವುದಕ್ಕೆ ಅವಳಿಗೆ ಅನೇಕ ಕಾರಣಗಳಿದ್ದುವು. ಮೊದಲನೆಯದು, ತಂದೆಗೆ ಸಮಾನನಾದ ದೊಡ್ಡಪ್ಪನು ಸತ್ತುಹೋದನು. ಅನಂತರ; ಆಜೀವನವೂ ಯಾವ ಮನೆಯಲ್ಲಿ ಪ್ರತಿಪಾಲಿತಳಾಗಿದ್ದಳೋ, ಆ ಶೈಶವಾವಸ್ಥೆಯಿಂದಲೂ ಯಾರು ತನ್ನ ಸಂಗಾತಿಗಳಾಗಿದ್ದರೋ, ಯಾವ ದಾಸದಾಸಿಯರನ್ನು ತಿಳಾರ್ಧಕಾಲವಾದರೂ ನೋಡದಿದ್ದರೆ ಸುಮ್ಮನೆ ಇರಳೋ, ಅಂತಹವರ ಮೇಲಿನ ಮಮತೆಯನ್ನೆಲ್ಲಾ ತೊರೆದು ಬೇರೆ ಹೊಸ ಸ್ಥಳಕ್ಕೆ ಹೋಗಬೇಕಾಗಿ ಬಂದಿತು. ಎಲ್ಲರೂ ದುರ್ಗಾವತಿಯ ತಾತ್ಕಾಲಿಕ ಅಳುವಿಗೆ ಇದೆಲ್ಲಾ ಕಾರಣಗಳೆಂದು ಊಹಿಸಿಕೊಂಡು, ಅವಳ ದುಃಖದಲ್ಲಿ ದುಃಖಿತರಾಗಿ ಕಣ್ಣೀರು ಬಿಟ್ಟರು. ಆ ಸಮಯದಲ್ಲಿ ಅವಳ ಆ ಅಳುವಿಗೆ ಮುಖ್ಯವಾದ ಕಾರಣವನ್ನು ಯಾರೂ ಊಹಿಸಲಾರದೆ ಹೋದರು.

ದುರ್ಗಾವತಿಯು ಕಲಿಕತ್ತೆಗೆ ಬಂದಳು. ಒಂದು ಕಡೆ ನೋಡಿದರೆ, ಹುಡುಗಿಯು ಬಹಳ ಕಾಲದ ಮೇಲೆ ತೌರುಮನೆಗೆ ಬಂದು, ತಾಯಿ ತಂದೆಗಳು ಸೋದರಸೋದರಿಯರು ಇವರೊಂದಿಗೆ ಸೇರಿದಹಾಗಿರುವುದು. ಮತ್ತೊಂದು ಕಡೆ ನೋಡಿದರೆ, ಒಬ್ಬ ಹಿಂದೂಜಾತಿಯ ಹುಡುಗಿಯು ಸಂಪೂರ್ಣ ಅಪರಿಚಿತವಾದ ಬ್ರಹ್ಮೋಜಾತಿಯವರ

ಮನೆಯಲ್ಲಿ ಅಪರಿಚಿತರಾದವರ ಸಂಗಡ ಸೇರಿದ ಹಾಗಿರುವುದು. ದುರ್ಗಾವತಿಗೆ ಈ ಯವಸ್ಥೆಯ ಪರಿವರ್ತನೆಯಿಂದ ಸುಖವು ಹೆಚ್ಚಾಯಿತೊ ಅಥವಾ ದುಃಖವು ಹೆಚ್ಚಾಗಿರುವುದೋ? ನಾವು ಈಗ ದುರ್ಗಾವತಿಯನ್ನು ಸುಖಿಯೆಂದು ಹೇಳಬೇಕೋ ಅಥವಾ ದುಃಖಿಯೆಂದು ಹೇಳಬೇಕೋ? ನೀವು ಹೇಳಿರಿ. ದುರ್ಗಾವತಿಗೆ ಬ್ರಹ್ಮೋಮತಕ್ಕೆ ಸೇರಿದ ಅವಳ ತಾಯಿತಂದೆಗಳು ಸೋದರಸೋದರಿಯರು, ಇವರ ಮೇಲೆ ಸ್ವಲ್ಪವೂ ಪ್ರೀತಿವಿಶ್ವಾಸಗಳು ಇರಲಿಲ್ಲ. ಯಾರನ್ನು ಇಷ್ಟುಕಾಲ ನೋಡಿರಲಿಲ್ಲವೋ, ಅಂತಹವರ ಮೇಲೆ ಪ್ರೀತಿ ಹುಟ್ಟುವ ಬಗೆ ಹೇಗೆ? ದುರ್ಗಾವತಿಯು ಇಲ್ಲಿಗೆ ಬಂದು ಮತ್ತೊಂದು ಅನನುಕೂಲವಾಯಿತು. ನವೀನಗೋಪಾಲನ ಹೆಂಡತಿ ಹೈಮವತಿಯು ಅವಳಿಗೆ ಯಥಾರ್ಥ ಗರ್ಭಧಾರಣಿಯಾಗಿದ್ದರೂ, ಅವಳನ್ನು ತನ್ನ ತಾಯಿಯೆಂದೊಪ್ಪಿಕೊಳ್ಳುವುದಕ್ಕೆ ಮನಸ್ಸು ಹಿಮ್ಮೆಟ್ಟುವುದು. ಹಳ್ಳಿಯಲ್ಲಿ ಹಿಂದೂಗೃಹದಲ್ಲಿ ಪಾಲಿತಳಾದ ದುರ್ಗಾವತಿಯು ಆ ವಿಚಿತ್ರ ವೇಷಭೂಷಣಗಳುಳ್ಳ ಬೂಟುಧಾರಿಣಿಯಾದ ಲಜ್ಜೆಯಿಲ್ಲದ ಹೆಂಗಸನ್ನು ಹೇಗೆ ತಾನೇ ತನ್ನ ಗರ್ಭಧಾರಿಣಿಯೆಂದೊಪ್ಪಿಕೊಳ್ಳುವಳು? ಅವಳಿಗೆ ತಾಯಿಯ ಸ್ಮರಣೆ ಮನಸ್ಸಿಗೆ ಬಂದರೆ, ಆ ರಾಮಗೋಪಾಲನ ಗತಿಸಿಹೋದ ಹೆಂಡತಿಯಾದ ಹರಸುಂದರಿಯು ಜ್ಞಾಪಕವೇ ಬರುವುದು. ಆಗ ದುರ್ಗಾವತಿಗೆ ಕಣ್ಣೀರು ನಿಲ್ಲದು. ಅವಳು ಬಿಕ್ಕಿ ಬಿಕ್ಕಿ ಅಳುವಳು.

ದುರ್ಗಾವತಿಯು ಮನೆಗೆ ಬಂದುದನ್ನು ಕಂಡು, ತಾಯಿ ಹೈಮವತಿಯು ಅವಳನ್ನು ಆದರಿಸಿ ಅಭ್ಯರ್ಥನ ಮಾಡಿ ಬರಮಾಡಿಕೊಂಡಳು. ಆದರೆ ಆ ವಿಜಾತೀಯವಾದ ಆದರವೂ ಅಭ್ಯರ್ಥನವೂ ದುರ್ಗಾವತಿಗೆ ಸರಿಯಾದುದಾಗಿ ಕಾಣಿಸಲಿಲ್ಲ. ದುರ್ಗಾವತಿಯು ತಾಯಿಯನ್ನು ಮೊದಲು ನೋಡಿದ ಕೂಡಲೆ ಭೂಮಿಷ್ಠಳಾಗಿ ಪ್ರಣಾಮವನ್ನು ಮಾಡುವುದಕ್ಕೆ ಹೋದಳು. ಆದರೆ ಹೈಮವತಿಯು ಅವಳು ಹಾಗೆ ಪ್ರಣಾಮ ಮಾಡುವುದನ್ನು ನಿಷೇಧಿಸಿ, ಕೇವಲ ಮುಖವನ್ನು ಚುಂಬನಮಾಡಿದಳು. ಮತ್ತು ಅವಳ ಆಹಾರ, ಉಡುಪು, ಇವುಗಳ ವಿಚಾರದಲ್ಲಿಯೂ ಹೈಮವತಿಯು ಪ್ರಯತ್ನ ಪೂರ್ವಕವಾಗಿ ಮಮತೆಯಿಂದ ನೋಡಿಕೊಳ್ಳಲಾರಂಭಿಸಿದಳು. ಅದು ದುರ್ಗಾವತಿಗೆ ಬಹಳ ಕಷ್ಟವನ್ನುಂಟುಮಾಡಿತು. ಬೆಳಗಾಗುತ್ತಲೇ ಆರೇಳು ಗಂಟೆಯೊಳಗಾಗಿ ಎಲ್ಲರ ಸಂಗಡ ಅವಳು ಕಾಫಿ, ಟಿ, ಮುಂತಾದುದನ್ನು ಕುಡಿಯಬೇಕೆಂದು ಬಲವಂತಕ್ಕೆ ಪ್ರಾರಂಭವಾಯಿತು. ಹತ್ತು ಘಂಟೆಗೆ ಊಟ, ಪುನಃ ಎರಡು ಘಂಟೆಗೆ ಫಲಾಹಾರ, ಸಾಯಂಕಾಲದಲ್ಲಿ ಪುನಃ ಟಿ, ತಿರುಗಿ ರಾತ್ರಿ ಹತ್ತು ಘಂಟೆಗೆ ಊಟ, ಆ ಊಟವಾದರೂ—ಹೆಂಗಸರೂ ಗಂಡಸರೂ ಎಲ್ಲರೂ ಏಕತ್ರ ಕುಳಿತುಕೊಂಡು ಮಾಡಬೇಕಾದ

ಊಟ. ಎಲ್ಲರೂ ಗಂಡಸರ ಸಂಗಡ ಅವರ ಒತ್ತೆಯಲ್ಲಿ ಕುಳಿತುಕೊಂಡು ಊಟ ಮಾಡಬೇಕಾದರೆ, ದುರ್ಗಾವತಿಗೆ ಊಟವೇ ಸಾಗದು. ಗಂಟಲು ಹಿಚಿಕಿದ ಹಾಗಾಗುವುದು. ಆ ಊಟದ ಸಾಮಗ್ರಿಗಳೆಲ್ಲವೂ ಅವಳಿಗೆ ವಿಷವಾಗಿರುವುವು. ಅವಳ ಉಡುಪಿನ ವಿಚಾರದಲ್ಲಿಯೂ ಸ್ನೇಹಮಯಿಯಾದ ತಾಯಿಯು ಹೆಚ್ಚು ಆದರದಿಂದ ಮಗಳಿಗೆ ಸಂತೋಷವನ್ನುಂಟುಮಾಡಲು ಪ್ರಯಾಸಪಡುವಳು:—ಬೂಟು, ಮೇಜೋಡು, ಪಳಣಿ, ಬಾಡೀಸು (ಬಿಗಿಯಾದ ಕುಪ್ಪಸ), ಕಾರ್ಸೆಟ್ಟು (ಬಹಳ ಬಿಗಿಯಾದ ತೋಳಿಲ್ಲದ, ಎದೆಯಿಂದ ಸೊಂಟದವರೆಗೆ ಬಹಳ ಕಷ್ಟದಿಂದ ತೊಟ್ಟುಕೊಳ್ಳಬೇಕಾದ ಒಂದು ವಿಧವಾದ ಜಾಕೆಟು; ಇದನ್ನು ಧರಿಸಿಕೊಂಡರೆ, ನೋಡುವವರಿಗೆ ಎದೆಯುಬ್ಬಿದ ಹಾಗೂ, ಸೊಂಟವು ಕೊರೆದುಹೋಗಿ ಸಣ್ಣಗೆ ಸೇನಡುವಾಗಿರುವ ಹಾಗೂ, ಕಾಣಿಸುವುದು), ಹೊಸ ಮಾದರಿಯ ಸೀರೆ ಇವುಗಳನ್ನೆಲ್ಲಾ ದುರ್ಗಾವತಿಗೆ ಕೊಟ್ಟಳು. ಅದನ್ನೆಲ್ಲಾ ಹೇಗೆ ತೊಟ್ಟುಕೊಳ್ಳಬೇಕೋ, ಅದನ್ನೂ ಹೇಳಿಕೊಟ್ಟಳು. ಆದರೆ ದುರ್ಗಾವತಿಯು ತಾಯಿಯ ಆ ಲವಲವಿಕೆಯ ಮತ್ತು ಸ್ನೇಹದ ಮೌಲ್ಯವನ್ನು ಅರಿಯದೆ ಹೋದಳು. ಅದೆಲ್ಲಾ ಒಂದು ವಿಧವಾದ ಅತ್ಯಾಚಾರವೆಂದೂ, ತನ್ನನ್ನು ಅಪಮಾನ ಪಡಿಸುವಳೆಂದೂ ತಿಳಿದುಕೊಳ್ಳುವಳು.

ಇತ್ತಲಾಗಿ ನವೀನಗೋಪಾಲನ ಮಗಳು ಇಷ್ಟು ಐಶ್ವರ್ಯಕ್ಕೆ ಅಧಿಕಾರಿಣಿಯಾಗಿರುವಳೆಂದು ತಿಳಿದು, ಬ್ರಹ್ಮೋಸಮಾಜದಲ್ಲಿ ಪ್ರಚಾರಗೊಂಡ ಕೂಡಲೆ, ಅವಿವಾಹಿತರಾದ ಬ್ರಹ್ಮೋಯುವಕರ ಮಂಡಲಿಯಲ್ಲಿ ವಿಶೇಷ ಗದ್ದಲ ಹುಟ್ಟಿತು. ಆಗ ವಿವಾಹಪ್ರಾರ್ಥಿಗಳಾದ ಬ್ರಹ್ಮೋಯುವಕರು ತಂಡತಂಡವಾಗಿ ಪ್ರತಿದಿನವೂ ನವೀನಗೋಪಾಲನ ಮನೆಯಲ್ಲಿ ಬಂದು ಸೇರುವರು. ಗೃಹಿಣಿಯಾದ ಹೈಮವತಿಯ ಆನಂದಕ್ಕೆ ಪಾರವೇ ಇರದು. ಆ ಆನಂದದಲ್ಲಿ ಅವಳು ನಿತ್ಯವೂ ಮಾಡಬೇಕಾದ ದೇವರ ಪ್ರಾರ್ಥನೆಯನ್ನು ಕೂಡ ಮರೆತುಬಿಡುವಳು. ವಿವಾಹಪ್ರಾರ್ಥಿಯಾಗಿ ಮೊದಲು ಬಂದವನು ಜ್ಯೋತಿಪ್ರಕಾಶ. ಜ್ಯೋತಿಪ್ರಕಾಶನಿಗೂ ಹೈಮವತಿಗೂ ನಡೆದ ಸಂಭಾಷಣೆಯನ್ನು ನಮ್ಮ ಪಾಠಕಮಹಾಶಯರು ಸ್ವಲ್ಪ ಗಮನವಿಟ್ಟು ಕೇಳಬೇಕು. ಜ್ಯೋತಿಪ್ರಕಾಶನು ಬಂದಕೂಡಲೆ ಕುಲುಕ್ಕು ವೈಯಾರಿಯಾದ ಹೈಮವತಿಯು ಅವನ ಕೈಯನ್ನು ಹಿಡಿದು ಕುಲುಕಿ, ಅವನನ್ನು ಒಂದು ಕುರ್ಚಿಯ ಮೇಲೆ ಕುಳ್ಳಿರಿಸಿದಳು. ಜ್ಯೋತಿಪ್ರಕಾಶನು ಸಂಭಾಷಣೆಯ ಆರಂಭದಲ್ಲಿಯೇ, “ತಮ್ಮ ಮಗಳು ಬಂದ ಶುಭವಾರ್ತೆಯನ್ನು ಕೇಳಿ, ಆಕೆಯ ಪರಿಚಯ ಮಾಡಿಕೊಳ್ಳುವುದಕ್ಕೋಸ್ಕರ ನಾನು ಓಡಿಬಂದೆನು” ಎಂದು ಹೇಳಿದನು.

ಆ ಸಮಯದಲ್ಲಿ ದುರ್ಗಾವತಿಯೂ ಅಲ್ಲಿಯೇ ಇದ್ದಳು. ಜ್ಯೋತಿಪ್ರಕಾಶನು ಅವಳ ಕಡೆ ಸ್ವಲ್ಪ ತಿರುಗಿ ನೋಡಿ ನಗುತ್ತಾ "ಈಕೆಯೇ ತಮ್ಮ ಕುಮಾರಿಯೆಂದು ತೋರುತ್ತದೆ, ತಾವು ನನಗೆ ಆಕೆಯ ಪರಿಚಯವನ್ನು ಮಾಡಬೇಕು" ಎಂದು ಹೇಳಿದನು.

ಹೈಮವತಿಯು ಆ ಕೂಡಲೇ ಮಗಳ ಕೈಯನ್ನು ಹಿಡಿದು, ಜ್ಯೋತಿಪ್ರಕಾಶನ ಇದಿರಿಗೆ ಬಂದು ನಿಲ್ಲುವಂತೆ, ಕಣ್ಸನ್ನೆಯ ಮಾಡಿದಳು. ದುರ್ಗಾವತಿಗೆ ಇದಿರಿಗೆಬಂದು ನಿಲ್ಲುವುದಕ್ಕೆ ಅಂಜಿಕೆಯಾದುದು ಅಷ್ಟು ಇಷ್ಟವಿಲ್ಲವೆಂದು ತಿಳಿದು, ಜ್ಯೋತಿಪ್ರಕಾಶನು ಸ್ವಲ್ಪ ನಕ್ಕು, "ತಮ್ಮ ಮಗಳು ಇಷ್ಟು ಲಜ್ಜಾಶೀಲೆಯಾಗಲೇಕೆ?" ಎಂದನು.

ಹೈಮವತಿಯು ಮನಸ್ಸಿನಲ್ಲಿ ಮಗಳ ಮೇಲೆ ರೇಗಿಕೊಂಡು, "ನನ್ನ ಮಗಳಾದ ಮಾತ್ರಕ್ಕೆ ಏನು? ಹೈಗಾಂಡಿನ ಹಿಂದೂಗಳ ಮನೆಯಲ್ಲಿದ್ದು ಪಾಲಿತಳಾದವಳು" ಎಂದು ಹೇಳಿದಳು.

ಜ್ಯೋತಿ:—"ತಮ್ಮ ಮಗಳ ಹೆಸರೇನು?"

ಹೈಮವತಿ:—"ಹೆಸರು ಚೆನ್ನಾಗಿಲ್ಲ; ಕುರುಚಿ ಪೂರ್ಣವಾದುದರಿಂದ, ಅದನ್ನು ಹೇಳುವುದಕ್ಕೆ ನಾಚಿಕೆಯಾಗುವುದು."

ಜ್ಯೋತಿ:—"ಕುರುಚಿ ಪೂರ್ಣವಾಗಿ ಹೇಳುವುದಕ್ಕೆ ಎಷ್ಟು ಕರ್ಕಶವಾಗಿದ್ದರೂ, ಅದು ನೀವೇನೂ ನಾಮಕರಣಮಾಡಿ ಇಟ್ಟ ಹೆಸರಲ್ಲ; ಹಾಗಿರುವಾಗ ಆ ವಿಷಯದಲ್ಲಿ ಲಜ್ಜೆಗೆ ಕಾರಣವೇನು?"

ಹೈಮವತಿಯು ಸ್ವಲ್ಪ ಹಿಂದುಮುಂದು ನೋಡಿ, "ಅವರು ನನ್ನ ಮಗಳಿಗೆ 'ದುರ್ಗಾವತಿ' ಎಂದು ಹೆಸರಿಟ್ಟರು" ಎಂದಳು.

ಈ ಹೆಸರನ್ನು ಕೇಳಿ ಜ್ಯೋತಿಪ್ರಕಾಶನು ಸ್ವಲ್ಪ ನಡುಗಿದವನ ಹಾಗೆ ಘೃಣೆಯ ಅಲ್ಲಾಡಿಸಿ, "ಈ ಹೆಸರು ಕೇವಲ ಕುರುಚಿ ಪೂರ್ಣವಾಗಿರುವುದು ಮಾತ್ರವೇ ಅಲ್ಲ, ಇದು ಘೋರತರವಾದ ಪೌತ್ತಲಿಕತಾ* ಪೂರ್ಣವಾಗಿರುವುದು! ತಾವು ಬೇಗನೆ ಈ ಹೆಸರನ್ನು ತಪ್ಪಿಸಿ, ಬೇರೆ ಹೆಸರನ್ನು ಇಡಬೇಕು. ಈ ಹೆಸರು ಹೇಳಬೇಕಾದರೆ, ನಾಲಗೆ ತಿರುಗದೆ ತೊಡಕುತೊಡಕಾಗುವುದು."

ಹೈಮವತಿ:—"ಹಾಗಾದರೆ, ತಾವು ನನ್ನ ಮಗಳಿಗೆ ಒಂದು ಸೊಗಸಾದ ಹೆಸರನ್ನು ಹೇಳಿ."

* Idolatrousness.

ಜ್ಯೋತಿ:—“ ನನಗೆ ಅಷ್ಟು ಚೆನ್ನಾಗಿ ಗೊತ್ತಾಗುವುದಿಲ್ಲ. ನೀವು ಒಂದು ಹೆಸರನ್ನು ಹೇಳಿದರೆ ಅದು ಸರಿಯಾದುದೇ, ಅಲ್ಲವೇ, ಎಂಬುದನ್ನು ಹೇಳಬಲ್ಲೆನು. ಅದಲ್ಲದೆ ತಮ್ಮ ಇಂತಹ ಸುಂದರಿಯಾದ ಮಗಳಿಗೆ ತಕ್ಕದೊಂದು ಹೆಸರನ್ನು ಹಠಾತ್ತಾಗಿ ಹೇಳುವುದಕ್ಕೆ ತೋಚುವುದಿಲ್ಲ. ನೀವು ಒಂದು ಹೆಸರನ್ನು ಗೊತ್ತು ಮಾಡಬೇಕು ”

ಹೈಮವತಿಯು ಮಗಳ ಸೌಂದರ್ಯದ ಸುಖ್ಯಾತಿಯಿಂದುಂಟಾದ ಆಹ್ಲಾದದಿಂದ ಮೆಚ್ಚಿಗೆಯುಳ್ಳವಳಾಗಿ, “ ಒಳ್ಳೆಯದು—‘ ವಿನೋದಿನೀ ’ ಎಂದು ಹೆಸರಿಟ್ಟರೆ ಹೇಗೆ ಇರುವುದು ? ಹೇಳಿರಿ ” ಎಂದಳು.

ಜ್ಯೋತಿಪ್ರಕಾಶನು ಸ್ವಲ್ಪ ಹೊತ್ತು ಯೋಚಿಸಿ, “ ವಿನೋದಿನೀ ಎಂಬ ಹೆಸರು ಬಹಳ ಚೆನ್ನಾಗಿರುವುದು, ತಮ್ಮ ಮಗಳು ಯಥಾರ್ಥವಾಗಿಯೂ ವಿನೋದಿನಿಯೇ ಸರಿ ” ಎಂದನು.

ದುರ್ಗಾವತಿಯು ತನ್ನ ಇದಿರಿಗೆ ತನ್ನ ವಿಚಾರವಾಗಿ ತನ್ನ ತಾಯಿಯ ಸಂಗಡ ಒಬ್ಬ ಅಪರಿಚಿತನಾದ ಯುವಕನು ಹೀಗೆ ಮಾತನಾಡಿದುದನ್ನು ಕೇಳಿ, ಲಜ್ಜೆಯಿಂದ ಮೃತಪ್ರಾಯಳಾದಳು. ಮತ್ತು ತಲೆತಗ್ಗಿದವಳಾಗಿ, ಮನಸ್ಸಿನಲ್ಲಿ ಅನೇಕ ದೇವದೇವಿಯರನ್ನು ಸ್ಮರಿಸಿಕೊಂಡು ತನ್ನ ಪ್ರಾಣ ಹೋಗಬೇಕೆಂದು ಹೇಳಿಕೊಳ್ಳುತ್ತಲಿದ್ದಳು. ಅವಳ ಅಭಿಪ್ರಾಯದಲ್ಲಿ ಇದಕ್ಕಿಂತಲೂ ಅಸಹ್ಯವಾದ ಲಜ್ಜಾಸ್ಪದವಾದುದು ಮತ್ತಾವುದೂ ಇರಲಾರದೆಂದು ತಿಳಿದಿದ್ದಳು. ಆದರೆ ಇತ್ತಲಾಗಿ ಹೈಮವತಿಯು ಒಬ್ಬ ಸುಶಿಕ್ಷಿತನಾದ ಯುವಕನ ಬಾಯಿಯಿಂದ ಈ ಪ್ರಕಾರ ತನ್ನ ಮಗಳ ರೂಪದ ಖ್ಯಾತಿಯನ್ನು ಕೇಳಿ, ಸ್ವರ್ಗಸುಖವನ್ನಾದರೂ ಬಿಡುವುದಕ್ಕೆ ಸಿದ್ಧಳಾಗಿದ್ದಳು.

ಜ್ಯೋತಿಪ್ರಕಾಶನು:—“ ಈ ಕಡವೆ ಒಳ್ಳೆಯದು, ನಿಮ್ಮ ಮಗಳು ಎಷ್ಟರ ಮಟ್ಟಿಗೆ ಓದಿರುವಳು ?”

ಹೈಮವತಿಗೆ ಈಗ ತಂಟೆಗೆ ಬಂತು. ಏಕೆಂದರೆ, ದುರ್ಗಾವತಿಗೆ ಅಕ್ಷರಜ್ಞಾನವೂ ಇರಲಿಲ್ಲ; ಅದನ್ನವಳು ತಿಳಿದಿದ್ದಳು. ಆದರೆ ಹೊರಗೆ ತಿಳಿಸದೆ, ತನಗೆ ಆ ವಿಷಯವು ಇನ್ನೂ ಚೆನ್ನಾಗಿ ಗೊತ್ತಿಲ್ಲವೆಂದು ಹೇಳಿದಳು.

ಜ್ಯೋತಿ:—“ ಯುನಿವರ್ಸಿಟೀ ಪರೀಕ್ಷೆ ಯಾವುದಾದರೂ ಆಗಿರುವುದೇ ? ”

ಹೈಮವತಿ:—(ಸ್ವಲ್ಪ ನಕ್ಕು) “ ಇಲ್ಲ. ”

ಜ್ಯೋತಿ:—(ಒಂದು ದೀರ್ಘ ನಿಟ್ಟುಸಿರನ್ನು ಬಿಟ್ಟು) “ ಈಶ್ವರನು ಯಾರನ್ನೂ ಸರ್ವಾಂಗಸುಂದರನಾಗಿ ಮಾಡಿಲ್ಲ. ತಮ್ಮ ಇಂತಹ ಸೌಂದರ್ಯಸಂಪನ್ನೆಯಾದ

ಮಗಳು ಸುಶಿಕ್ಷಿತಳಾದರೆ, ನಿಶ್ಚಯವಾಗಿಯೂ ಒಂದು ರಮಣೀರತ್ನವಾಗುವಳು. ಅದಕ್ಕೆ ಇನ್ನೂ ಬಹಳ ಕಾಲವಿರುವುದು. ತಾವು ಅವಳಿಗೆ ಚೆನ್ನಾಗಿ ವಿದ್ಯೆಯನ್ನು ಕಲಿಸಿದರೆ, ಈ ಕುಸಂಸ್ಕಾರ, ಈ ಲಜ್ಜೆ, ಮತ್ತು ಇಂತಹ ಅಸಾಮಾಜಿಕಸ್ವಭಾವ, ಇವೇ ಮುಂತಾದುವೆಲ್ಲಾ ದೂರವಾಗಿ ಹೋಗುವುವು. "

ಹೈಮವತಿ:—"ಆ ವಿದ್ಯೆಯನ್ನು ಕಲಿಸುವ ಭಾರವು ಅವಳ ಮುಂದಿನ ಗಂಡನ ಮೇಲೆ ಇರುವುದು. ಉಪಯುಕ್ತನಾದ ವರನು ಸಿಕ್ಕಿದರೆ, ಕೂಡಲೆ ಅವಳಿಗೆ ಮದುವೆಮಾಡಿಬಿಡುವೆನು. "

ಜ್ಯೋತಿಪ್ರಕಾಶನು ಆಹ್ಲಾದದಿಂದ "ಅದು ಒಳ್ಳೆಯದಾದ ಯುಕ್ತಿಯೇ ಅಹುದು. ತಮ್ಮ ಮಗಳಿಗೆ ಎಂತಹ ವರನು ಬೇಕಾದರೂ ಸಿಕ್ಕುವನು. ವರನಿಗೆ ಅಭಾವವಿಲ್ಲ, ನೂರಾರು ಅವಿವಾಹಿತರಾದ ಸುಶಿಕ್ಷಿತರಾದ ಯುವಕರು ನಿಮ್ಮ ಮಗಳ ಕೈಹಿಡಿಯುವುದಕ್ಕೆ ಲಾಲಾಯಿತರಾಗಿರುವರು. ನಿಮ್ಮ ಮಗಳನ್ನು ಪಡೆಯುವವನ ಹಾಗೆ ಸೌಭಾಗ್ಯಶಾಲಿಯು ಈ ಪೃಥ್ವಿಯಲ್ಲಿ ಯಾರೂ ಇರರೆಂದು ತೋರುವುದು" ಎಂದು ಹೇಳಿದನು.

ಈ ಮಾತಿನಿಂದ ಹೈಮವತಿಯ ಆನಂದವು ಮಿತಿಮೀರಿ ಹೋಯಿತು. ಅಕಸ್ಮಾತ್ತಾಗಿ ಹೈಮವತಿಯ ಹೃದಯವು ಅಹಂಕಾರದಿಂದುಬ್ಬಿತು. ಏಕೆಂದರೆ ರೂಪವೇನು, ಧನವೇನು, ವಿದ್ಯೆಯೇನು, ಸಕಲ ವಿಷಯಗಳಲ್ಲಿಯೂ ಜ್ಯೋತಿಪ್ರಕಾಶನೇ ಅವಳ ಮಗಳಿಗೆಗೆ ತಕ್ಕ ಪಾತ್ರನಾಗಿದ್ದನು. ಆದುದರಿಂದ ಅಂತಹವನ ಬಾಯಿಯಿಂದಲೇ ಆಹ್ಲಾದವೂ ಅಹಂಕಾರವೂ ಹುಟ್ಟುವುದರಲ್ಲಿ ಅನುಮಾನವೇ ಇಲ್ಲ.

ಹೈಮವತಿಯು ಆಹ್ಲಾದದಿಂದ, "ನನ್ನ ಮಗಳು ನಿಮ್ಮನ್ನು ಮೆಚ್ಚಿ ವರಿಸುವ ಹಾಗೆ ಹೇಗಾದರೂ ಮಾಡಿ ಪ್ರಯತ್ನಪಡುವೆನು" ಎಂದು ಹೇಳಿಬಿಟ್ಟಳು.

ಆ ಮಾತನ್ನು ಕೇಳಿ ಜ್ಯೋತಿಪ್ರಕಾಶನು ಕೂಡ ಆಹ್ಲಾದದಿಂದ ಉನ್ಮತ್ತನಾಗಿ "ನಾನು ತಮಗೆ ನನ್ನ ಆಂತರ್ಯವಾದ ಧನ್ಯವಾದವನ್ನು * ಹೇಳುವುದಕ್ಕೆ ಮಾತಿಲ್ಲದವನಾಗಿರುವೆನು" ಎಂದು ಹೇಳಿದನು.

ಇತ್ತಲಾಗಿ ದುರ್ಗಾವತಿಯ ಮನಸ್ಸಿನಲ್ಲಿ ಏನೇನು ನಡೆಯುತ್ತಲಿತ್ತೋ ಅದನ್ನೆಲ್ಲಾ ನಾವು ವರ್ಣಿಸಲಾರೆವು. ದುರ್ಗಾವತಿಯು ಒಂದೊಂದು ಸಲವೆ, ಇದೇನು ಸ್ವಪ್ನವೋ, ಅಥವಾ ನಿಜವೋ, ಎಂದು ಮನಸ್ಸಿನಲ್ಲಿ ಹೇಳಿಕೊಳ್ಳುತ್ತಿದ್ದಳು. ಜ್ಯೋತಿ

---

* Thanks.

ಪ್ರಕಾಶನು ಈ ಪ್ರಕಾರ ಮಾತುಕಥೆ ನಡೆದಮೇಲೆ ಅಪ್ಪಣೆ ತೆಗೆದುಕೊಂಡು ಹೋದನು. ಹೊರಟುಹೋಗುವಾಗ ಮೂರನೆಯ ದಿನ ಎಷ್ಟು ಹೊತ್ತಿಗೆ ಬರಬೇಕೋ ಅದನ್ನೂ ತಿಳಿದುಕೊಂಡು ಹೋದನು.

## ಮೂರನೆಯ ಪರಿಚ್ಛೇದ.

ಈ ಪ್ರಕಾರ ಪ್ರತಿದಿನವೂ ವಿವಾಹಪ್ರಾರ್ಥಿಯಾದವರು ತಂಡತಂಡವಾಗಿ ಬರಲಾರಂಭಿಸಿದರು. ಆದರೆ ದುರ್ಗಾವತಿಯು ಪ್ರಾಣ ಹೋದರೂ, ಅವರೆದುರಿಗೆ ಬಂದು ಕಾಣಿಸಿಕೊಳ್ಳುತ್ತಿರಲಿಲ್ಲ. ಏನು ಮಾಡಿದರೂ ಅವಳು ಹೊರಕ್ಕೆ ಹೊರಡಳು. ಆದುದರಿಂದ ಅವರು ಎಷ್ಟು ಉತ್ಸುಕರಾಗಿ ಎಷ್ಟು ಆನಂದದಿಂದ ಮನೆಗೆ ಪ್ರವೇಶ ಮಾಡುವರೋ, ಅದಕ್ಕಿಂತಲೂ ಹೆಚ್ಚಾದ ನಿರಾಶೆಯಿಂದಲೂ ವ್ಯಸನದಿಂದಲೂ ಮನೆಯಿಂದ ಹಿಂದಿರುಗಿ ಹೊರಟು ಹೋಗುವರು. ದುರ್ಗಾವತಿಯು ಶಾರೀರಕವಾದ ಆಲಸ್ಯದ ನೆವಮಾಡಿಕೊಂಡು ಹಾಸಿಗೆಯ ಮೇಲೆ ಮಲಗಿರುತ್ತ ಅಳುತ್ತಿರುವಳು. ಮತ್ತು ಪ್ರತಿ ಮುಹೂರ್ತದಲ್ಲಿಯೂ ಒಬ್ಬನನ್ನು ಕುತೂಹಲದಿಂದ ಇದಿರುನೋಡುತ್ತಲಿರುವಳು. ಅವಳು ಮನಸ್ಸಿನಲ್ಲಿ, "ನನ್ನ ಜೀವನ ಸರ್ವಸ್ವನೇ! ನೀನೆಲ್ಲಿರುವೆ? ಒಂದು ತಡವೆ ಬಂದು ಹೋಗು. ನಿನ್ನನ್ನು ಹೊರತು ನನ್ನನ್ನು ಮತ್ತಾರು ಈ ನರಕದಿಂದುದ್ಧಾರ ಮಾಡಲಾಪರು? ನಾನು ಮೃತ್ಯುವಿಗೆ ಹೆದರುವುದಿಲ್ಲ. ಕೇವಲ ನಿನ್ನ ಮೇಲಿನ ಆಶೆಯಿಂದ ಈ ಪ್ರಾಣವನ್ನು ಇದುವರೆಗೂ ಉಳಿಸಿ ಇಟ್ಟುಕೊಂಡಿರುವೆನು." ಎಂದೆಂದುಕೊಳ್ಳುವಳು.

ದುರ್ಗಾವತಿಯ ಕಣ್ಣಿಗೆ ನಿದ್ದೆ ಹತ್ತದು; ಭಯದಿಂದ ಅವಳಿಗೆ ನಿದ್ದೆ ಹತ್ತದು. ಸ್ವಲ್ಪ ಜಂಪುಹಿಡಿದು ಕಣ್ಣುಮುಚ್ಚುತ್ತಲೆ, ಕನಸಿನಲ್ಲಿ ಖಗೇಂದ್ರವನ್ನು ಕಾಣುವಳು; ಕೂಡಲೆ ಎಚ್ಚರವಾಗುವಳು. ಅವಳಿಗೆ ಆಹಾರದಲ್ಲಿ ರುಚಿ ತಪ್ಪಿತು ಅವಳಿಗೆ ಆಲಸ್ಯವೆಂದು ಅವಳ ತಾಯಿಯು ಏನೇನೋ ಉಪಾಯದಿಂದ ಆಹಾರವನ್ನು ಕೊಡುವಳು. ಮೊದಲು ಅವಳ ಆಲಸ್ಯಕ್ಕೋಸ್ಕರ ತಾಯಿತಂದೆಗಳು ಉದ್ವಿಗ್ನರಾದರು. ಕಡೆಗೆ ಅವರಿಬ್ಬರೂ ಯೋಚಿಸಿ, ಹೆಣ್ಣಿಗೆ ಮದುವೆ ಮಾಡಿದರೆ, ಆಲಸ್ಯವು ಹೋಗುವುದೆಂದು ಸ್ಥಿರಮಾಡಿ ಕೊಂಡರು. ಹೆಣ್ಣು ಮೆಚ್ಚುವ ವರನನ್ನು ಹುಡುಕಬೇಕಾದ ಕಷ್ಟವೂ ಅವರಿಗೆ ಇರಲಿಲ್ಲ. ಜ್ಯೋತಿಪ್ರಕಾಶನನ್ನು ನೋಡಿದ ಮೇಲೆ ಕೃಪುವತಿಯು ಬೇರೆ

ಮತ್ತಾರನ್ನೂ ಕಣ್ಣೆತ್ತಿ ನೋಡಲಿಲ್ಲ. ಜ್ಯೋತಿಪ್ರಕಾಶನನ್ನು ಬಿಟ್ಟರೆ, ಹೆಣ್ಣಿಗೆ ಸರಿಯಾದ ವರನಾರೂ ಇಲ್ಲ. ಆದುದರಿಂದ ನವೀನಗೋಪಾಲನೂ ಹೈಮವತಿಯೂ ಚರ್ಚೆ ಮಾಡಿ, ಜ್ಯೋತಿಪ್ರಕಾಶನಿಗೇ ಹೆಣ್ಣನ್ನು ಕೊಡಬೇಕೆಂದು ಸ್ಥಿರಮಾಡಿಕೊಂಡರು. ಅದುಕಾರಣ ಅಂದುಮೊದಲ್ಗೊಂಡು ಬೇರೆ ವಿವಾಹಪ್ರಾರ್ಥಿಗಳು ಬರುವುದು ನಿಂತುಹೋಯಿತು. ಕೇವಲ ಜ್ಯೋತಿಪ್ರಕಾಶನೊಬ್ಬನಿಗೆ ಮಾತ್ರ ಬರುವುದಕ್ಕೆ ಅಡ್ಡಿ ಇರಲಿಲ್ಲ. ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ, ರಾತ್ರಿ, ಯಾವಾಗ ಬೇಕಾದರೂ ಅವನು ಮನೆಗೆ ಬರುತ್ತಲಿರುವನು.

ಇತ್ತಲಾಗಿ ಅನಾಹಾರದಿಂದಲೂ, ಅನಿದ್ರೆಯಿಂದಲೂ, ಭಯದಿಂದಲೂ, ಆಶ್ಚರ್ಯದಿಂದಲೂ, ಚಿಂತೆಯಿಂದಲೂ, ದುರ್ಗಾವತಿಯ ಮಸ್ತಿಷ್ಕವು ಕ್ರಮವಾಗಿ ವಿಕೃತವಾಗಲಾರಂಭಿಸಿತು. ಹೀಗೆ ವಿಕೃತವಾಗುವ ಕಾರ್ಯವು ಗೋಚರವಿಲ್ಲದೆ ಸ್ವಲ್ಪಸ್ವಲ್ಪವಾಗಿ ಕ್ರಮವಾಗಿ ನಡೆಯುತ್ತ ಬಂದುದರಿಂದ, ಯಾರ ದೃಷ್ಟಿಯೂ ಅತ್ತಕಡೆ ಬೀಳಲಿಲ್ಲ. ಒಂದು ದಿನ ಜ್ಯೋತಿಪ್ರಕಾಶನು ದುರ್ಗಾವತಿಯನ್ನು ನೋಡುವುದಕ್ಕೆ ಬಂದಿದ್ದಾಗ, ದುರ್ಗಾವತಿಯು ನಗುತ್ತ ನಗುತ್ತ ಚಿಕ್ಕಮನೆಯಿಂದ ಹೊರಗೆ ಹೊರಟುಹೋದಳು. ಆ ನಗುವು ಸ್ವಾಭಾವಿಕವಾದುದೋ ಅಥವಾ ಅಸ್ವಾಭಾವಿಕವಾದುದೋ, ಅದನ್ನು ಕುರಿತು ಯಾರು ಯೋಚಿಸಲಿಲ್ಲ. ಹೈಮವತಿಯು ಆ ನಗುವನ್ನು ಕಂಡು ವಿಶೇಷ ಆನಂದಿತಳಾದಳು. ಏಕೆಂದರೆ, ಅವಳು ಆ ನಗುವನ್ನು ನೋಡಿ ತನ್ನ ಸ್ವಂತ ಮನಸ್ಸಿನ ಭಾವದಂತೆ ಅರ್ಥಮಾಡಿಕೊಂಡಳು. ಈ ನಗುವೇ ದುರ್ಗಾವತಿಯ ಸರ್ವನಾಶಕ್ಕೆ ಮೂಲವಾಯಿತು. ಮಾರನೆಯ ದಿನವೇ ದುರ್ಗಾವತಿಯನ್ನು ಜ್ಯೋತಿಪ್ರಕಾಶನಿಗೆ ಕೊಟ್ಟು ಮದುವೆಯಾಗಬೇಕೆಂದು ನಿಷ್ಕರ್ಷೆಯಾಯಿತು.

ಮಾರನೆಯ ದಿನ ಪ್ರಾತಃಕಾಲದಿಂದ ನವೀನಗೋಪಾಲನ ಮನೆಯು ಆನಂದೋತ್ಸವಗಳಿಂದ ಪರಿಪೂರ್ಣವಾಯಿತು. ಬ್ರಹ್ಮೋಸಮಾಜಕ್ಕೆ ಸೇರಿದ ಯುವಕಯುವತಿಯರು ಮಹಾನಂದದಿಂದ ದಳದಳವಾಗಿ ಅವನ ಮನೆಗೆ ಬರಲಾರಂಭಿಸಿದರು. ಅವರ ನಾನಾಜಾತೀಯ ನಾನಾ ವರ್ಣಗಳ, ನಾನಾ ಫ್ಯಾಷನ್* (ನಾನಾ ಭಾವದ) ಉಡುವುಗಳನ್ನು ನೋಡಿದರೆ, ಆಶ್ಚರ್ಯವಾಗುತ್ತಲಿತ್ತು. ಅನೇಕ ಮಂಗಳವಾದ್ಯಗಳಿಗೆ ಪ್ರತಿಯಾಗಿ, ಉಚ್ಚವಾದ ಮಧುರವಾದ ಹಾಸ್ಯಧ್ವನಿಯಿಂದ ಆ ಗೃಹವು ಪ್ರತಿಧ್ವನಿತವಾಗುತಲಿತ್ತು. ದುರ್ಗಾವತಿಯು ಕುಳಿತಿದ್ದ ಮನೆಯಲ್ಲಿ ಸುಂದರಿಯರ ಗುಂಪು ಸೇರಿರುವುದು. ಎಲ್ಲರೂ ಸುಂದರಸುಂದರವಾದ ವೇಷಭೂಷಣಗಳಿಂದ ಭೂಷಿತರಾಗಿದ್ದರು. ಆದರೆ ದುರ್ಗಾವತಿಗೆ ಇದುವರೆಗೂ ಸಮಯೋಚಿತವಾದ ಉಡುಗೆತೊಡುಗೆಗಳು ಇಟ್ಟಿ

ರಲಿಲ್ಲ. ಆದುದರಿಂದ ಹೆಂಗಸರೆಲ್ಲರೂ ಹಾಸ್ಯಮಾಡಲಾರಂಭಿಸಿದರು. ಒಬ್ಬಳು ಅವಳಿಗೋಸ್ಕರ ಪಶ್ಚಾತ್ತಾಪಪಟ್ಟಳು. ಅಷ್ಟರೊಳಗೆ ಹೈಮವತಿಯು ಬೇಗಬೇಗನೆ ದುರ್ಗಾವತಿಯ ನೂತನವಾದ ತೊಡುಗೆಗಳನ್ನೆಲ್ಲಾ ತಂದು, ಅವನ್ನೆಲ್ಲಾ ಅವಳಿಗೆ ತೊಡಿಸುವುದಕ್ಕೆ ಪ್ರಾರಂಭಮಾಡಿದಳು. ದುರ್ಗಾವತಿಗೆ ಈಗ ಭಯ, ಲಜ್ಜೆ, ಚಿಂತೆ ಆಶ್ಚರ್ಯ ಮುಂತಾವುದಾದರೂ ಇರಲಿಲ್ಲ. ಹಿಂದೂಗಳ ಮನೆಯಲ್ಲಿ ಹೀಗೆ ಆಕಸ್ಮಿಕವಾದ ಪರಿವರ್ತನೆ ಉಂಟಾಗಿದ್ದರೆ, ಎಲ್ಲರ ದೃಷ್ಟಿಯೂ ಅದರ ಮೇಲೆ ಬೀಳುತ್ತಲಿತ್ತು. ಆದರೆ ಬ್ರಹ್ಮೋಪಾಸಕರುಗಳ ಮನೆಯಲ್ಲಿ ಇದಾವುದೂ ಹೆಚ್ಚು ವಿಷಯವಲ್ಲ; ಅದು ವಿಚಾರಮಾಡತಕ್ಕ ವಿಷಯವಾಗಿ ಸಹ ಇರಲಿಲ್ಲ. ಈ ದಿನ ದುರ್ಗಾವತಿಯ ಸ್ವಲ್ಪ ವಿಸ್ತೃತವಾದ ಎದೆ ಮುದ್ದಿನಲ್ಲಿ ಬಹು ದಿನದಿಂದ ಅಭಿಲಷಿತವಾಗಿದ್ದ ಪ್ರಿಯನೊಡನೆ ಮಿಲನದ ಬಯಕೆಯು ಹೆಚ್ಚಿತ್ತು. ಈ ಸಮಯದಲ್ಲಿ ಭಯ, ಲಜ್ಜೆ, ವಿಸ್ಮಯ ಮುಂತಾದ, ನಾರೀಜಾತಿಗೆ ಉಚಿತವಾದ ಗುಣಗಳನ್ನು ತೊರೆದಿದ್ದ ದುರ್ಗಾವತಿಯು ನಗುನಗುತ್ತ ತಾಯಿಯನ್ನು ಕುರಿತು "ನನ್ನ [illegible] ಯಾವಾಗ ಬರುವನೆ, ಅಮ್ಮಾ!" ಎಂದು ಕೇಳಿದಳು.

ಅತ್ತ ಸ್ತ್ರೀಯರಲ್ಲಿ ಸುಂದರಿಯರ ಮುಖದಲ್ಲಿ ವೀಣೆಯನ್ನು ಧಿಕ್ಕರಿಸುವ ಅನುಚ್ಚವಾದ ನಗುವಿನ ಧ್ವನಿಯೊಂದು ಎದ್ದಿತು. ಅನೇಕರು ಅಸ್ಪಷ್ಟವಾಗಿ ಹಾಸ್ಯದ ಗುಡುಗಾಟಗಳನ್ನು ಮಾಡಲಾರಂಭಿಸಿದರು. ಮಗಳ ಬಾಯಿಯಿಂದ ಇಂತಹ ಮಾತನ್ನು ಕೇಳಿ, ಹೈಮವತಿಯು ಆನಂದಕ್ಕೆ ಪಾರವಿರಲಿಲ್ಲ. ತನ್ನ ಸಂಸರ್ಗದಿಂದ ಇಷ್ಟು ಸ್ವಲ್ಪ ಕಾಲದಲ್ಲಿಯೇ ಮಗಳ ಸ್ವಭಾವದಲ್ಲಿ ಇಂತಹ ಪರಿವರ್ತನೆಯುಂಟಾದುದಕ್ಕೆ ತನ್ನನ್ನು ತಾನೇ ಮನಸ್ಸಿನಲ್ಲಿ ಹೊಗಳಿಕೊಂಡಳು. ಮತ್ತು ಮಗಳ ಮುಖವನ್ನು ಮುದ್ದಿಟ್ಟುಕೊಂಡು "ಈಗಲೇ ಬರುವನೇ—ವಿನೋದ! ಇದೇನು, ವರನಿಗೋಸ್ಕರ ಇಷ್ಟು ಆತುರವುಳ್ಳವಳಾಗಿರುವೆ?" ಎಂದಳು.

ದುರ್ಗಾವತಿಗೆ ಅವಳ ಪೌತ್ತಲಿಕ ಹೆಸರಿಗೆ ಪ್ರತಿಯಾಗಿ ಈಗ 'ವಿನೋದಿನೀ' ಎಂದು ಹೆಸರಿಟ್ಟಿತ್ತು. ನಾವು ಈಗಿನಿಂದ ಮುಂದಕ್ಕೆ 'ದುರ್ಗಾವತಿ' ಎಂಬ ಹೆಸರನ್ನು ಬಿಟ್ಟು ಅವಳನ್ನು 'ವಿನೋದಿನೀ' ಎಂಬ ಹೆಸರಿನಿಂದಲೇ ಕರೆಯುವೆವು. ವಿನೋದಿನಿಗೆ ಈಗ ಆ ನಗುವು ಇಲ್ಲ. ವಿನೋದಿನಿಯು ಈ ಕಡವೆ ಕಾತರಕಂಠಳಾಗಿ, "ನಾನು ಅವನನ್ನು ಎಷ್ಟು ಹೊತ್ತಿಗೆ ನೋಡುವೆನೆ, ತಾಯಿ?" ಎಂದಳು.

ಹೀಗೆ ಹೇಳುತ್ತ ಹೇಳುತ್ತ ವಿನೋದಿನಿಯು ಅತ್ತುಬಿಟ್ಟಳು. ಮುಂದೆ ಗಂಡನಾಗುವವನ ಮೇಲೆ ಹುಡುಗಿಗೆ ಈ ಪ್ರಕಾರ ಪ್ರಗಾಢವಾದ ಪ್ರಣಯವುಂಟಾಗಿರುವ

ಯೋಚಿಸಿ, ಹೈಮವತಿಯ ಮೈಯಲ್ಲಿ ಆನಂದವು ಹಿಡಿಯಲಾರದೆ ಹೋಯಿತು! ಈ ಸಮಯದಲ್ಲಿ ಒಬ್ಬ ಸುಂದರಿಯು ಮತ್ತೊಬ್ಬ ಸುಂದರಿಯ ಭುಜವನ್ನು ಮುಟ್ಟಿ, ವೈದ್ಯುತಿಕ ಕಟಾಕ್ಷದ ಸಂಜ್ಞೆಯಿಂದ, "ಎಲ್ಲೆ ವಿದ್ಯುಲ್ಲತೆ! ನೀನೇನೋ ಪ್ರಣಯ ಪ್ರಣಯವೆಂದು ಹೇಳುತ್ತ, ಪ್ರೀತಿಸುವುದಾಗಿ ಹೇಳುತ್ತಲಿದೆಯಷ್ಟೆ? ಪ್ರಣಯವಾವುದೋ ಕಣ್ಣಾರೆ ನೋಡೆ—ಇವಳಿಗೂ ವರನಿಗೂ ಎಷ್ಟು ದಿನದ ಪರಿಚಯವೆಂದು ತಿಳಿದಿರುವೆ? ನೋಡು" ಎಂದಳು.

ವಿನೋದಿನಿಯು ಕಣ್ಣೊರಸಿಕೊಂಡು ಒಂದು ಪ್ರಕಾಶವಾದ ಉದಾಸೀನಭಾವದಿಂದ ಆ ಸುಂದರಿಯನ್ನು ಬಿರುಗಣ್ಣಿನಿಂದ ನೋಡಿದಳು. ವಿದ್ಯುಲ್ಲತೆಯೆಂಬ ಹೆಸರುಳ್ಳ ಸುಂದರಿಯು ಪ್ರಥಮೋಕ್ತವಾದ ಸುಂದರಿಯನ್ನುದ್ದೇಶಿಸಿ, "ನೋಡೆ, ಹೇಮಪ್ರಭೆ! ಕನ್ನೆಯು ಹೇಗೆ ನಿನ್ನ ಕಡೆ ತಿರುಗಿನೋಡುವಳು!" ಎಂದು ಹೇಳಿದಳು.

ಹೇಮಪ್ರಭೆಯು ಆಗ ವಿಸ್ಮಿತಳಾಗಿ, "ಇದೇನೆ? ಪ್ರಣಯಿನಿಯ ನೋಟವೇ?" ಎಂದಳು.

ಈ ಸಮಯದಲ್ಲಿ ವಿನೋದಿನಿಯು ಚೀತ್ಕಾರಮಾಡುತ್ತ, "ನನಗೆ ಬೇಗನೆ ಉಡುಪನ್ನಿಳಿಸಿಬಿಡು, ವರನು ಹಿಂದಿರುಗಿ ಹೋಗಿಬಿಡುವನು" ಎಂದು ಹೇಳಿದಳು.

ವಿನೋದಿನಿಯ ಚೀತ್ಕಾರವನ್ನು ಕೇಳಿ ಅನೇಕ ಸುಂದರಿಯರು, "ಇದೇನು ಒರಟುತನ! ನಾಗರೀಕವಿಲ್ಲದ ಹೆಣ್ಣು!" ಎಂದು ಹೇಳಿ ಮೂಗುಗಳನ್ನು ಆಕುಂಚಿತವಾಗಿ ಮಾಡಿಕೊಂಡು, ಆ ಚಿಕ್ಕಮನೆಯನ್ನು ಬಿಟ್ಟು ಎದ್ದು ಹೊರಟುಹೋದರು. ಸ್ವಲ್ಪ ಹೊತ್ತಿನಲ್ಲಿಯೇ 'ವರನು ಬಂದನು, ವರನು ಬಂದನು' ಎಂದು ಗದ್ದಲವಾಗಿ, ಆ ಗದ್ದಲದೊಂದಿಗೆ ಜ್ಯೋತಿಪ್ರಕಾಶನು ಆ ಚಿಕ್ಕಮನೆಗೆ ಪ್ರವೇಶಮಾಡಿದನು. ವಿನೋದಿನಿಯು ಆತುರದಿಂದ ಅವನನ್ನು ದೃಷ್ಟಿಸಿ ನೋಡಿದಳು. ಆದರೆ ಉತ್ತರಕ್ಷಣದಲ್ಲಿಯೇ ತಲೆಯನ್ನು ತಗ್ಗಿಸಿಕೊಂಡಳು. ಆಗ ತಗ್ಗಿಸಿದ ತಲೆಯನ್ನು ಪುನಃ ಎತ್ತಲಿಲ್ಲ. ಲಜ್ಜೆಯೇ ಇದಕ್ಕೆ ಕಾರಣವೆಂದು ತಿಳಿದುಕೊಂಡು, ಅಲ್ಲಿದ್ದ ರಮಣಿಯರೆಲ್ಲರೂ ಹಾಸ್ಯಪರಿಹಾಸ್ಯ ಮಾಡತೊಡಗಿದರು. ಆದರೆ ವಿನೋದಿನಿಯು ಬಾಯಲ್ಲಿ ಪುನಃ ಮಾತು ಹೊರಡಲಿಲ್ಲ. ಆಗ ಮಾತು ನಿಂತುಹೋದ ಮೇಲೆ ಪುನಃ ಯಾರೂ ಅವಳು ಮಾತನಾಡಿದುದನ್ನು ಕೇಳಲಿಲ್ಲ.

ಇತ್ತಲಾಗಿ ವಿವಾಹದ ಪ್ರಯತ್ನ ಜರುಗುತ್ತಲಿತ್ತು. ಲಗ್ನಕ್ಕೆ ಕರೆಯಲ್ಪಟ್ಟ ದೊಡ್ಡದೊಡ್ಡ ಮನೆಯ ಹೆಂಗಸರೂ ಗಂಡಸರೂ ಮಂದಿರದಲ್ಲಿ ಬಂದು ನೆರೆದರು ಮದುವೆಯ ಹೆಣ್ಣು ಗಂಡು ಬರುವುದನ್ನು ನಿರೀಕ್ಷಿಸಿಕೊಂಡು ಕುಳಿತಿದ್ದರು,

ಬರುವವರೆಲ್ಲರೂ ಬಂದಿರುವ ಸಮಾಚಾರವು ಬಂದಕೂಡಲೆ, ಎಲ್ಲರೂ ಮಹಾನಂದದಿಂದ ವರಕನ್ಯೆಯರನ್ನು ಸಂಗಡ ಕರೆದುಕೊಂಡು, ಮಂದಿರಕ್ಕೆ ಬಂದು ಸೇರಿದರು. ಈ ದಿನ ಬ್ರಹ್ಮೋಮತದ ಪ್ರಥಮಾಚಾರ್ಯರೇ ಸ್ವಯಂ ಬಂದು, ವರಕನ್ಯೆಯರನ್ನು ಇದಿರ್ಗೊಂಡು ಮಂದಿರಕ್ಕೆ ಕರೆದುಕೊಂಡು ಹೋದರು. ಮೊದಲು ಪ್ರಾರ್ಥನೆ ಆಯಿತು. ಪ್ರಾರ್ಥನೆಯಾದಮೇಲೆ ಸಂಗೀತ, ಸಂಗೀತವಾದಮೇಲೆ ಆಚಾರ್ಯರ ವಕ್ತೃತೆ*, ಆ ವಕ್ತೃತೆಯಾದಮೇಲೆ ವರಕನ್ನೆಯರಿಗೆ ಅನೇಕ ಉಪದೇಶವಾಯಿತು. ಕಡೆಗೆ ಆಚಾರ್ಯರ ಆಶೀರ್ವಾದದೊಂದಿಗೆ ಆ ವಕ್ತೃತೆಯು ಪೂರೈಸಿತು. ಕಟ್ಟಕಡೆಗೆ ವರಕನ್ನೆಯರು ಪ್ರತಿಜ್ಞಾಬದ್ಧರಾದ ಮೇಲೆ, ಸಂಬಂಧಿಮಾಲೆಗಳು ಪರಿವರ್ತಿತವಾದುವು. ಈ ಪ್ರಕಾರ ಆ ದಿನದ ವಿವಾಹದ ಕಾರ್ಯವು ಪೂರ್ತಿಯಾಯಿತು.

ವಿನೋದಿನಿಯು ಸೂತ್ರದ ಬೊಂಬೆಯಹಾಗೆ ಈ ಕೆಲಸ ಕಾರ್ಯಗಳನ್ನು ನಡೆಯಿಸಿದಳು. ಏನಾಯಿತೋ ಅವಳದನ್ನು ಅರಿಯಲು ಸಮರ್ಥಳಾಗಿರಲಿಲ್ಲ. ಅವಳಿಗೆ ಈ ಹೊಸ ದೃಶ್ಯವು ಒಂದು ಕನಸೆಂದು ಭ್ರಮೆಯುಂಟಾಯಿತು. ಅವಳಿಗೆ ಸರಿಯಾದ ತಿಳಿವೇ ಇರಲಿಲ್ಲ; ಅವಳು ಹಠಾತ್ತಾಗಿ ಜಡಪ್ರಾಯವಾಗಿ ಹೋದಳು. ವಿನೋದಿನಿಯು ಒಂದೇ ತಡವೆಗೆ ನೀರವ, ನಿರ್ವಾಕ್ಯ, ನಿಸ್ಪಂದ !

ವಿನೋದಿನಿಗೆ ಸ್ವಲ್ಪ ಸಂಜ್ಞಾಲಾಭವುಂಟಾದಾಗ, ಅವಳು ತನ್ನ ಇದಿರಿಗೆ ನಡೆದ ಘಟನೆಗೆ ಕಾರಣವನ್ನು ತಿಳಿದುಕೊಳ್ಳಲು ಪ್ರಯತ್ನಪಟ್ಟಳು. ಆದರೆ ಅವಳ ಬುದ್ಧಿಗೆ ಅದಾವುದೂ ಗೊತ್ತಾಗದೆ ಹೋಯಿತು. ಅವಳು ಕಲಿಕತ್ತೆಗೆ ಬಂದಮೇಲೆ ನೋಡಿದುದೆಲ್ಲಾ ವಿಸ್ಮಯಜನಕವಾಗಿದ್ದುವು. ಇದೂ ಅವುಗಳಿಗನುಗುಣವಾದ ಅಥವಾ ತತ್ಸಂಬಂಧವಾದ ಘಟನೆಯಾಗಿರಬಹುದೆಂದು ತಿಳಿದುಕೊಂಡಳು ಬ್ರಹ್ಮೋಮತ ಪ್ರಕಾರ ತನಗೆ ಮದುವೆಯಾಯಿತೆಂದು ಅವಳಿಗೆ ಸ್ವಲ್ಪವೂ ಗೊತ್ತಾಗಲಿಲ್ಲ. ಅವಳ ಮೊದಲನೆಯ ಮದುವೆಯ ಪ್ರಸ್ತಾಪವೂ ಬರಲಿಲ್ಲ. ಅರ್ಧ ಜ್ಞಾನ, ಅರ್ಧ ಅಜ್ಞಾನ, ಇಂತಹ ಜ್ಞಾನಾಜ್ಞಾನಾವಸ್ಥೆಯಲ್ಲಿ ಈ ಮದುವೆಯ ಸಂಬಂಧವಾಗಿ ಅವಳಿಂದ ಹೇಳಿಸಿ ಮಾಡಿಸಿದುದೆಲ್ಲಾ ಅವಳು ಒಂದು ಮೋಹಿನೀ ಮಂತ್ರಶಕ್ತಿಯಿಂದ ಮುಗ್ಧಳಾದವಳ ಹಾಗೆ ಹೇಳಿ ಮಾಡಿದುದಾಗಿರುವುವು.

ಇತ್ತಲಾಗಿ ಮದುವೆಯ ಕಾರ್ಯವು ಪೂರ್ತಿಯಾದಮೇಲೆ, ವರನು ಮಹಾ ಉಲ್ಲಾಸದಿಂದ ಹೆಂಡತಿಯನ್ನು ಸ್ವಂತ ಮನೆಗೆ ಕರೆದುಕೊಂಡು ಹೋದನು. ಆಗ ಅವನ ಮನೆಯು ಆನಂದದಿಂದಲೂ ಉತ್ಸವಗಳಿಂದಲೂ ಪೂರ್ಣವಾಯಿತು.

---

* Eloquent sermon.

# ನಾಲ್ಕನೆಯ ಪರಿಚ್ಛೇದ.

ಪೂರ್ವೋಕ್ತಪರಿಣಯವಾದ ಮೂರು ದಿನಗಳಲ್ಲಿಯೇ ಜ್ಯೋತಿಪ್ರಕಾಶನು ವಿಷಣ್ಣವದನನಾಗಿ ಒಂದು ನಿರ್ಜನವಾದ ಕೊಟ್ಟಡಿಯಲ್ಲಿ ಒಬ್ಬನೇ ಕುಳಿತಿದ್ದನು. ಈಗವನಿಗೆ ಹರ್ಷದಲ್ಲಿ ವಿಷಾದ. ಇಷ್ಟರಲ್ಲಿಯೇ ಅವನ ಹೃದಯದಲ್ಲಿ ಆನಂದೋಲ್ಲಾಸದ ಒಂದು ಚಿಹ್ನೆಯಾದರೂ ಇರಲಿಲ್ಲ. ಈ ಪರಿಣಯದಲ್ಲಿ ಅವನಿಗೆ ಇದ್ದ ಆಶೆ ಭರವಸೆಗಳೆಲ್ಲವೂ ನಿರ್ಮೂಲವಾಗಿ ಹೋದುವು. ಆಹ್ಲಾದೋಲ್ಲಾಸಗಳಿಗೆ ಪ್ರತಿಯಾಗಿ ಅವನು ಮನಸ್ಸಿನಲ್ಲಿ ಒಂದು ದಾರುಣವಾದ ಯಾತನೆಯನ್ನು ಅನುಭವಿಸುತ್ತಲಿದ್ದನು. ಆ ಆಶೆ ಭರವಸೆಗಳಿಗೆ ಪ್ರತಿಯಾಗಿ ಅವನ ಹೃದಯವು ನೈರಾಶ್ಯದ ವಿಷಮವಾದ ಆಘಾತದಿಂದ ಶತಧಾ ಒಡೆದುಹೋಗಿರುವುದು. ಜ್ಯೋತಿಪ್ರಕಾಶನು ನಿಟ್ಟುಸಿರನ್ನು ಬಿಟ್ಟು, ಏತಕ್ಕೆ ಹೀಗಾಯಿತೆಂದೆಂದುಕೊಂಡನು.

ಈ ಸಮಯಕ್ಕೆ ಸರಿಯಾಗಿ ಮತ್ತೊಬ್ಬ ಮನುಷ್ಯನು ಕೊಟ್ಟಡಿಯೊಳಗೆ ಪ್ರವೇಶಮಾಡಿದನು. ಜ್ಯೋತಿಪ್ರಕಾಶನು ಆ ಮನುಷ್ಯನಿಗೆ ಅಭ್ಯರ್ಥನ ಮಾಡಿ, ಅವನನ್ನು ಇದಿರಿಗೆ ಇದ್ದ ಕುರ್ಚಿಯಮೇಲೆ ಕುಳ್ಳಿರಿಸಿದನು. ನವಾಗತ ವ್ಯಕ್ತಿಯು ಜ್ಯೋತಿಪ್ರಕಾಶನ ಮುಖವನ್ನು ಒಂದು ತಡವೆ ನೋಡಿ, "ಇದೇನು, ಮುಖವು ಬಾಡಿರುವ ಹಾಗಿದೆ ? ಮೈಯಲ್ಲಿ ಆಲಸ್ಯವೇನು ?" ಎಂದು ಕೇಳಿದನು.

ಜ್ಯೋತಿಪ್ರಕಾಶನು ಬಿಸುಸುಯ್ದು, "ನನಗೆ ಶಾರೀರಕ ಆಲಸ್ಯವೇನೂ ಇಲ್ಲ. ಆದರೆ, ನಗೇಂದ್ರ, ನಾನು ಬಹಳ ವಿಪದ್ಗ್ರಸ್ತನಾಗಿರುವೆನು. ನನ್ನ ಹೆಂಡತಿಯು ಬಹಳ ಅಸುಸ್ಥಳಾಗಿರುವಳು. ಅದಕ್ಕೋಸ್ಕರವೇ ನಿನ್ನನ್ನು ಕರೆಯಿಸಿದೆನು" ಎಂದನು.

ನಗೇಂದ್ರನಾಥ ಸರಕಾರನು ಕಲಿಕತ್ತೆಯಲ್ಲಿ ಒಬ್ಬ ಪ್ರಸಿದ್ಧನಾದ ಬ್ರಹ್ಮೋ ಡಾಕ್ಟರನು. ಮತ್ತು ಜ್ಯೋತಿಪ್ರಕಾಶನಿಗೆ ಪರಮಾಪ್ತನಾದ ಸ್ನೇಹಿತ. ಜ್ಯೋತಿಪ್ರಕಾಶನ ಮಾತನ್ನು ಕೇಳಿ ಆಶ್ಚರ್ಯಪಟ್ಟು, "ಅದೇನು, ಇಷ್ಟರಲ್ಲಿಯೇ ಅವಳಿಗೆ ಆಲಸ್ಯವುಂಟಾಯಿತೆ ?" ಎಂದು ಕೇಳಿದನು.

ಜ್ಯೋತಿ :—"ಆಲಸ್ಯವು ಎಂತಹದುದೋ ಅದು ಗೊತ್ತಾಗದು. ಆದರೆ ಲಕ್ಷಣಗಳನ್ನು ನೋಡಿದರೆ, ಪ್ರಾಣವುಳಿಯುವುದು ಕಷ್ಟ. ಅಷ್ಟು ತಿಳಿದುಕೊಳ್ಳಬಲ್ಲೆನು."

ನಗೇಂದ್ರ :—“ ಅಂತಹ ಲಕ್ಷಣಗಳು ಕಂಡುಬಂದುದಾವುದು—ವಿವರವಾಗಿ ಹೇಳು, ”

ಜ್ಯೋತಿ :—“ ಮೊದಲು, ಆ ವಿವಾಹವಾದ ರಾತ್ರಿ ನನ್ನ ಸಂಗಡ ಏನೂ ಮಾತನಾಡಲಿಲ್ಲ. ರಾತ್ರಿಯೆಲ್ಲಾ ಎಷ್ಟೋ ಪ್ರಯತ್ನಪಟ್ಟೆನು ; ಆದರೂ ಅವಳು ಬಾಯಿಯಿಂದ ಒಂದು ಮಾತು ಕೂಡ ಹೊರಡಲಿಲ್ಲ. ಮರುದಿನ ಬೆಳಗ್ಗೆ ಎದ್ದು ನೋಡಲಾಗಿ, ವಿನೋದಿನಿಯ ಕಣ್ಣುಗಳು ರಕ್ತವರ್ಣವಾಗಿದ್ದುವು. ಆಗಲೂ ಬಾಯಿಯಲ್ಲಿ ಮಾತಿಲ್ಲ. ಆದರೆ ಆ ವಿಶಾಲವಾದ, ರಕ್ತದ ಹಾಗೆ ಕೆಂಪೇರಿದ್ದ ಕಣ್ಣುಗಳಿಂದ ನನ್ನನ್ನು ದೃಷ್ಟಿಸಿ ನೋಡಿದಳು. ಅವಳ ಆ ನೋಟವನ್ನು ನೋಡಿ ಆಗ ನನಗೆ ಮೈ ರಕ್ತವೆಲ್ಲಾ ಒಣಗಿಹೋಗುತ್ತ ಬಂತು. ಪಿಶಾಚಿ, ಭೂತ ಎಂಬುದನ್ನು ನಾನು ನಂಬುವುದಿಲ್ಲ. ಅದರ ನಂಬುಗೆ ನನಗೆ ಇಲ್ಲ. ಆದರೆ ನಮ್ಮ ಮನೆಯಲ್ಲಿ ಕೆಲಸ ಮಾಡುವ ದಾಸಿಯು ‘ ವಿನೋದಿನಿಗೆ ನಿಜವಾಗಿಯೂ ಭೂತ ಹಿಡಿದಿದೆ ’ ಎಂದು ಹೇಳಿದಳು. ನಾನದನ್ನು ನಂಬದೆ ಆ ರಾತ್ರಿಯೂ ನಾವು ಏಕಶಯ್ಯೆಯಲ್ಲಿ ಮಲಗಿದ್ದೆವು. ರಾತ್ರಿಯೆಲ್ಲಾ ವಿನೋದಿನಿಗೆ ನಿದ್ದೆಯಿಲ್ಲ, ಹಾಸಿಗೆಯಮೇಲೆ ನಿಲ್ಲಲಾರದೆ ಹೊರಳಾಡಿಹೋದಳು. ಸ್ವಲ್ಪವೂ ಕಣ್ಣು ಮುಚ್ಚಲಿಲ್ಲ. ನಾನು ಅವಳ ಮೈ ಮುಟ್ಟಿ ನೋಡಿದೆನು, ಮೈ ಬೆಂಕಿಯಾಗಿ ಸುಡುತ್ತಲಿತ್ತು. ಎಳ್ಳು ಹಾಕಿದರೆ ಸಿಡಿಯುವ ಹಾಗಿತ್ತು. ಅತ್ಯಂತ ಜ್ವರವೆಂದು ತಿಳಿದೆನು. ಕೈಯಿಂದ ಹಾಗೆಯೇ ಅವಳ ಮೈ ಸವರಿದೆನು. ನಾಲ್ಕೈದು ನಿಮಿಷದೊಳಗೆ ಆ ಮೈ ಬೆಂಕಿಯು ಕ್ರಮವಾಗಿ ಕಡಮೆಯಾಗುತ್ತಾ ಬಂದು, ಕಡೆಗೆ ಮೈಯೆಲ್ಲಾ ಆಲಿಕಲ್ಲು ಮುಟ್ಟಿದಹಾಗೆ ತಣ್ಣಗಾಗಿ ಹೋಯಿತು. ನಾನು ರಾತ್ರಿಯೆಲ್ಲಾ ಪರೀಕ್ಷಿಸಿ ನೋಡಿದೆನು. ನಾನು ಅವಳ ಮೈಮೇಲೆ ಕೈಯಿಟ್ಟರೆ ಕೂಡಲೆ ಮೈಯೆಲ್ಲಾ ಆಲಿಕಲ್ಲಿನಹಾಗೆ ತಣ್ಣಗಾಗುವುದು. ಕೈ ತೆಗೆದುಬಿಟ್ಟರೆ ಕ್ರಮವಾಗಿ ಮೈಯಲ್ಲಿ ಉಷ್ಣವೇರುವುದು ; ಹೀಗಾಗುತ್ತಲಿತ್ತು. ನಾನು ಸ್ವಲ್ಪ ಹೆಚ್ಚಾಗಿ ಕೈಯಿಟ್ಟುಕೊಂಡಿದ್ದರೆ ನಿಜವಾಗಿಯೂ ಅವಳು ಕೊಲ್ಲಾಪ್ಸಾಗಿ * (ಒಮ್ಮಿಂದೊಮ್ಮೆ ಕ್ಷೀಣಿಸಿಹೋಗಿ) ಅವಳ ಮೃತ್ಯುವುಂಟಾಗುತ್ತಲಿತ್ತು. ಬೆಳಗ್ಗೆ ಎದ್ದು ನೋಡಿದೆನು. ಕಣ್ಣು ಅಷ್ಟು ಕೆಂಪಾಗಿರಲಿಲ್ಲ ; ರಕ್ತನಾಶವಿರಲಿಲ್ಲ. ಶರೀರದಲ್ಲಿಯೂ ರಕ್ತವೆಲ್ಲಾ ಶೋಷಿಸಿಹೋಗಿತ್ತು. ಮೈಯೆಲ್ಲಾ ಹಲ್ಲಿಯಹಾಗೆ ಬೆಳ್ಳಗಾಗಿ ಹೋಗಿತ್ತು. ಅವಳು ನಿಶ್ಶಕ್ತಿಯಾಗಿರುವುದನ್ನು ನೋಡಿ, ನನಗೆ ಬಹಳ ಭಯವುಂಟಾಯಿತು, ನಿನ್ನನ್ನು ಕರೆಯಿಸಬೇಕೆಂದಿದ್ದೆನು. ಆದರೆ ನಮ್ಮ ಮನೆಯ ಪರಿಚಾರಿಕೆಯ ಹೆಂಗಸರಿಗೆ ಏನು ಗೊತ್ತಾಯಿತೋ

* Collapse.

ನಾನದನ್ನು ಅರಿಯೆನು. ಅವರು ನಿನ್ನನ್ನು ಕರೆಯಿಸಬೇಕೆಂದು ಹೇಳಿದರು. ಅವರ ಹೇಳಿಕೆಯ ಪ್ರಕಾರ ಒಬ್ಬ ಮಂತ್ರಗಾರನನ್ನು ಕರೆಯಿಸಿದೆನು. ಅವನು ಬಂದು ಮಾಡಿದ ಕಾರ್ಯವನ್ನು ನೋಡಿ, ನನಗೆ ಬಹಳ ಆಶ್ಚರ್ಯವಾಯಿತು. ಪಿಶಾಚಿ, ಭೂತ, ಮಂತ್ರ ಇವುಗಳಲ್ಲಿ ನನಗೆ ಸ್ವಲ್ಪವೂ ನಂಬುಗೆಯಿಲ್ಲ. ಆದರೆ ಆ ಮಂತ್ರಗಾರನ ಕಾರ್ಯವನ್ನು ನೋಡಿ ನನಗೆ ನಂಬುಗೆಯುಂಟಾಯಿತು. ''

ಈ ಸಮಯದಲ್ಲಿ ಡಾಕ್ಟರನು ಮುಂದೆ ಮಾತು ಸಾಗಗೊಡಿಸದೆ, '' ಆ ನಂಬುಗೆಯುಂಟಾದುದು ಹೇಗೆ ? '' ಎಂದನು.

ಜ್ಯೋತಿಪ್ರಕಾಶನು ಪುನಃ ಹೇಳತೊಡಗಿದನು :—'' ಅಂತಹ ದುರ್ಬಲವುಳ್ಳ ರೋಗಿಯು, ಎರಡು ಸಾಸವೆಯ ಕಾಳುಗಳನ್ನು ಮಂತ್ರಿಸಿ ಮೈಮೇಲೆ ಹಾಕುತ್ತಲೆ, ಅವಳ ಶಕ್ತಿಯು ಅತಿಯಾಯಿತು. ಆಗವಳನ್ನು ಹಿಡಿದು ನಿಲ್ಲಿಸುವುದೇ ಕಷ್ಟವಾಯಿತು.''

ನಗೇಂದ್ರನಾಥನು ಆತುರದಿಂದ, '' ಅನಂತರ, ಅದಾದಮೇಲೆ ? '' ಎಂದನು.

ಜ್ಯೋತಿಪ್ರಕಾಶನು ಪುನಃ ಹೇಳತೊಡಗಿದನು :—'' ಅನಂತರ ಒಂದು ಅರಸಿನದ ಕೊನೆಯ ತುಂಡನ್ನು ಮಂತ್ರಿಸಿ, ಮೂಗಿಗೆ ತೋರಿಸಿದೊಡನೆ ಬಾಯಿಯಿಂದ ಮಾತು ಹೊರಟಿತು. ಆ ವಿವಾಹವಾದಮೇಲೆ ವಿನೋದಿನಿಯ ಬಾಯಿಯಿಂದ ಒಂದು ಮಾತನ್ನೂ ಕೇಳಿರಲಿಲ್ಲ. ಆದುಕಾರಣ ಆತುರದಿಂದ ನಾನೂ ಹೋಗಿ ಅಲ್ಲಿ ನಿಂತುಕೊಂಡೆನು. ಆದರೆ ಅವಳು ಹೇಳಿದ ಮಾತುಗಳನ್ನು ಕೇಳಿ, ನನಗೆ ಎದೆಯು ನಡುಗಿಹೋಯಿತು. ಆ ಕಂಠಸ್ವರವು ಅತಿ ಕರ್ಕಶವಾಗಿತ್ತು. ವಿನೋದಿನಿಯ ಕಂಠಸ್ವರವೆಂದು ನನಗೆ ನಂಬುಗೆ ಹುಟ್ಟಲಿಲ್ಲ. ಆ ಕರ್ಕಶವಾದ ಕಂಠಸ್ವರದಲ್ಲಿ ಅವಳು ಹೇಳಿದ ಮಾತುಗಳು ಏನಿರಬಹುದೆಂದು ತಿಳಿಯುವೆ ? ಏನೆಂದರೆ :—' ನೀವು ಇವಳನ್ನು ಏತಕ್ಕೆ ಇಲ್ಲಿಗೆ ಕರೆತಂದಿರಿ ? ಅವಳು ಎಲ್ಲಿದ್ದಳೋ ಆ ಮಹೇಶಪುರಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಬಿಟ್ಟು ಬನ್ನಿ. ಇಲ್ಲದಿದ್ದರೆ ನಿಮಗೆ ಮೇಲಾಗದು. ನಿಮ್ಮಲ್ಲಿ ಒಬ್ಬನೂ ಪ್ರಾಣದಿಂದಿರನು ' ಎಂದು ಹೇಳಿದಳು. ನಾನು ಸ್ತಬ್ಧನಾಗಿ ಅಲ್ಲಿಯೇ ಇದಿರಿಗೆ ನಿಂತಿದ್ದೆನು. ನನ್ನನ್ನು ಕಂಡು ನನ್ನಮೇಲೆ ರೇಗಿದಳು. ನನ್ನನ್ನು ಕುರಿತು, ' ನೀನು ವಿನೋದಿನಿಯನ್ನು ಮದುವೆಮಾಡಿಕೊಂಡೆನೆಂದು ತಿಳಿದಿರುವೆಯಾ ? ಅವಳು ನಿನ್ನವಳಾಗುವಳೆ ? ವಿನೋದೆಯು ಎಂದಿಗೂ ನಿನ್ನ ವಿನೋದೆಯಾಗಳು. ಅವಳು ದುರ್ಗಾವತಿಯಾಗಿರುವಳು. ಚಿರಕಾಲವೂ ನನ್ನವಳಾಗಿರುವಳು. ಅವಳನ್ನು ಕರೆದುಕೊಂಡು ಹೋಗಿ ಬಿಟ್ಟು ಬಾ ! ಈಗಲೇ ಬಿಟ್ಟು ಬಾ !! ' ಎಂದು ಹೇಳಿದಳು. ನಾನಾದರೋ, ಅವಾಕ್ ! ಆ ಭಯಂಕರವಾದ ಕಂಠಸ್ವರವು ಈಗಲೂ ನನ್ನ ಕಿವಿಗೆ ಕೇಳಿಸುವಹಾಗಿ

ರುವುದು. ವಿನೋದಿನಿಯ ಆ ಸುಂದರವಾಗಿದ್ದ ಕಣ್ಣುಗಳನ್ನು ನೋಡಿ, ನಾನು ವಿಮೋಹಿತನಾಗಿದ್ದೆನು. ಈಗ ಆ ಕಣ್ಣುಗಳನ್ನು ನೋಡಿದರೆ, ನನ್ನ ಪ್ರಾಣವು ಭಯದಿಂದ ಆಕುಲವಾಗುವುದು. ಭೂತ, ಪಿಶಾಚಿ ಇವುಗಳಲ್ಲಿ ನನಗೆ ಈಗ ದೃಢವಾದ ನಂಬುಗೆಯುಂಟಾಗಿಹೋಗಿರುವುದು. ''

ನಗೇಂದ್ರ:—'' ಅನಂತರ, ಮಂತ್ರವಾದಿಯು ಆಗ ಏನುಮಾಡಿದನು ? ''

ಜ್ಯೋತಿ:—'' ನನಗೇನೋ ಆ ಭೂತವನ್ನು ಬಿಡಿಸಿ ಓಡಿಸುವ ಭರವಸೆಯಿರಲಿಲ್ಲ. ಆದರೆ ಮಂತ್ರವಾದಿಯು ಆ ಸಮಯದಲ್ಲಿ ಭೂತವನ್ನು ಬಿಡಿಸುವುದಾಗಿ ಭರವಸೆಯನ್ನು ಕೊಟ್ಟನು. ಮತ್ತು ತನಗೆ ತಕ್ಕ ಪುರಸ್ಕಾರವನ್ನು ಕೊಡಬೇಕೆಂದು ಕೇಳಿಕೊಂಡನು. ಅನಂತರ ಸಾಸವೆಯ ಕಾಳುಗಳನ್ನು ಮಂತ್ರಿಸಿ ಒಂದೊಂದಾಗಿ ಅವಳ ಮೈಮೇಲೆ ಎಸೆಯುತ್ತ ಬಂದನು. ಅದು ರೋಗಿಗೆ ಅಸಹ್ಯವಾಗುತ್ತ ಬಂದು, ಯಾತನಸೂಚಕ ಶಬ್ದದಿಂದ ' ಹೋಗುವೆನು ! ' ' ಹೋಗುವೆನು !! ' ಎಂದು ಕೂಗಿಕೊಂಡಳು. ಆಗ ಮಂತ್ರವಾದಿಯು ಒಂದು ದೊಡ್ಡ ಕೊಡದಲ್ಲಿ ತುಂಬಾ ನೀರು ಬೇಕೆಂದನು. ಕೊಡದಲ್ಲಿ ನೀರನ್ನು ತಂದಿಟ್ಟರು. ಆ ನೀರು ತುಂಬಿದ್ದ ಕೊಡವನ್ನು ಹಲ್ಲಿನಿಂದ ಕಚ್ಚಿಕೊಂಡು ಹೋಗೆಂದು ಮಂತ್ರವಾದಿಯು ಅಪ್ಪಣೆಮಾಡಿದನು. ರೋಗಿಯು ನಮ್ಮೆಲ್ಲರ ಇದಿರಿಗೆ ತುಂಬಿದ್ದ ಕೊಡವನ್ನು ಕೈಯಿಂದ ಮುಟ್ಟದೆ, ಮುಂದಿನ ಹಲ್ಲುಗಳಿಂದ ಕಚ್ಚಿ ಎತ್ತಿಕೊಂಡು, ಮನೆಯ ಬಾಗಿಲಿನ ಹೊರಕ್ಕೆ ತೆಗೆದುಕೊಂಡು ಹೋದಳು. ಅಲ್ಲಿ ಕೊಡವನ್ನು ನೆಲದಮೇಲೆ ಇಟ್ಟು ರೋಗಿಯು ಅಜ್ಞಾನಳಾಗಿ, ನೆಲದಮೇಲೆ ಬಿದ್ದುಬಿಟ್ಟಳು. ನಾವು ಬಹಳ ಪ್ರಯಾಸಪಟ್ಟು, ಅವಳಿಗೆ ತಿಳಿವು ಬರುವ ಹಾಗೆ ಮಾಡಿದೆವು. ಆಗವಳು ಹಿಂದೂಗಳ ಮನೆಯ ಸೊಸೆಯ ಹಾಗೆ ಮುಖಕ್ಕೆ ಗೋಷೆಬಟ್ಟೆಯನ್ನು ಹಾಕಿಕೊಂಡು, ಲಜ್ಜೆಯಿಂದ ಒಂದು ಸ್ಥಳದಲ್ಲಿ ಸುಮ್ಮನೆ ಕುಳಿತುಕೊಂಡಳು. ಭೂತವು ಬಿಟ್ಟುಹೋಯಿತೆಂದು ನಾವೆಲ್ಲರೂ ಮಹಾನಂದದಿಂದ ಮಂತ್ರವಾದಿಗೆ ಯಥೋಚಿತ ಪುರಸ್ಕಾರವನ್ನು ಕೊಟ್ಟು ಕಳುಹಿಸಿದೆವು. ಆದರೆ ಸಾಯಂಕಾಲವಾದಮೇಲೆ ಮತ್ತೊಂದು ರಗಳೆಯುಂಟಾಯಿತು. ನಾನು ಮನೆಯೊಳಕ್ಕೆ ಪ್ರವೇಶಮಾಡಿದೆನು. ಆ ಕೂಡಲೇ ವಿನೋದಿನಿಯು ವಿಕಟಾಕಾರವಾಗಿ ನಕ್ಕಳು. ಆ ನಗುವಿನಿಂದ ಮನೆಯೆಲ್ಲಾ ಪ್ರತಿಧ್ವನಿತವಾಯಿತು. ಅಂತಹ ಭಯಂಕರವಾದ ನಗುವನ್ನು ನಾನು ಹುಟ್ಟಿದಮೇಲೆ ಕೇಳಿರಲಿಲ್ಲ. ಆ ನಗುವನ್ನು ಕೇಳಿ, ನನ್ನ ಪ್ರಾಣವು ನಡುಗಿ ಹೋಯಿತು. ನಾನು ಭಯದಿಂದ ಪುನಃ ಮನೆಯೊಳಗೆ ಹೋಗಲಿಲ್ಲ. ನಾನು ಮನೆಯೊಳಗಿನಿಂದ ಹೊರಕ್ಕೆ ಬಂದೆನೋ ಇಲ್ಲವೋ, ಅಷ್ಟರೊಳಗೆ

ಬಾಗಿಲನ್ನು ಬಲವಾಗಿ ಹಾಕಿಕೊಂಡಳು. ಒಳಗಡೆ ಅಗುಣಿ ಹಾಕಿಕೊಂಡು ರಾತ್ರಿ ಯೆಲ್ಲಾ ಬಾಗಿಲನ್ನು ತೆಗೆಯಲಿಲ್ಲ. ಸ್ವಲ್ಪ ಹೊತ್ತಿನಮೇಲೆ ನಗುವೇನೋ ನಿಂತಿತು. ಆದರೆ ಅದಕ್ಕೆ ಪ್ರತಿಯಾಗಿ ಅಳುವು ಪ್ರಾರಂಭವಾಯಿತು ಹೀಗೆ ನಗುವು ಅಳುವುಗ ಳಿಂದ ರಾತ್ರಿ ಕಳೆಯಿತು. ಬೆಳಗಾದಮೇಲೆ ಬಾಗಿಲನ್ನು ಒಡೆಯಬೇಕಾಯಿತು. ಆದರೆ ಒಳಗೆ ಹೋಗುವುದಕ್ಕೆ ಯಾರಿಗೂ ಸಾಧ್ಯವಾಗಲಿಲ್ಲ. ಪುನಃ ಭೂತವೇ ಬಂತೋ, ಅಥವಾ ಮತ್ತಾವ ರೋಗವೋ ಎಂಬುದನ್ನು ಗೊತ್ತುಮಾಡಲಾಗದೆ ನಿನ್ನನ್ನು ಕರೆಯಿ ಸಿದೆನು. ''

ನಗೇಂದ್ರನಾಥನು ಸ್ವಲ್ಪ ಯೋಚಿಸಿ, “ ನಾನು ರೋಗಿಯನ್ನು ನೋಡಿ ಅನಂತರ ಹೇಳುವೆನು '' ಎಂದನು.

ಜ್ಯೋತಿ:—“ ನೀನು ಕೊಟ್ಟಡಿಯೊಳಗೆ ಹೋಗಿ ನೋಡಬಹುದು. ಆದರೆ ನನಗೆ ಬರುವುದಕ್ಕೆ ಧೈರ್ಯ ಸಾಲದು. ಒಂದುವೇಳೆ ಭೂತವೇ ಆಗಿದ್ದರೆ, ಆ ಭೂತಕ್ಕೆ ನನ್ನಮೇಲೆಯೇ ಹೆಚ್ಚು ಕ್ರೋಧವಿರುವಹಾಗಿರುವುದು.''

ನಗೇಂದ್ರನಾಥನು ಒಳಗೆ ಹೋಗಿ ಅರ್ಧಗಂಟೆಯ ಹೊತ್ತು ನೋಡಿ ಅನಂತರ ಹೊರಗೆ ಬಂದು, “ ಇದು ನಿನ್ನ ಭೂತಪ್ರೇತ ಯಾವುದೂ ಅಲ್ಲ. ಇದೊಂದು ರೋಗ ವಿಶೇಷ. ಇದಕ್ಕೆ ಇಂಗ್ಲಿಷುಡಾಕ್ಟರರು ಮೆಲಾಂಕೋಲಿಯಾ * ಎಂದು ಹೇಳುವರು. ನಮ್ಮ ಪಂಡಿತರು ಇದೊಂದು ವಾಯುರೋಗವೆನ್ನುವರು '' ಎಂದನು.

ಜ್ಯೋತಿಪ್ರಕಾಶನು ಆಶ್ಚರ್ಯಪಟ್ಟು, “ ಹಠಾತ್ತಾಗಿ ಈ ರೋಗವು ಘಟನೆ ಯಾದುದು ಹೇಗೆ? ಈ ರೋಗಕ್ಕೆ ಕಾರಣವೇನು, ಊಹಿಸಲಾಪೆಯಾ ? '' ಎಂದನು.

ನಗೇಂದ್ರ:—ಯಾವುದಾದರೂ ಮರ್ಮಾಂತಿಕವಾದ ಮನೋಕ್ಲೇಶ ಅಥವಾ ಶೋಕವುಂಟಾದರೆ, ಈ ರೋಗವು ಹುಟ್ಟುವುದು. ಇವಳಿಗೆ ಅಂತಹ ಕಾರಣವೇನಾ ದರೂ ಉಂಟೆ ? ''

ಜ್ಯೋತಿ:—“ ಅಂತಹ ಕಾರಣ ಯಾವಾಗಲೂ ಉಂಟಾಗಿಲ್ಲ. ಉಂಟಾಗುವ ಹಾಗೂ ಇಲ್ಲ. ವಿನೋದಿನಿಯ ದೊಡ್ಡಪ್ಪನು ಆಕೆಯನ್ನು ಇದುವರೆಗೂ ಲಾಲನ ಪಾಲನ ಮಾಡುತ್ತಲಿದ್ದನು. ಈಗ ಆತನು ಗತಿಸಿಹೋದನು. ಆ ವ್ಯಸನವು ಇನ್ನೂ ಇರುವುದೆಂದು ನನಗೆ ಬೋಧೆಯಾಗುವುದಿಲ್ಲ. ಅದೇನೋ, ವ್ಯಸನಕ್ಕೆ ಒಂದು ಕಾರ ಣವೇ ಆಹುದು. ಆದರೆ ಅದಕ್ಕೆ ಪ್ರತಿಯಾಗಿ ಆಹ್ಲಾದಕ್ಕೆ ಕಾರಣಗಳು ಸಹಸ್ರಪಾಲು ಹೆಚ್ಚಾಗಿವೆ. ಮೊದಲು, ಆ ದೊಡ್ಡಪ್ಪನ ಮರಣದಿಂದ ವಿನೋದಿನಿಯು ಒಂದು

* Melancholia

ಲಕ್ಷ್ಮಿಕ್ಕಿಂತಲೂ ಹೆಚ್ಚು ಆಸ್ತಿಗೆ ಉತ್ತರಾಧಿಕಾರಿಣಿಯಾದಳು. ಅದರಮೇಲೆ ಆಗವಳು ಹಳ್ಳಿಗಾಡಿನಲ್ಲಿ ಅತಿ ಹೀನಾವಸ್ಥೆಯಲ್ಲಿ ಬಹಳ ಭಯಂಕರವಾದ ಪೌತ್ತಲಿಕತೆ ಮತ್ತು ಕುಸಂಸ್ಕಾರ ಮಧ್ಯದಲ್ಲಿ ಪ್ರತಿಪಾಲಿತಳಾಗಿರುತ್ತಿದ್ದಳು. ಈಗ ಅದಕ್ಕೆ ಪ್ರತಿಯಾಗಿ ಈ ಕಲಿಕತ್ತಾ ಪಟ್ಟಣದಲ್ಲಿ ನಮ್ಮ ಸಮಾಜದ ಶ್ರದ್ಧಾಸ್ಪದರಾದ ನವೀನಗೋಪಾಲ ಬಾಬುಯವರ ಮನೆಯಲ್ಲಿ ಈ ಹುಡುಗಿಯ ತಾಯಿ, ಉನ್ನಮನವುಳ್ಳ ಹೈಮವತಿ ಯಿಂದ ಅತ್ಯಂತ ಆದರದಿಂದ ಪ್ರತಿಪಾಲಿತಳಾಗುತ್ತಿದ್ದಳು. ವಿನೋದಿನಿಯ ಆನಂದಕ್ಕೆ ಇನ್ನೂ ಕಾರಣವುಂಟು. ಅವಳ ತಾಯಿತಂದೆಯವರು ಆಕೆಯೇ ಮೆಚ್ಚಿದ ವರನಿಗೆ ಕೊಟ್ಟು ಅವಳಿಗೆ ಮದುವೆ ಮಾಡಿರುವರು. ವಿವಾಹದ ದಿನ ವಿನೋದಿನಿಯು ನನ್ನ ಮೇಲೆ ಅವಳಿಗಿದ್ದ ಪ್ರೀತಿಯನ್ನು ಪ್ರಕಾಶಪಡಿಸಿದುದನ್ನು ನೋಡಿ, ನಮ್ಮ ಸಮಾಜದ ನಮ್ಮ ಸೋದರಿಯರೆಲ್ಲರೂ ಅತ್ಯಂತ ವಿಸ್ಮಿತರಾದರು. ಅದಕ್ಕೋಸ್ಕರ ಅವಳು ಹೆಚ್ಚು ಹಿಂಸೆಪಟ್ಟಳೆಂದೂ ಕೇಳಿದೆನು. ಆದುದರಿಂದ ಮರ್ಮಾಂತಿಕ ಮನೋಕಷ್ಟ ಅಥವಾ ಶೋಕಕ್ಕೆ ಪ್ರತಿಯಾಗಿ ಅತ್ಯಂತ ಆನಂದಕ್ಕೆ ಹೆಚ್ಚು ಕಾರಣಗಳಿದ್ದುವು. ಏತಕ್ಕೋಸ್ಕರ ಹೀಗಾಯಿತೋ, ಅದನ್ನು ಸ್ಥಿರಮಾಡುವುದು ಕಷ್ಟವಾಗಿದೆ."

ನಗೇಂದ್ರ (ಸ್ವಲ್ಪ ಹೊತ್ತು ಯೋಚಿಸಿ) :—"ಅತ್ಯಂತ ಆನಂದವುಂಟಾದರೂ ಈ ರೋಗವು ಹುಟ್ಟುವುದು. ನಾನು ವಿಲಾಯಿತಿ ಲಾನ್‌ಸೆಟ್ * ಎಂಬ ಪತ್ರಿಕೆಯಲ್ಲಿ ಅಂತಹ ಘಟನೆಯೊಂದನ್ನು ಓದಿದ ಜ್ಞಾಪಕವಿರುವುದು."

ಜ್ಯೋತಿ:—"ಅಣ್ಣಾ! ನಿನ್ನ ಹೇಳಿಕೆಯಿಂದ ನನಗೆ ಇದ್ದ ಒಂದು ದುರ್ಭಾವನೆಯು ಹೋಯಿತು. ಈಗ ಹೆಚ್ಚು ಆನಂದದಿಂದಲೇ ವಿನೋದಿನಿಗೆ ಈ ಭಯಂಕರವಾದ ರೋಗವು ಹುಟ್ಟಿರಬೇಕು. ಆ ವಿಚಾರದಲ್ಲಿ ಇನ್ನು ಸಂದೇಹವಿಲ್ಲ. ಆದರೆ ಈಗಲೂ ನನ್ನ ಮನಸ್ಸಿನಲ್ಲಿ ಒಂದು ಸಂದೇಹವುಳಿದುಕೊಂಡಿರುವುದು. ಏನೆಂದರೆ, ಆ ಭೂತದ ಸಮಾಚಾರ ನನಗೆ ಇನ್ನೂ ಚೆನ್ನಾಗಿ ಗೊತ್ತಾಗಲಿಲ್ಲವಾಗಿದೆ."

ಡಾಕ್ಟರನು, "ಅದೂ ಈ ರೋಗದ ಕಾರ್ಯವಾಗಿರುವುದು. ಈ ರೋಗಗ್ರಸ್ತರೋಗಿಯು ಇದಕ್ಕಿಂತಲೂ ಹೆಚ್ಚು ಆಶ್ಚರ್ಯಕರವಾದ ಕಾರ್ಯಗಳನ್ನು ಮಾಡುವನು. ಮಂತ್ರವಾದಿಗಳು ಕೇವಲ ಕೌಶಲ್ಯದಿಂದ ತಮಗೆ ಇಷ್ಟಬಂದ ಮಾತುಗಳನ್ನು ರೋಗಿಯ ಬಾಯಿಯಿಂದ ಹೇಳಿಸುವರು; ಮತ್ತು ತಮ್ಮ ಮನೋಮತವಾದ ಕಾರ್ಯವನ್ನೂ ರೋಗಿಯಿಂದ ಮಾಡಿಸುವರು. ಭೂತಪ್ರೇತವೆಲ್ಲಾ ಸುಳ್ಳು" ಎಂದು ಹೇಳಿದರು.

* Lancet.

ಜ್ಯೋತಿ:—“ ಆ ವಿಚಾರವನ್ನು ಕುರಿತು ನಿನ್ನೊಡನೆ ಕಡೆಗೆ ತರ್ಕಮಾಡು ವೆನು. ಈಗ ರೋಗವು ಹೋಗಿ ಹೇಗೆ ಆರೋಗ್ಯವಾಗಬೇಕೋ, ಅದರ ವ್ಯವಸ್ಥೆ ಯನ್ನು ಮಾಡು. ”

ನಗೇಂದ್ರ :—“ ಬಹಳ ಪ್ರಯಾಸಪಟ್ಟರೆ, ಈ ರೋಗವು ಆರೋಗ್ಯವಾಗು ವುದು ; ಆದರೆ ಬೇಗನೆ ಆರೋಗ್ಯವಾಗದು ; ಸಾವಕಾಶ ಬೇಕು. ನಾನು ಕೊಡುವ ಔಷಧವನ್ನು ಸೇವಿಸಬೇಕು ; ನಿಯಮಿತ ಆಹಾರವೂ ರಾತ್ರಿ ಸರಿಯಾದ ನಿದ್ರೆಯೂ ಇದಕ್ಕೆ ಏರ್ಪಾಟಾಗಬೇಕು. ಈ ಪ್ರಕಾರ ಮೂರು ನಾಲ್ಕು ತಿಂಗಳು ಮಾಡಿದರೆ, ಆರೋಗ್ಯಲಾಭವುಂಟಾಗಬಹುದು. ”

ಜ್ಯೋತಿ :—“ ನಾನು ಹತ್ತಿರ ಹೋದರೆ, ರೋಗವು ಹೆಚ್ಚುವುದು. ಹೀಗಿರು ವಾಗ ನಾನು ಅವಳ ಹತ್ತಿರ ಹೋಗುವುದುಚಿತವೆ ? ”

ನಗೇಂದ್ರ :—“ ಹಾಗಾದರೆ ಹೋಗದಿರುವುದೇ ಒಳ್ಳೆಯದು. ನಾನು ಹೇಳುವ ಹಾಗೆ ವ್ಯವಸ್ಥೆಮಾಡಿದರೆ ಸಾಕು. ”

ಹೀಗೆಂದು ಹೇಳಿ, ಡಾಕ್ಟರನು ಔಷಧಕ್ಕೆ ಚೀಟಿಯನ್ನು ಬರೆದು ಕೊಟ್ಟು ಹೊರಟುಹೋದನು. ಜ್ಯೋತಿಪ್ರಕಾಶನು ಔಷಧವನ್ನು ತರಿಸುವುದಕ್ಕೆ ಜನರನ್ನು ಕಳುಹಿಸಿದನು.

## ಐದನೆಯ ಪರಿಚ್ಛೇದ.

ವಿನೋದಿನಿಯ ಅಲಸ್ಯದ ಸಮಾಚಾರವು ಆಕೆಯ ತಂದೆಯಾದ ನವೀನಗೋಪಾಲ ನಿಗೂ, ಆಕೆಯ ತಾಯಿಯಾದ ಹೈಮವತಿಗೂ ಮುಟ್ಟಿತು. ಆ ಭಯಂಕರ ವಾದ ಸಮಾಚಾರದಿಂದ ಅವರಿಗೂ ಹರ್ಷದಲ್ಲಿ ವಿಷಾದವುಂಟಾಯಿತು. ಅವರು ಮರ್ಮಾ ಹತರಾಗಿ ಮಗಳನ್ನು ನೋಡುವುದಕ್ಕೆ ಬಂದರು. ಅವರು ಬಂದ ಸಮಯದಲ್ಲಿ ಕೊಟ್ಟಡಿ ಯಲ್ಲಿ ಬೀಗವನ್ನು ಹಾಕಿ ಇಡಲ್ಪಟ್ಟಿದ್ದ ವಿನೋದಿನಿಯು ತೆರೆದಿದ್ದ ಕಿಟಿಕೆಯಲ್ಲಿ ನಿಂತು ಕೊಂಡು ಮೊಳಕಾಲಿನವರೆಗೆ ಕೆದರಿ ಹಾರಾಡುತ್ತಲಿದ್ದ ತೈಲಹೀನವಾದ ಕೂದಲುಳ್ಳವ ಳಾಗಿ, ಹುಚ್ಚಿಯಹಾಗೆ ಹಾಡುತಲಿದ್ದಳು :—

" ಬರುವೆನೆಂದು ಹೇಳಿ ಹೋದವನು " ||
" ಬರಲಿಲ್ಲ—ಬರಲಿಲ್ಲ—ಬರಲಿಲ್ಲವೆ " ||

ಈ ಅಸಂಬದ್ಧವಾದ ಹಾಡು ಮುಗಿಯುತ್ತಲೇ, ಬೇರೆ ರಾಗವನ್ನೆತ್ತಿ ಮತ್ತೊಂದು ಅಸಂಬದ್ಧವಾದ ಹಾಡನ್ನು ಹಾಡಲಾರಂಭಿಸಿದಳು :—

" ಮರೆತೆನೆಂದು ಮಾಡಿದ್ದೇನೆ " ||
ಮರೆಯಲಿಲ್ಲವೆ ಹೋಗು ಸಖಿ—"

ಹೀಗೆ ಮನಸ್ಸಿಗೆ ಬಂದ ರಾಗದಿಂದ ಹಾಡಿ ಪೂರೈಸಿದೊಡನೆ ವಿನೋದಿನಿಯು ಅಳುವುದಕ್ಕೆ ತೊಡಗಿದಳು. ಆ ಅಳುವಿನಲ್ಲಿಯೂ, ನೈರಾಶ್ಯದಿಂದ ತನ್ನ ಪ್ರಾಣವು ದಗ್ಧವಾಗುತ್ತಲಿರುವುದೆಂಬ ಮರ್ಮಾಂತಿಕವಾದ ಮಾತುಗಳನ್ನು ಹೇಳುವಳು.

ಈ ಸಮಯದಲ್ಲಿ ಪರಿಚಾರಿಕೆಯೊಬ್ಬಳು ಬಂದು ವಿನೋದಿನಿಯನ್ನು ಕುರಿತು, " ಒಂದು ತಡವೆ ಇತ್ತಕಡೆ ನೋಡು ! ನಿಮ್ಮ ತಾಯಿ ಬಂದಿರುವಳು " ಎಂದು ಹೇಳಿದಳು.

' ತಾಯಿ ಬಂದಿರುವಳು ' ಎಂಬ ಮಾತು ಕಿವಿಗೆ ಬೀಳುತ್ತಲೇ, ಎಲ್ಲೇ ನಮ್ಮಮ್ಮ ? ಎಲ್ಲೇ ನಮ್ಮಮ್ಮ ? ' ಎಂದು ಕೂಗುತ್ತ, ಉನ್ಮತ್ತಭಾವದಿಂದ ವಿಸ್ಫಾರಿತ ನಯನೆಯಾಗಿ ನಾಲ್ಕು ದಿಕ್ಕುಗಳೂ ತಿರುಗಿತಿರುಗಿ ನೋಡಿದಳು.

ಪರಿಚಾರಿಕೆ:—" ನಿಮ್ಮಮ್ಮನು ನಿನ್ನ ಇದಿರಿಗೆ ನಿಂತಿರುವಳಲ್ಲವೆ ? "

ವಿನೋದಿನಿಯು ವಿಸ್ಫಾರಿತಲೋಚನಗಳುಳ್ಳವಳಾಗಿ, ಹೈಮವತಿಯನ್ನು ಸ್ವಲ್ಪ ಹೊತ್ತು ದೃಷ್ಟಿಸಿ ನೋಡಿದಳು. ಅನಂತರ ಭೀತಿವ್ಯಂಜಕ ಸ್ವರದಿಂದ, " ಇಲ್ಲ ! ಇಲ್ಲ !! ಇಲ್ಲ !!! ಇವಳು ನಮ್ಮಮ್ಮನಲ್ಲ ! ನಮ್ಮಮ್ಮನು ಸ್ವರ್ಗಕ್ಕೆ ಹೋದಳು ! ಇವಳು ರಾಕ್ಷಸಿ—ನನ್ನನ್ನು ತಿನ್ನುವುದಕ್ಕೆ ಬಂದಿರುವಳು !!! ನೀನು ನನ್ನನ್ನು ರಕ್ಷಿಸು-ನನ್ನನ್ನುಳಿಸು !!! " ಎಂದು ಕೂಗಿದಳು.

ಮಗಳ ಇಂತಹ ಶೋಚನೀಯವಾದ ಅವಸ್ಥೆಯನ್ನು ನೋಡಿ, ಹೈಮವತಿಯು ಇನ್ನು ತಾಳಲಾರದೆ ಹೋದಳು. ಅವಳ ಉಚ್ಚಶಿಕ್ಷೆ, ಸಭ್ಯತೆ, ಮುಂತಾದುವುಗಳ ಅಭಿಮಾನವು ದೂರವಾಗಿ ಹೋಗಿ ಅವಳೂ ಅಶಿಕ್ಷಿತೆಯರಾದ ಹಿಂದೂ ಹೆಂಗಸರ ಹಾಗೆ ಗಟ್ಟಿಯಾಗಿ ಅಳುವುದಕ್ಕೆ ತೊಡಗಿದಳು. ಆ ಭಯಂಕರವಾದ ದೃಶ್ಯವನ್ನು ನೋಡಿ, ನವೀನಗೋಪಾಲನ ಕಣ್ಣುಗಳಿಂದ ನೀರು ಹರಿದು, ವಕ್ಷಸ್ಥಳವು ತೊಯಿದು ಹೋಯಿತು. ತಾಯಿತಂದೆಗಳಿಬ್ಬರೂ ಹೀಗೆ ಅಳುವುದನ್ನು ನೋಡಿ, ವಿನೋದಿನಿಗೆ ಹಠಾತ್ತಾಗಿ ಜ್ಞಾನೋದಯವಾದ ಹಾಗಾಗಿ, ಸ್ವಲ್ಪ ಅಪ್ರಸ್ತುತಳಾಗಿ, ತಾಯಿಯನ್ನು

ಕುರಿತು—“ ಅಮ್ಮ ! ನಿನಗೆ ಮನಸ್ಸಿಗೆ ಬರಲಿಲ್ಲವೆ ? ನನ್ನ ಮನಸ್ಸಿನ ಆಸೆ ಏನೆಂಬುದು ಗೊತ್ತಾಗಲಿಲ್ಲವೆ ? ಮೊದಲು, ಅವರು ಬರಲಿ—ನನ್ನ ಮನಸ್ಸು ಸರಿಯಾಗುವುದು—ಆಗ ಒಳ್ಳೊಳ್ಳೆಯ ಮಾತುಗಳನ್ನು ಕೇಳುವೆ. ನನಗೆ ಮನಸ್ಸು ಮೊದಲಿನ ಹಾಗಾಗುವುದು ” ಎಂದು ಹೇಳಿದಳು.

ಈ ಸಮಯದಲ್ಲಿ ಜ್ಯೋತಿಪ್ರಕಾಶನು ಅಲ್ಲಿಯೇ ಇದ್ದವನು ನವೀನಗೋಪಾಲನನ್ನು ಕುರಿತು, “ ವಿನೋದಿನಿಯು ಈಗ ಹೇಗಿರುವಳು ? ” ಎಂದು ಕೇಳಿದನು.

ನವೀನಗೋಪಾಲನು ಕಣ್ಣೊರಸಿಕೊಂಡು, “ ಈಗ ಏನೆಂದು ಹೇಳಲಿ ? ನೋಡಿದರೆ, ಆ ನಮ್ಮ ವಿನೋದಿನಿಯ ಹಾಗಿಲ್ಲ; ಈಗ ಉನ್ಮಾದಿನಿಯಾಗಿರುವಳು ” ಎಂದು ಹೇಳಿದನು.

ಈ ಮಾತುಗಳು ವಿನೋದಿನಿಯ ಕಿವಿಗೆ ಬಿದ್ದ ಕೂಡಲೆ ಅವಳು ಚೀತ್ಕಾರಮಾಡುತ್ತ, “ ನಾನು ವಿನೋದಿನಿಯಲ್ಲ—ಎಂದಿಗೂ ವಿನೋದಿನಿಯಲ್ಲ !! ಮೊದಲು ದುರ್ಗಾವತಿಯಾಗಿದ್ದೆನು—ಈಗ ಉನ್ಮಾದಿನಿಯಾದೆನು—ನಿಜವಾಗಿ ಉನ್ಮಾದಿನೀ—”

ಹೀಗೆಂದು ಹೇಳಿ ಜನಕ ಜನನಿ ಮತ್ತು ಜ್ಯೋತಿಪ್ರಕಾಶ ಇವರನ್ನು ಕೈಬೆರಳಿನಿಂದ ನಿರ್ದೇಶಿಸಿ ತೋರಿಸುತ್ತ, ಮೊದಲಿಗಿಂತಲೂ ಉಚ್ಚ ಕಂಠಸ್ವರದಿಂದ, “ ನೀವುಗಳೇ ನನ್ನನ್ನು ಉನ್ಮಾದಿನಿಯಾಗಿ ಮಾಡಿದವರು, ಹೀಗೆ ನಾನು ಉನ್ಮಾದಿನಿಯಾಗುವುದಕ್ಕೆ ನೀವೇ ಮೂಲಕಾರಣ ” ಎಂದು ಕೂಗಿ ಹೇಳಿದಳು.

ಆಗ ನವೀನಗೋಪಾಲನು ಕಣ್ಣೊರಸಿಕೊಂಡು, ರುದ್ಧಕಂಠನಾಗಿ ಬಹು ಕಷ್ಟದಿಂದ, “ ಏತಕ್ಕೆ ? ತಾಯಿ ! ನಾವು ನಿನ್ನನ್ನು ಹೇಗೆ ಉನ್ಮಾದಿನಿಯಾಗಿ ಮಾಡಿದೆವು ? ನಿನ್ನನ್ನು ಮಹೇಶಪುರದಿಂದ ಕರೆತಂದಮೇಲೆ, ನಿನಗೆ ಒಂದು ದಿನವಾದರೂ ಕಷ್ಟ ಕೊಡಲಿಲ್ಲವೆ ” ಎಂದನು.

ಉನ್ಮಾದಿನಿಯು ಉನ್ಮತ್ತಸ್ವರದಿಂದ, “ ನನಗೆ ಆ ನಿಮ್ಮ ಸುಖವು ಬೇಕಿಲ್ಲ—ಬೇಕಿಲ್ಲ ! ನನಗೆ ಸುಖಪಡಿಸುವವರು ಏತಕ್ಕೆ ಬಂದು ಸುಖಪಡಿಸಲಿಲ್ಲ ? ನೀನು ನನ್ನನ್ನು ಕರೆತಂದವನು ಅವರನ್ನು ಏತಕ್ಕೆ ಕರೆತರಲಿಲ್ಲ ? ಏತಕ್ಕೆ ಸಮಾಚಾರವನ್ನು ಕಳುಹಿಸಲಿಲ್ಲ ? ” ಎಂದಳು. ಜ್ಯೋತಿಪ್ರಕಾಶನು ವಿಸ್ಮಿತನಾಗಿ ನವೀನಗೋಪಾಲನನ್ನು ಬಿರುಗಣ್ಣುಗಳಿಂದ ಬಿಂಬಿರನೆ ನೋಡುತ್ತ, ” ಅವನು ಯಾರು ? ” ಎಂದು ಕೇಳಿದನು.

ನವೀನಗೋಪಾಲನು ವಿಷಣ್ಣಮನನಾಗಿ, ಏನೂ ಗೊತ್ತಾಗುವುದಿಲ್ಲವೆಂದನು.

ಆಗ ಉನ್ಮಾದಿನಿಯು ಚೀತ್ಕಾರಮಾಡುತ್ತ, “ ಅವರು ನನ್ನ ಜೀವಿತೇಶ್ವರ ! ... ... ...ಶ್ವರ ! ” ಎಂದು ಕೂಗಿದಳು.

ಜ್ಯೋತಿಪ್ರಕಾಶನು ಪುನಃ ನವೀನಗೋಪಾಲನ ಮುಖವನ್ನು ನೋಡಿದನು. ನವೀನಗೋಪಾಲನು ಮೊದಲಿನ ಹಾಗೆ ವಿಷಣ್ಣವದನನಾಗಿ, ಉನ್ಮಾದಿನಿಯು ಪ್ರಲಾಪವೆಂದನು.

ಈ ಸಮಯದಲ್ಲಿ ನಗೇಂದ್ರನಾಥನು ಅಲ್ಲಿಗೆ ಬಂದನು. ಡಾಕ್ಟರನನ್ನು ನೋಡಿ, ಉನ್ಮಾದಿನಿಯು ಮುಖಪರದೆಯನ್ನು ಎಳೆದುಕೊಂಡು, ಲಜ್ಜೆಯಿಂದ ತಡಬಡ ಸವರಿಸಿಕೊಂಡಳು. ಅನಂತರ ಒತ್ತಟ್ಟಿಗೆ ನಿಂತುಕೊಂಡು ಅಸ್ಫುಟಸ್ವರದಿಂದ, "ಇದೇನೆ ನಾಚಿಕೆಗೇಡು ಬಂದಿರುವರು! ನಾನು ಇನ್ನು ಮಾತನಾಡುವುದುಂಟೆ?" ಎಂದೆಂದುಕೊಂಡಳು.

ಹೀಗೆ ಹೇಳಿಕೊಂಡು ಉನ್ಮಾದಿನಿಯು ಉಸಿರದೆ ಒತ್ತಟ್ಟಿಗೆ ಸ್ವಲ್ಪ ಹೊತ್ತು ನಿಂತಿದ್ದಳು. ಪುನಃ ಅದೇ ಲಜ್ಜಾಭಾವದಿಂದ, "ಎಲ್ಲಿಗೆ ಹೋಗಲೆ? ಯಾರೂ ಸ್ವಲ್ಪ ಕೊಡುಕೊಳ್ಳುವ ಹಾಗೆ ಹೇಳಲಿಲ್ಲವೆ? ಎಷ್ಟು ಯುಗಾಂತರದ ಮೇಲೆ ಬಂದಳೆ, ಅವರಿಗೆ ಸ್ವಲ್ಪವೂ ಆದರ ತೋರಿಸಬೇಡವೇನೆ?" ಎಂದು ಹೇಳಿದಳು.

ಪರಿಚಾರಿಕೆ:—ಅವರು ಡಾಕ್ಟರ ಬಾಬು; ನಿನ್ನನ್ನು ನೋಡುವುದಕ್ಕೆ ಬಂದಿರುವರು, ತಾಯಿ!"

ಇದನ್ನು ಕೇಳಿ ಉನ್ಮಾದಿನಿಯು ಅವಕುಂಠನದ ಬಟ್ಟೆಯನ್ನು ತೆಗೆದು ದೂರ ಬಿಸುಟು, "ಡಾಕ್ಟರ ಬಾಬು! ನಿಮ್ಮಲ್ಲಿ ವಿಷವಿರುವುದೇ? ನಿಮ್ಮ ಬೇರೆ ಔಷಧವನ್ನು ನಾನು ತೆಗೆದುಕೊಳ್ಳುವುದಿಲ್ಲ. ನನಗೆ ವಿಷದ ಔಷಧವನ್ನು ಕೊಡಿರಿ. ದೊಡ್ಡ ಮಾತ್ರೆಯನ್ನು ಮಾಡಿಕೊಡಿರಿ" ಎಂದಳು.

ಡಾಕ್ಟರ:—"ನೀನು ವಿಷದ ಔಷಧವನ್ನು ತಿನ್ನಲೇಕೆ?

ಉನ್ಮಾದಿನಿ:—"ಬಹಳ ಉರಿ—ಬಹಳ ಯಾತನೆ—ಪ್ರಾಣಜ್ವಾಲೆ—ತಲೆಯ ಉರಿ!!! ಎಲ್ಲಾ ಜ್ವಲಿಸಿಹೋಗಿದೆ; ಜ್ವಲಿಸಿ ಸುಟ್ಟು ಬೂದಿಯಾಗಿ ಹೋಗಿದೆ!!!

ಡಾಕ್ಟರು:—"ಒಳ್ಳೆಯದು, ನಾನು ಅವೆಲ್ಲಾ ಸರಿಯಾಗುವ ಹಾಗೆ ಮಾಡುವೆನು.

ಉನ್ಮಾದಿನಿಯು ಈ ಮಾತನ್ನು ಕೇಳಿ ಉನ್ಮತ್ತಭಾವದಿಂದ ಚೀತ್ಕಾರಮಾಡುತ್ತ, "ನೀನು ಎಲ್ಲಾ ಸರಿಯಾಗುವಹಾಗೆ ಮಾಡುವೆಯಾ? ಔಷಧದಿಂದ ಸಾಗದು; ನಿನ್ನ ಔಷಧ ಪ್ರಯೋಜನವಿಲ್ಲ. ಅವರನ್ನು ಕರೆದುಕೊಂಡು ಬಾ! ನನ್ನ ಜ್ವಾಲೆಯೆಲ್ಲಾ ತಣ್ಣಗಾಗುವುದು" ಎಂದಳು.

ಈ ಸಮಯದಲ್ಲಿ ಅಲ್ಲಿ ನಿಂತಿದ್ದವರೆಲ್ಲರೂ ಆತುರದಿಂದ ಡಾಕ್ಟರನ ಮುಖವನ್ನು ನೋಡಿದರು. ಡಾಕ್ಟರನು ಇಂಗಿತದಿಂದ ಅವರೆಲ್ಲರನ್ನೂ ಮಾತನಾಡದಿರುವ ಹಾಗೆ ನಿಷೇಧಿಸಿ, ಪುನಃ, “ ಅವರು ಎಂದರೆ ಯಾರು ? ನಿನಗೇನಾಗಬೇಕು ? ” ಎಂದು ಕೇಳಿದನು.

ಉನ್ಮಾದಿನಿಯು ವಿಸ್ಮಿತನೇತ್ರಳಾಗಿ ಸ್ವಲ್ಪ ಹೊತ್ತು ನಗೇಂದ್ರನಾಥನನ್ನು ಕಣ್ಣೆವೆ ಮುಚ್ಚದೆ ನೋಡಿದಳು. ಏನೋ ಹಿಂದಿನ ವೃತ್ತಾಂತವನ್ನು ನೆನಪಿಗೆ ತಂದುಕೊಳ್ಳುವ ಪ್ರಯತ್ನಪಟ್ಟಳು. ಅನಂತರ ಮೆಲ್ಲಮೆಲ್ಲಗೆ ಅನುಚ್ಚಸ್ವರದಿಂದ, “ಅವರು ನನಗೆ ಏನಾಗಬೇಕೆ ? ಅದು ನಾನರಿಯೆ. ಆದರೆ ಅವರು ಸರ್ವದಾ ನನ್ನ ಮನಸ್ಸಿನಲ್ಲಿರುವರು. ಸ್ವಲ್ಪ ಸ್ವಲ್ಪ ಜ್ಞಾಪಕವಿದೆ. ಅವರು ಬರುತ್ತಾರೆ—ಕೂಡಲೆ ಹೊರಟುಹೋಗುತ್ತಾರೆ. ಅವರು ಯಾವಾಗ ಬರುವರೋ ಯಾವಾಗ ಹೋಗುವರೊ, ಅದು ಗೊತ್ತಾಗುವುದಿಲ್ಲ. ಅವರನ್ನು ಹಿಡಿಯಲಾರೆ ! ” ಎಂದಳು.

ಹೀಗೆ ಹೇಳುತ್ತಿದ್ದ ಹಾಗೆ ಉನ್ಮಾದಿನಿಯು, “ ಈ ತಡವೆ ಸಿಕ್ಕಿದರು. ಇನ್ನು ಬಿಡುವುದಿಲ್ಲ ! ಇನ್ನು ಬಿಡುವುದಿಲ್ಲ !! ” ಎಂದು ಕೂಗಿದಳು.

ಜ್ಯೋತಿಪ್ರಕಾಶನು ಈ ಸಮಯದಲ್ಲಿ ಡಾಕ್ಟರನನ್ನು ಕುರಿತು, “ ಇದೇನು ನಗೇಂದ್ರ ? ಏನಾದರೂ ಗೊತ್ತಾಯಿತೆ ? ” ಎಂದು ಕೇಳಿದನು.

ನಗೇಂದ್ರನಾಥ :—“ಯಾರೋ ಒಬ್ಬ ಮನುಷ್ಯನಿಗೋಸ್ಕರ ಇವಳ ಪ್ರಾಣವು ತುಡಿದುಕೊಳ್ಳುತ್ತಲಿರುವುದು. ಆದರೆ, ಆ ಮನುಷ್ಯನಾರೋ ಅದನ್ನು ತಿಳಿಯಲಾರೆನು.

ನವೀನಗೋಪಾಲ :—“ ನನ್ನ ಗತಿಸಿ ಹೋದ ಅಣ್ಣಂದಿರನ್ನು ಉದ್ದೇಶಿಸಿ ಹೇಳುವ ಮಾತಾಗಿರಬೇಕು. ”

ಈ ಸಮಯದಲ್ಲಿ ಪರಿಚಾರಿಕೆಯು, “ ಅದಲ್ಲವಣ್ಣಾ ! ಅದಲ್ಲ ! ನಿಮಗೆ ಗೊತ್ತಾಗುವುದಿಲ್ಲ ! ಈ ಮಾತೆಲ್ಲಾ ಆ ಭೂತದ ಮಾತು ! ಆ ಭೂತವನ್ನು ಬಿಡಿಸಿದ ಮಂತ್ರವಾದಿಯನ್ನು ಕರೆಯಿಸಿರಿ ! ಅವನನ್ನು ಬರುವ ಹಾಗೆ ಮಾಡಿರಿ ! ನಾನು ಬಹಳ ಕಡೆ ನೋಡಿರುವೆನು ! ಇದೆಲ್ಲಾ ನಾನು ಚೆನ್ನಾಗಿ ಬಲ್ಲೆನು ! ” ಎಂದು ಹೇಳಿದಳು.

ಡಾಕ್ಟರ :—“ ಆ ಮಾತೆಲ್ಲಾ ಹೋಗಲಿ ! ರೋಗಿಯನ್ನು ಹೀಗೆ ಸೆರೆಯಲ್ಲಿ ಇಟ್ಟಿರಬೇಕೇಕೆ ? ”

[illegible] :—“ ಹೊರಗೆ ಓಡಿಹೋಗುವಳೆಂದು ಭಯ, ”

ನಗೇಂದ್ರನಾಥ:—"ಬಾಗಿಲನ್ನು ತೆಗೆದು ಬಿಡಿ. ಇಂತಹ ಮನೆಯಲ್ಲಿ ಇಕ್ಕಟ್ಟಿನಿಂದ ಇರುವುದು ಸರಿಯಲ್ಲ. ಅವಳು ಸ್ವಲ್ಪ ಸ್ವತಂತ್ರವಾಗಿದ್ದರೆ ಒಳ್ಳೆಯದು. ಹೊರಗೆ ಹೋಗದ ಹಾಗೆ ನೋಡಿಕೊಂಡರೆ ಸಾಕು. ಹೀಗಿರುವುದು ಪ್ರಾಣಕ್ಕೆ ಅಪಾಯ!"

ಈ ಸಮಯದಲ್ಲಿ ಉನ್ಮಾದಿನಿಯು ಪುನಃ ರಾಗವನ್ನೆತ್ತಿದಳು:—

ದೇಶೀ ರಾಗ—ರೂಪಕ ತಾಳ.

ಬಾಧಾಂ ವಿಧೇಹಿ ಮಲಯಾನಿಲ ಪಂಚಬಾಣ |
ಪ್ರಾಣಾನ್ ಗೃಹಾಣ ನ ಗೃಹಂ ಪುನರಾಶ್ರಯಿಷ್ಯೇ ||
ಕಿಂ ತೇ ಕೃತಾಂತಭಗಿನಿ ಕ್ಷಮಯಾ ತರಂಗೈ |
ರಂಗಾನಿ ಸಿಂಚ ಮಮ ಶಾಮ್ಯತು ದೇಹದಾಹಃ || *

ಈ ಸೊದೆಯನ್ನು ಕರೆವ ಮನೋಹರಿಯಾದ ಮಧುರ ಸಂಗೀತವನ್ನು ಕೇಳಿ ಎಲ್ಲರೂ ದುಃಖಿತರಾದರು. ಡಾಕ್ಟರ ಬಾಬುವು ಬಿಸುಸುಯ್ದು, "ಅಹಾ! ಕಂಠ ಸ್ವರವು ಅತಿ ಮಧುರವಾದುದು. ಹೀಗೆ ರೋಗಗ್ರಸ್ತವಾಗದಿದ್ದರೆ, ಈಕೆಯು ನಮ್ಮ ಸಮಾಜಕ್ಕೆ ಉಜ್ವಲವಾದ ಶಿರೋಮಣಿಯಾಗಿರುವಳು" ಎಂದು ಹೇಳಿದನು.

ಕೊಟ್ಟಡಿಯ ಬಾಗಿಲನ್ನು ತೆರೆಯಿಸಿ ಬಿಟ್ಟು, ಡಾಕ್ಟರ ಬಾಬುವು ಔಷಧವನ್ನು ಕೊಡುವುದಕ್ಕೆ ಏರ್ಪಾಟುಮಾಡಿ ಹೊರಟು ಹೋದನು.

## ಆರನೆಯ ಪರಿಚ್ಛೇದ.

ಗ್ರಾಕ್ಷ್ಮಿ ತ್ತಲಾಗಿ ತರ್ಕಾಲಂಕಾರ ಮಹಾಶಯನು ಗ್ರಾಮಕ್ಕೆ ಹಿಂದಿರುಗಿ ಬಂದು, ರಾಮಗೋಪಾಲನು ಕಾಲವಾದ ಸಮಾಚಾರವನ್ನು ಕೇಳಿದನು; ಮತ್ತು ದುರ್ಗಾವತಿಯ ತಂದೆಯು ಬಂದು, ದುರ್ಗಾವತಿಯನ್ನು ಕಲಿಕತ್ತೆಗೆ ಕರೆದುಕೊಂಡು ಹೋದನೆಂದೂ ತಿಳಿದುಬಂತು.

---

* ಹೇ ಮಲಯವಾಯುವೇ! ಹೇ ಮನ್ಮಥನೇ! ನನಗೆ ಬಾಧೆಯನ್ನು ಕೊಡು! ನನ್ನ ಪ್ರಾಣಗಳನ್ನು ತೆಗೆದುಕೋ! ನಾನು ಮನೆಯನ್ನು ಪುನಃ ಆಶ್ರಯಿಸುವುದಿಲ್ಲ. ಹೇ ಯಮುನ ಸಹೋದರಿಯೇ ನನ್ನ ಮೇಲೆ ಕ್ಷಮೆಮಾಡುವುದರಿಂದ ನಿನಗೇನು ಪ್ರಯೋಜನ? ನಿನ್ನ ಕೃಪಾತರಂಗಗಳಿಂದ ನನ್ನ ಅಂಗಗಳನ್ನು ನನೆಯಿಸು, ನನ್ನ ದೇಹಜ್ವಾಲೆಯು ಶಾಂತವಾಗಲಿ!

ಈ ಸಮಾಚಾರವನ್ನು ಕೇಳುತ್ತಲೇ, ತರ್ಕಾಲಂಕಾರ ಮಹಾಶಯನು ಅಲಹಾಬಾದಿಗೆ ಖಗೇಂದ್ರನಾಥನಿಗೆ ಸಮಾಚಾರವನ್ನೆಲ್ಲಾ ವಿವರಿಸಿ, ಒಂದು ಕಾಗದವನ್ನು ಬರೆದು ಕಳುಹಿಸಿದನು. ಖಗೇಂದ್ರನಾಥನು ಕಾಗದವನ್ನು ನೋಡಿದೊಡನೆ, ಅಲಹಾಬಾದಿನಿಂದ ಮೂರು ದಿನಗಳೊಳಗೆ ಮಹೇಶಪುರಕ್ಕೆ ಬಂದು, ಅಲ್ಲಿ ತರ್ಕಾಲಂಕಾರ ಮಹಾಶಯನನ್ನು ನೋಡಿ "ಮಹಾಶಯರೇ! ನನ್ನ ಜೀವನ ಮರಣಗಳೆರಡೂ ತಮ್ಮ ಕೈಯಲ್ಲಿರುವುವು. ತಮ್ಮನ್ನು ಹೊರತು, ನನ್ನ ವಿವಾಹಸಮಾಚಾರವನ್ನು ಮತ್ತಾರೂ ಅರಿಯರು. ತಾವು ನನ್ನನ್ನು ಬದುಕಿಸಬೇಕು" ಎಂದು ಹೇಳಿದನು.

ತರ್ಕಾಲಂಕಾರ (ನಗುತ್ತ):—"ಅದಕ್ಕೋಸ್ಕರ ಯೋಚನೆ ಪಡಲೇಕೆ? ನಿನ್ನ ವಿವಾಹವನ್ನು ಕುರಿತು ನಾನು ಮುಖ್ಯ ಸಾಕ್ಷಿಯಾಗಿರುವೆನು. ಅದಲ್ಲದೆ ನನ್ನಲ್ಲಿ ಬೇರೆ ಸಾಕ್ಷ್ಯವೂ ಇರುವುದು. ನಾನು ಸಮಯದಲ್ಲಿರದೆ ಇದ್ದುದಕ್ಕೋಸ್ಕರ ಬಹಳ ನಾಚಿಕೆಯುಳ್ಳವನಾಗಿರುವೆನು. ಚಿಂತೆಯಿಲ್ಲ; ಇದೇ ಊಟವಾದನಂತರ ನಾವಿಬ್ಬರೂ ಕಲಿಕತ್ತೆಗೆ ಹೋಗಿ ಅಲ್ಲಿ ನವೀನಗೋಪಾಲನಿಗೆ ನಡೆದಿರುವ ವಿಚಾರವನ್ನೆಲ್ಲಾ ವಿವರವಾಗಿ ತಿಳಿಸುವ."

ಆ ದಿನ ಊಟವಾದ ಮೇಲೆ ತರ್ಕಾಲಂಕಾರ ಮಹಾಶಯನು ಖಗೇಂದ್ರನನ್ನು ಸಂಗಡ ಕರೆದುಕೊಂಡು ಕಲಿಕತ್ತೆಗೆ ಹೊರಟನು. ಅವರಿಬ್ಬರೂ ಆ ದಿನ ರಾತ್ರಿಯೇ ಕಲಿಕತ್ತೆಗೆ ಮುಟ್ಟಿದರು. ಆ ರಾತ್ರಿ ನವೀನಗೋಪಾಲನು ಇರುವ ಸ್ಥಳವು ಗೊತ್ತಾಗಲಿಲ್ಲ. ತರ್ಕಾಲಂಕಾರ ಮಹಾಶಯನು ಆ ರಾತ್ರಿ ಒಬ್ಬ ಶಿಷ್ಯನ ಮನೆಯಲ್ಲಿ ಉಳಕೊಂಡನು. ಮಾರನೆಯ ದಿನ ಪ್ರಾತಃಕಾಲದಲ್ಲಿ ಎದ್ದು, ಖಗೇಂದ್ರನೊಡನೆ ಹೋಗಿ, ನವೀನಗೋಪಾಲನನ್ನು ನೋಡಿದನು. ಆತನಿಗೂ ನವೀನಗೋಪಾಲನಿಗೂ ಪೂರ್ವಪರಿಚಯವಿರಲಿಲ್ಲ. ತರ್ಕಾಲಂಕಾರ ಮಹಾಶಯನು ಮೊದಲು ತನ್ನ ಸ್ವಂತ ಪರಿಚಯವನ್ನು ಹೇಳಿಕೊಂಡನು.

ಅದಕ್ಕೆ ನವೀನಗೋಪಾಲನು, "ನಾನು ತಮ್ಮ ಸೋದರಮಾವಂದಿರನ್ನು ಬಲ್ಲೆನು. ಆದರೆ ತಮ್ಮನ್ನು ಯಾವಾಗಲೂ ನೋಡಿದ ನೆನಪಿಲ್ಲ" ಎಂದು ಹೇಳಿದನು.

ತರ್ಕಾಲಂಕಾರ:—"ಮೊದಲು ನಾನು ನಮ್ಮ ಮಾವಂದಿರ ಮನೆಯಲ್ಲಿ ಇರುತ್ತಿರಲಿಲ್ಲ. ಈಗ ಅವರು ಸ್ವರ್ಗಸ್ಥರಾದರು. ಅವರಿಗೆ ಸಂತಾನಸಂತತಿ ಇಲ್ಲದುದರಿಂದ ಅವರ ಆಸ್ತಿಗೆಲ್ಲಾ ನಾನೇ ಬಾಧ್ಯನಾದೆನು. ಅದುಕಾರಣ ನಾನೇ ತಮ್ಮ ಕುಲ

ನವೀನಗೋಪಾಲ:—“ ತಾವು ಇಲ್ಲಿಗೆ ಬಂದ ಉದ್ದೇಶವೇನು ? ಕುಲಪುರೋಹಿತರೆಂದು ಹೇಳುವುದರಿಂದ ನಾನು ತಮ್ಮನ್ನು ಕುಲಪುರೋಹಿತರೆಂದೊಪ್ಪಿಕೊಳ್ಳಲು ಸಿದ್ಧನಾಗಿಲ್ಲ.”

ತರ್ಕಾಲಂಕಾರ:—“ ತಮ್ಮ ಅಣ್ಣಂದಿರು ನನ್ನನ್ನು ಕುಲಪುರೋಹಿತರೆಂದು ಅಂಗೀಕರಿಸಿರುವರು. ಅದು ಸಲುವಾಗಿ ನಾನು ನಿಮ್ಮಲ್ಲಿ ಯಾವ ಭಿಕ್ಷೆಯನ್ನು ಬೇಡಲೂ ಬಂದವನಲ್ಲ. ಏಕೆಂದರೆ, ನಾನು ತಮ್ಮಲ್ಲಿ ಆ ಸನ್ಮಾನವನ್ನು ಹೊಂದಲಾರೆನೆಂದು ಬಲ್ಲೆನು. ನಾನು ತಮ್ಮ ಮಗಳ ಮದುವೆಯನ್ನು ಮಾಡಿಸಿದವನು. ಆ ಅಳಿಯನಿಗೂ ತಮಗೂ ಗುರುತುಪರಿಚಯವಿಲ್ಲವಾಗಿ, ನಿಮಗೆ ಅವನ ಪರಿಚಯಮಾಡಿಕೊಡುವುದಕ್ಕೋಸ್ಕರ ಮಾತ್ರ ಬಂದಿರುವೆನು. ಈತನೇ ತಮ್ಮ ಅಳಿಯ; ದುರ್ಗಾವತಿಯ ಗಂಡ.”

ಹೀಗೆಂದು ಹೇಳಿ, ತರ್ಕಾಲಂಕಾರ ಮಹಾಶಯನು ಖಗೇಂದ್ರನನ್ನು ತೋರಿಸಿದನು. ನವೀನಗೋಪಾಲನು ಆಶ್ಚರಿಪಟ್ಟು, ಒಂದು ತಡವೆ ಖಗೇಂದ್ರನ ಮುಖವನ್ನು ನೋಡಿ, ಅನಂತರ ತರ್ಕಾಲಂಕಾರನನ್ನು ಕುರಿತು, “ ಮಾತು ನನಗೆ ಏನೇನೂ ಅರ್ಥವಾಗುವುದಿಲ್ಲ. ನನಗೆ ಹೇಗೆ ಅಳಿಯನಾಗಬೇಕು ? ” ಎಂದು ಕೇಳಿದನು.

ತರ್ಕಾಲಂಕಾರ:—“ ತಮ್ಮ ಅಣ್ಣಂದಿರು ತಮ್ಮ ಮಗಳಾದ ದುರ್ಗಾವತಿಯನ್ನು ಈತನಿಗೆ ಕೊಟ್ಟು ಮದುವೆಮಾಡಿದರು.”

ನವೀನಗೋಪಾಲನು ಪುನಃ ಹೆಚ್ಚು ಆಶ್ಚರ್ಯದಿಂದ, “ ಅದು ಹೇಗೆ ? ಆ ಸಮಾಚಾರ ಸ್ವಲ್ಪವೂ ನನಗೆ ತಿಳಿಯಬರಲಿಲ್ಲ” ಎಂದನು.

ತರ್ಕಾಲಂಕಾರ:—“ ತಾವು ಮಗಳಿಗೆ ಅಲ್ಪ ವಯಸ್ಸಿನಲ್ಲಿ ಹಿಂದೂಮತಾನುಸಾರವಾಗಿ ಮದುವೆಮಾಡಲು ಸಮ್ಮತಿಸಲಾರಿರೆಂದು ಈ ವಿವಾಹವು ಗೋಪ್ಯವಾಗಿ ನಡೆಯಿಸಿದುದಾಯಿತು.”

ನವೀನಗೋಪಾಲ:—“ ಮತ್ತಾರು ಈ ವಿವಾಹ ವಿಚಾರವನ್ನು ಬಲ್ಲವರು ?”

ತರ್ಕಾಲಂಕಾರ:—“ ನಾನು ಬಲ್ಲೆನು ; ಮತ್ತೊಬ್ಬ ತಿಳಿದು ಇದ್ದವರು ಸ್ವರ್ಗಸ್ಥರಾಗಿ ಹೋದರು. ಈಗ ನನ್ನನ್ನು ಹೊರತು ಮತ್ತಾರೂ ಅರಿಯರು.”

ನವೀನಗೋಪಾಲ:—“ ತಮ್ಮ ಮಾತನ್ನು ನಾನು ಹೇಗೆ ನಂಬಲಿ ? ಈ ಹುಡುಗಿಗೋಸ್ಕರ ನಮ್ಮ ಅಣ್ಣಂದಿರು ಸ್ವಲ್ಪ ಆಸ್ತಿಯನ್ನು ಬಿಟ್ಟು ಹೋಗಿರುವರು. ಆ ಆಸ್ತಿಗೋಸ್ಕರವೇ ಈ ತಂತ್ರವೇನಾದರೂ ನಡೆದಿದ್ದರೂ ನಡೆದಿರಬಹುದು.”

ತರ್ಕಾಲಂಕಾರ:—" ನನ್ನಲ್ಲಿ ಬೇರೆ ಪ್ರಮಾಣವೂ ಉಂಟು. ನೀವು ನಿಮ್ಮ ಅಣ್ಣಂದಿರ ಕೈಬರಹವನ್ನು ನೋಡಿದರೆ ಗುರುತಿಸುವಿರೋ ? "

ನವೀನಗೋಪಾಲ:—" ಚೆನ್ನಾಗಿ ಗುರುತಿಸುವೆನು."

ತರ್ಕಾಲಂಕಾರ:—" ಹಾಗಾದರೆ ಈ ಕಾಗದವನ್ನು ಓದಿರಿ."

ಹೀಗೆಂದು ಹೇಳಿ, ತರ್ಕಾಲಂಕಾರನು ಒಂದು ಕಾಗದವನ್ನು ನವೀನಗೋಪಾಲನಿಗೆ ಕೊಟ್ಟನು. ನವೀನಗೋಪಾಲನು ಕಂಪಿತ ಹೃದಯನಾಗಿ, ಆ ಕಾಗದವನ್ನು ಓದಲಾರಂಭಿಸಿದನು. ಕಾಗದವು ಈ ಪರಿಯಾಗಿತ್ತು:—

" ಕಲ್ಯಾಣ ವರೇಷು—

ಈ ಕಾಗದವು ನನ್ನ ಮರಣಾನಂತರ ನಿನಗೆ ಮುಟ್ಟುವ ಹಾಗೆ ಏರ್ಪಾಡುಮಾಡಿರುವೆನು. ಏಕೆಂದರೆ, ಈ ಕಾಗದದಲ್ಲಿ ಬರೆದಿರುವ ಸಮಾಚಾರವು ನಿನಗೆ ಪ್ರೀತಿಕರವಾಗಿ ಇರದು. ನಾನು ನಿನ್ನನ್ನು ಎಷ್ಟರಮಟ್ಟಿಗೆ ಪ್ರೀತಿಸುವೆನೆಂಬುದನ್ನು ಈ ಕಾಲದಲ್ಲಿ ಬರೆಯುವುದಕ್ಕೆ ಇಷ್ಟವುಳ್ಳವನಾಗಿಲ್ಲ. ನಾನು ಬದುಕಿರುವ ಕಾಲದಲ್ಲಿ ನಿನಗೂ ನನಗೂ ವೈಮನಸ್ಯಾಗದಿರುವುದೊಂದೇ ನನಗೆ ಇಷ್ಟವಾದುದು. ಅದು ಕಲುವಾಗಿ ನಿನಗೆ ಒಂದು ಕೆಲಸವನ್ನು ತಿಳಿಸದೆ ನಡೆಯಿಸಿರುವೆನು. ಆ ಕೆಲಸವೇನೆಂದರೆ, ನಾನು ಗೋಪ್ಯವಾಗಿ ನಿನ್ನ ಮಗಳಿಗೆ ಹಿಂದೂ ಮತಾನುಸಾರವಾಗಿ ಮದುವೆಮಾಡಿರುವೆನು. ಮಗಳು ನಿನ್ನವಳಾದರೂ, ನಾನು ದುರ್ಗಾವತಿಯನ್ನು ಪ್ರೀತಿಸುತ್ತಲಿದ್ದೆನೆಂಬುದನ್ನು ನೀನು ಚೆನ್ನಾಗಿ ಬಲ್ಲೆ. ನನ್ನ ಮತದ ನಂಬುಗೆಯ ಪ್ರಕಾರ ನಾನು ಈ ಕಾರ್ಯವನ್ನು ಸರಿಯಾಗಿಯೇ ಮಾಡಿರುವೆನು. ಈ ಕಾರ್ಯವನ್ನು ಕುರಿತು ನೀನು ಸಂತುಷ್ಟನಾದರೂ ಅಥವಾ ಅಸಂತುಷ್ಟನಾದರೂ, ನಾನದನ್ನು ನೋಡುವುದಕ್ಕೆ ಪುನಃ ಬರಲಾರೆನು ನಾನು ದುರ್ಗಾವತಿಯನ್ನು ಯಾವ ಪಾತ್ರನಿಗೆ ಕೊಟ್ಟಿರುವೆನೋ, ಆತನೊಡಗೂಡಿ ಆಕೆಯು ಸುಖಿಯಾಗಿರುವಳೆಂದು ನಾನು ದೃಢವಾಗಿ ನಂಬಿರುವೆನು. ನಾನು ದುರ್ಗಾವತಿಯನ್ನು ಆಕೆಯ ವರನಿಗೆ ಕೊಟ್ಟು ಮದುವೆಮಾಡುವೆನೆಂದು ತಿಳಿದು ನೀನೂ ಸುಖಿಯಾಗುವೆ. ವರನು ನನಗೆ ಪರಮಾಪ್ತಮಿತ್ರನಾದ ಅಶುತೋಷ ಬಾಬುವಿನ ಮಗನಾಗಬೇಕು. ಅವನ ಹೆಸರು ' ಖಗೇಂದ್ರನಾಥ. ' ನಿನ್ನ ಇಷ್ಟಕ್ಕೆ ವಿರೋಧವಾಗಿ ಮದುವೆ .ಮಾಡಿರುವ ತಪ್ಪು ನನ್ನ ತಪ್ಪಾಗಿರುವುದು. ನಾನು ನಿನಗೆ ಜ್ಯೇಷ್ಠ ಸಹೋದರನೆಂಬುದರ ಮೇಲೆ, ನೀನು ಖತಿಗೊಳ್ಳಬೇಡ ನೀನು ನಿನ್ನ ಮಗಳಿಗೂ ಅಳಿಯನಿಗೂ ಆಶೀರ್ವಾದ ಮಾಡಬೇಕೆಂದು ನಾನು ಕೋರುವೆನು. ಈ ಕಾಗದವನ್ನು ತರುವ ತರ್ಕಾಲಂಕಾರಮಹಾಶಯರು, ಅವರಲ್ಲದಿದ್ದರೆ, ಅವರ ಪ್ರತಿನಿಧಿಯು, ಇವರ ಹೊರತು ಮತ್ತಾರೂ ಈ ವಿವಾಹದ ವಿಚಾರವನ್ನರಿಯರು. ನೀನೇನಾದರೂ ಕೇಳಿದರೆ, ಅದಕ್ಕೆ ಅವರು ಉತ್ತರವನ್ನು ಕೊಡುವರು.

ಇತಿ ಆಶೀರ್ವಾದಕ

ಶ್ರೀರಾಮಗೋಪಾಲಶರ್ಮ. "

ಪತ್ರವನ್ನು ಓದುತ್ತಿದ್ದ ಹಾಗೆ ನವೀನಗೋಪಾಲನ ತಲೆಯಮೇಲೆ ಅಕಸ್ಮಾತ್ತಾಗಿ ಆಕಾಶದಲ್ಲಿ ಮೇಘವಿಲ್ಲದೆ ಸಿಡಿಲುಬಿದ್ದಹಾಗಾಗಿ, ಅವನು ಏನೊಂದೂ ಮಾತಿಲ್ಲದೆ ಸ್ತಂಭಿತನಾದನು. ತರ್ಕಾಲಂಕಾರ ಮಹಾಶಯನು, “ಈಗ ನನ್ನ ಮಾತಿನಲ್ಲಿ ತಮಗೆ ನಂಬುಗೆಯುಂಟಾಯಿತೇ?” ಎಂದು ಕೇಳಿದನು.

ನವೀನಗೋಪಾಲನು ಪ್ರಶ್ನೆಗೆ ಉತ್ತರವನ್ನು ಹೇಳದೆ, “ತಾವು ಈ ಕಾಗದವನ್ನು ನನಗೆ ಇದುವರೆಗೆ ಕೊಡಲಿಲ್ಲವೇಕೆ?” ಎಂದು ಕೇಳಿದನು.

ತರ್ಕಾಲಂಕಾರ:—ತಮ್ಮ ಅಣ್ಣಂದಿರು ಸತ್ತಾಗ ನಾನು ಊರಲ್ಲಿರಲಿಲ್ಲ. ನಾನು ಆಗ ನನ್ನ ಶಿಷ್ಯನೊಬ್ಬನ ಮನೆಗೆ ಹೋಗಿದ್ದವನು ಅಲ್ಲಿ ಆಲಸ್ಯವಾಗಿ, ಮೂರು ವಾರಗಳು ಹಾಸಿಗೆಯನ್ನು ಹಿಡಿದು ಮಲಗಿದ್ದೆನು. ಊರಿಗೆ ಬರುತ್ತಲೇ ಈ ಸಮಾಚಾರವು ತಿಳಿಯಬಂತು. ಅಲಹಾಬಾದಿಗೆ ಕಾಗದವನ್ನು ಬರೆದು, ಖಗೇಂದ್ರನನ್ನು ಕರೆಯಿಸುವುದಕ್ಕೆ ಒಂದು ವಾರ ಹಿಡಿಯಿತು. ನಿನ್ನೆ ಖಗೇಂದ್ರನು ನನ್ನ ಮನೆಗೆ ಬಂದು ಸೇರಿದ ಕೂಡಲೆ, ಈ ದಿನ ತಮ್ಮಲ್ಲಿಗೆ ಬಂದಿರುವೆನು.”

ನವೀನಗೋಪಾಲನ ಬಾಯಿಯಲ್ಲಿ ಮಾತಿಲ್ಲ; ಯಾವ ಮಾತನ್ನು ಹೇಳುವುದಕ್ಕೂ ತೋಚದು. ಆಗ ತರ್ಕಾಲಂಕಾರ ಮಹಾಶಯನು ಪುನಃ, “ಈಗ ತಮ್ಮ ಮನಸ್ಸಿನಲ್ಲಿ ಮತ್ತೇನೂ ಸಂದೇಹವಿಲ್ಲವಷ್ಟೆ?” ಎಂದು ಕೇಳಿದನು.

ನವೀನಗೋಪಾಲನು ಅನ್ಯಮನಸ್ಕನಾಗಿ, “ಈಗ ಸಂದೇಹವಿದ್ದರೂ ಇಲ್ಲದಿದ್ದರೂ ಎರಡೂ ಒಂದೇ. ನಾನು ನಮ್ಮ ಬ್ರಹ್ಮೋಮತಾನುಸಾರವಾಗಿ ಪುನಃ ಅವಳಿಗೆ ಮದುವೆಮಾಡಿದೆನು” ಎಂದನು.

ತರ್ಕಾಲಂಕಾರ ಮಹಾಶಯನು ಕೂಡಲೆ, “ಅದು ಹೇಗೆ! ತಾವು ಇಂತಹ ಭಯಂಕರವಾದ ಪಾಪಕಾರ್ಯವನ್ನು ಮಾಡಿದಿರಿ ಹೇಗೆ?” ಎಂದು ಕೇಳಿದನು.

ಖಗೇಂದ್ರನಾಥನು ಈ ಭಯಂಕರವಾದ ಮಾತನ್ನು ಕೇಳಿದ ನಿಮಿಷದಲ್ಲಿ ನಡುಗಿದನು. ಬಿರುಗಣ್ಣು ಬಿಟ್ಟು, ಹುಚ್ಚನಹಾಗೆ ಒಂದು ತಡವೆ ನವೀನಗೋಪಾಲನ ಮುಖವನ್ನೂ, ಒಂದು ತಡವೆ ತರ್ಕಾಲಂಕಾರನ ಮುಖವನ್ನೂ, ತಿರುತಿರುಗಿ ನೋಡಲಾರಂಭಿಸಿದನು. ಅವನು ಯಾವ ಮಾತನ್ನು ಆಡುವುದಕ್ಕೂ ಶಕ್ತನಾಗಿರಲಿಲ್ಲ.

ಇತ್ತಲಾಗಿ ತರ್ಕಾಲಂಕಾರ ಮಹಾಶಯನ ಮಾತಿಗೆ ಉತ್ತರವಾಗಿ ನವೀನಗೋಪಾಲನು, “ನಾನು ಇದನ್ನು ಪಾಪಕಾರ್ಯವೆಂದು ತಿಳಿದಿಲ್ಲ” ಎಂದನು.

ತರ್ಕಾಲಂಕಾರನು ಈ ಸಲವೆ ಕ್ರೋಧದಿಂದ ಅಧೀರನಾಗಿ, “ ಒಂದು ಸಲವೆ ಮದುವೆಯಾಗ ಹೆಣ್ಣಿಗೆ ಪುನಃ ಮದುವೆ ಮಾಡುವುದು ಪಾಪಕಾರ್ಯವಲ್ಲವೆಂದು ಹೇಗೆ ಹೇಳುವಿರಿ ? ” ಎಂದನು.

ನವೀನಗೋಪಾಲನೂ ಕೋಪಭರಿತನಾಗಿ, ‘ ಹಿಂದೂಮತದ ಪ್ರಕಾರ ಆದ ಮದುವೆಯನ್ನು ಮದುವೆಯೆಂದು ನಾವು ಲೆಕ್ಕಿಸುವುದಿಲ್ಲ ” ಎಂದನು.

ತರ್ಕಾಲಂಕಾರ :—ತಾವು ಲೆಕ್ಕಿಸದೆ ಇರಬಹುದು. ಪ್ರಪಂಚದಲ್ಲಿ ಎಲ್ಲಾ ಕಡೆಯಲ್ಲಿಯೂ ಲೆಕ್ಕಿಸುವರು. ಹಿಂದೂ ವಿವಾಹವು ತಮ್ಮಗಳ ವಿವಾಹದ ಹಾಗೆ ಕೇವಲ ಮನಸ್ಸಿನ ಮೇಳನ ಅಥವಾ ಪ್ರತಿಜ್ಞಾಬದ್ಧವೆಂದು ಆಗುವುದಿಲ್ಲ. ಹಿಂದೂ ವಿವಾಹದೊಂದಿಗೆ ಧರ್ಮದ ಗೂಢವಾದ ಗುರುತರ ಸಂಬಂಧವುಂಟು. ಆ ಸಂಬಂಧವು ಇಹಕಾಲ ಮತ್ತು ಪರಕಾಲ ಇವೆರಡು ಕಾಲಕ್ಕೂ ವ್ಯಾಪಿಸಿರುವುದು. ಅದನ್ನಾರೂ ತಪ್ಪಿಸಲಾರರು ; ಆ ಸಂಬಂಧವು ಯಾವಾಗಲೂ ತಪ್ಪದು. ತಮ್ಮ ಮಗಳನ್ನು ಇಂತಹ ಗುರುತರವಾದ ಸಂಬಂಧದಿಂದ ಹೇಗೆ ತಪ್ಪಿಸುವಿರಿ ? ”

ನವೀನಗೋಪಾಲ : —“ ನನ್ನ ಮಗಳನ್ನು ಕನ್ಯಾದಾನ ಮಾಡುವುದಕ್ಕೆ ನನ್ನ ಹೊರತು ಮತ್ತಾರಿಗೂ ಅಧಿಕಾರವಿಲ್ಲ. ”

ತರ್ಕಾಲಂಕಾರ :—“ ಅದು ತಪ್ಪು; ತಮ್ಮ ಮಗಳನ್ನು ಸ್ವಂತ ಮಗಳಹಾಗೆ ಪಾಲನ ಮಾಡುತ್ತಲಿದ್ದ ನಿಮ್ಮ ಅಣ್ಣಂದಿರಿಗೆ ಸಂಪೂರ್ಣ ಅಧಿಕಾರವಿತ್ತು. ವಿವಾಹವು ಧರ್ಮಸಮ್ಮತವಾಯಿತೆ, ಅಥವಾ ಇಲ್ಲವೆ, ಅದನ್ನು ಕುರಿತು ನಿಮ್ಮ ಮಗಳನ್ನೇ ವಿಚಾರಿಸಬಹುದು. ”

ನವೀನಗೋಪಾಲ :—“ ನನ್ನ ಮಗಳು ಈಗ ವಾಯುರೋಗಗ್ರಸ್ತಳಾಗಿರುವಳು. ಅವಳೊಡನೆ ಯಾವ ಮಾತು ಕೇಳುವುದಕ್ಕೂ ಉಪಾಯವಿಲ್ಲ. ”

ತರ್ಕಾಲಂಕಾರ :—“ ಹಾಗಾದರೆ ಅವಳ ಆ ವಾಯುರೋಗಕ್ಕೆ ತಾವೇ ಕಾರಣ. ಈ ಭಯಂಕರವಾದ ಪಾಪಕಾರ್ಯವೇ ಅವಳನ್ನು ಹುಚ್ಚಿಯನ್ನಾಗಿ ಮಾಡಿರುವುದು. ”

ಆಗ ನವೀನಗೋಪಾಲನ ಮನಸ್ಸಿನಲ್ಲಿ ಏನು ಹೊಳೆಯಿತೋ ಅದನ್ನು ಹೇಳುವುದಕ್ಕಾಗುವುದಿಲ್ಲ. ಆದರೆ ಅವನು ಬಿಸುಸುಯ್ದು ದುಃಖದಿಂದ ಕಂದಿದ ಮುಖವುಳ್ಳವನಾಗಿ, “ ಆದುದು ಆಗಿಹೋಯಿತು ; ಈಗ ಅದಕ್ಕೆ ಬೇರೆ ಉಪಾಯವಿಲ್ಲ ” ಎಂದನು.

ಈ ಸಮಯದಲ್ಲಿ ಖಗೇಂದ್ರನ ಮನಸ್ಸಿನಲ್ಲಿ ಏನಾಗುತ್ತಲಿತ್ತೋ, ಅದನ್ನು ನಾವು ಬಣ್ಣಿಸಲಾರೆವು. ಅವನು ಮನದಲ್ಲಿ, ಇಷ್ಟು ದಿನದಮೇಲೆ ದುರ್ಗಾವತಿಯನ್ನು ಹೊಂದಿ ಎಷ್ಟೋ ಆನಂದಿತನಾಗುವೆನೆಂದು ಕಲ್ಪಿಸಿಕೊಂಡಿದ್ದನು. ಅದೆಲ್ಲಾ ಬೇರ್ಪಟ್ಟು ಹೋಗಿ, ಈ ಭಯಂಕರ ಸಮಾಚಾರ; ಸಮಾಚಾರವಾದರೋ, ಮನವು ಅದನ್ನು ಧಾರಣೆ ಮಾಡಲಾರದು. ಕಣ್ಣಾರೆ ಕಂಡರೂ ಹಠಾತ್ತಾಗಿ ನಂಬಲು ಯೋಗ್ಯವಾಗಿರ ಲಿಲ್ಲ. ಅವನು ಹೆಚ್ಚು ಬೇಳಂಬದಿಂದ ಮನಸ್ಸಿನಲ್ಲಿ 'ಇದು ಕನಸೋ ಅಥವಾ ದಿಟವೋ' ಎಂದು ಭ್ರಮಿಸುತ್ತಲಿದ್ದನು.

ಕನಸೇ ಆಗಲಿ, ದಿಟವೇ ಆಗಲಿ, ಖಗೇಂದ್ರನು ಬೇಳಿಡುತ್ತ, ಮರ್ಮಾಂತಿಕ ವಾದ ಯಾತನೆಯಿಂದ ಚೆದರಿದ ಮನಸ್ಸುಳ್ಳವನಾದನು: ಬಾಯಿಯಲ್ಲಿ ಮಾತು ಹೊರ ಡದು. ಆದರೆ ಮನಸ್ಸಿನಲ್ಲಿ ಭೀಷಣವಾದ ಬೆಂಕಿಯು ಹತ್ತಿ ಉರಿಯುತ್ತಲಿತ್ತು. ದುರ್ಗಾವತಿಗೆ ಹುಚ್ಚು ಹಿಡಿದಿದೆ ಎಂಬ ಸಮಾಚಾರವನ್ನು ಕೇಳಿ, ಈ ಕಾರ್ಯವು ಅವಳ ಇಷ್ಟಕ್ಕೆ ವಿರೋಧವಾಗಿ ನಡೆದಿರಬೇಕೆಂದು ನಂಬುಗೆ ಉಂಟಾಯಿತು. ಆಗ ಅವನಿಗೆ ಕ್ರೋಧ ಹುಟ್ಟಿ, ಸರ್ವಶರೀರವೂ ಹೆಚ್ಚು ಉರಿಯಲಾರಂಭವಾಯಿತು. ಅವನು ಸಹಿಸಲಸದಳವಾದ ಕೋಪದಿಂದ, 'ತಾವು ಇಂತಹ ಕೆಟ್ಟ ಕೆಲಸವನ್ನು ಏಕೆ ಮಾಡಿದಿರಿ?' ಎಂದು ಕೇಳಿದನು.

ಖಗೇಂದ್ರನಾಥನ ಈ ಪ್ರಕಟವಾದ ಕ್ರೋಧಯುಕ್ತವಾದ ಮಾತನ್ನು ಕೇಳಿ, ನವೀನಗೋಪಾಲನ ದೃಷ್ಟಿಯು ಅವನಮೇಲೆ ಬಿತ್ತು. ಅವನನ್ನು ಕುರಿತು ನಾಲ್ಕಾರು ಮಾತುಗಳನ್ನು ಹೇಳಬೇಕೆಂದು ನವೀನಗೋಪಾಲನಿಗೆ ಇಷ್ಟವುಂಟಾಯಿತು. ಆದರೆ ಖಗೇಂದ್ರನು ಆ ಕಾಲದಲ್ಲಿ ತಾಳಿದ್ದ ಮೂರ್ತಿಯನ್ನು ನೋಡಿ, ಮನಸ್ಸಿನಲ್ಲಿ ಭೀತಿ ಗೊಂಡು. ಧೀರಭಾವದಿಂದ, "ನಾನು ಅಂತಹ ಕೆಟ್ಟ ಕೆಲಸವನ್ನು ಮಾಡಿಲ್ಲ. ನನ್ನ ಸ್ವಂತ ಮಗಳಿಗೆ ಮದುವೆಮಾಡಿದೆನು. ಇದು ಕೆಟ್ಟ ಕೆಲಸವಾದುದು ಹೇಗೆ?" ಎಂದನು.

ಖಗೇಂದ್ರನಾಥನು ಪುನಃ ಉತ್ತೇಜಿತ ಸ್ವರದಿಂದ, "ನೀವು ನಿಮ್ಮ ಮದುವೆ ಯಾಗಿದ್ದ ಹೆಣ್ಣಿಗೆ ಮದುವೆಮಾಡಿರುವಿರಿ!!" ಎಂದನು.

ನವೀನಗೋಪಾಲನು ಪುನಃ ಧೀರಭಾವದಿಂದ, "ಆ ಪೂರ್ವ ವಿವಾಹವಾ ದುದು ನನಗೆ ತಿಳಿದಿದ್ದರೆ. ಈ ಕಾರ್ಯವು ನಡೆಯುದಿರುವ ಸಂಭವವು ಇತ್ತೆಂದು ತೋರುವುದು. ಆದರೆ ನಾನೇನು ಮಾಡಲಿ? ಎಲ್ಲವೂ ಈಶ್ವರೇಚ್ಛೆ!" ಎಂದನು.

ತರ್ಕಾಲಂಕಾರ :—“ ಆದರೆ ಈಗಿನ ಮದುವೆಯಾಗುವ ಸಮಯದಲ್ಲಿ ನಿಮ್ಮ ಮಗಳ ಇಷ್ಟವೇನೆಂಬುದನ್ನು ವಿಚಾರಿಸಿದಿರಾ? ತಾವು ಹಾಗೇನಾದರೂ ಮಾಡಿದಿರೊ?”

ನವೀನಗೋಪಾಲ :—“ ಅದನ್ನೆಲ್ಲಾ ವಿಚಾರಿಸಬೇಕಾಗಿದ್ದ ಭಾರವು ನಮ್ಮ ಮನೆಯ ಹೆಂಗಸಿನ ಮೇಲಿತ್ತು. ನಾನು ಸ್ವಂತವಾಗಿ ಏನೂ ವಿಚಾರಿಸಲಿಲ್ಲ. ಈಗ ವಿಚಾರಿಸಲಾಗಿ ಆಕೆಯೂ ಮರೆತುಹೋದಳೆಂದು ತಿಳಿಯಬರುವುದಾಗಿದೆ ಅವಳಿಗೆ ಇದೆಲ್ಲಾ ತಿಳಿದರೆ, ಅವಳೂ ಅನುತಾಪ ಪಡುವಳು.”

ತರ್ಕಾಲಂಕಾರ ಮಹಾಶಯನು ಕೋಪ ತಡೆಯಲಾರದೆ, “ ಕೇವಲ ಅನುತಾಪವು ಈ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಾಗದು. ಶಾಸ್ತ್ರದಲ್ಲಿಯೂ ಇಂತಹ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಉಕ್ತವಾಗಿರುವ ಹಾಗೆ ನನಗೆ ತೋರುವುದಿಲ್ಲ” ಎಂದನು.

ನವೀನಗೋಪಾಲ :—“ ಇನ್ನು ಹೆಚ್ಚು ಮಾತು ಬೆಳೆಸಿ ಪ್ರಯೋಜನವಿಲ್ಲ. ಈ ವಿವಾಹವನ್ನು ಮಾಡಿ, ನಾನು ಒಂದು ದಿನವಾದರೂ ಸುಖಿಯಾಗಲಿಲ್ಲ. ದುರ್ಗಾವತಿಯ ಅವಸ್ಥೆಯನ್ನು ನೋಡಿ, ನನ್ನ ಎದೆಯು ಸೀಳಿಹೋಗುತ್ತಲಿರುವುದು. ಈ ವಿವಾಹವನ್ನು ಮಾಡಿದುದರಿಂದಲೇ ಆಕೆಗೆ ಈ ಅವಸ್ಥೆಯುಂಟಾಗಿರುವುದೆಂದು ನಿಮ್ಮ ಹೇಳಿಕೆಯ ಮೇಲೆ ತಿಳಿದಿರುವೆನು.”

ಈ ಸಮಯದಲ್ಲಿ ಖಗೇಂದ್ರನು ತರ್ಕಾಲಂಕಾರನ ಕಿವಿಯಲ್ಲಿ ಏನೋ ಉಸಿರಿದನು. ತರ್ಕಾಲಂಕಾರ ಮಹಾಶಯನು ಪುನಃ, “ ತಮ್ಮ ಮಗಳನ್ನು ನಾವು ಒಂದು ಕಡವೆ ನೋಡಬೇಕೆಂದು ಇಚ್ಛುಳ್ಳವರಾಗಿದ್ದೇವೆ” ಎಂದನು.

ನವೀನಗೋಪಾಲ :—“ ನನ್ನ ಮಗಳು ಈ ಮನೆಯಲ್ಲಿಲ್ಲ. ಅವಳಿಗೆ ಮದುವೆಯಾಗಿರುವ ಗಂಡನಾದ ಜ್ಯೋತಿಪ್ರಕಾಶನ ಮನೆಯಲ್ಲಿರುವಳು. ಈಗ ಅವಳು ಇರುವ ಅವಸ್ಥೆಯನ್ನು ನೋಡಿದರೆ, ಅವಳನ್ನು ನೋಡುವುದೂ ನೋಡದಿರುವುದೂ ಎರಡೂ ಸಮ.”

ತರ್ಕಾಲಂಕಾರನು ಜ್ಯೋತಿಪ್ರಕಾಶನ ಮನೆ ಇರುವ ಸ್ಥಳವನ್ನು ವಿಚಾರಿಸಿಕೊಂಡು, ಖಗೇಂದ್ರನೊಡನೆ ಕುಂದಿದ ಮನವುಳ್ಳವನಾಗಿ ಅಲ್ಲಿಂದ ಹೊರಟುಹೋದನು. ನವೀನಗೋಪಾಲನು ಹೆಂಡತಿಯನ್ನು ನೋಡುವ ಸಲುವಾಗಿ ಮನೆಯೊಳಗೆ ಹೊರಟುಹೋದನು.

# ಏಳನೆಯ ಪರಿಚ್ಛೇದ.

---

ಹೈಮವತಿಯು ತನ್ನ ಪ್ರಿಯಪುತ್ರಿಯಾದ ವಿನೋದಿನಿಯ ಅವಸ್ಥೆಯನ್ನು ಸ್ವತಃ ನೋಡಿ, ವಿಶೇಷವಾಗಿ ವ್ಯಸನಾಕ್ರಾಂತಳಾಗಿದ್ದಳು. ಬಹುಕಾಲದ ಮೇಲೆ ಮಗಳನ್ನು ಪಡೆದು, ಮನಸ್ಸಿನಲ್ಲಿ ಯಾವ ಆಶಾಬೀಜವು ಅಂಕುರಿತವಾಗಿತ್ತೋ, ಅದು ಈಗ ನಿರ್ಮೂಲವಾಗಿ ಹೋಯಿತು. ಹೈಮವತಿಯು ಪುತ್ರಿಶೋಕದಿಂದ ಶೋಕಾಕುಲಳಾಗಿದ್ದುದರಿಂದ, ಆಹಾರಾದಿಗಳ ಮೇಲೆಯೂ ಅವಳಿಗೆ ಅಷ್ಟು ದೃಷ್ಟಿಯಿಲ್ಲ. ಈ ಬೇಸಗೆಯಲ್ಲಿ ಕುಡಿಯುವ ನೀರಿಗೆ ಆಳುಗಳು ನೀರುಗಡ್ಡೆಯನ್ನು ಹಾಕದೆ ಕೊಟ್ಟರೂ, ಅವಳು ಒಂದು ಮಾತನ್ನೂ ಹೇಳದೆ ಕುಡಿದುಬಿಡುವಳು. ಟೀ ಅಥವಾ ಕಾಫಿಗೆ ಸಕ್ಕರೆ ಸಾಲದಿದ್ದರೂ, ಹುಬ್ಬುಗಂಟಿಕ್ಕದೆ ಕುಡಿದುಬಿಡುವಳು. ಸಂಧ್ಯಾಕಾಲದಲ್ಲಿ ವಾಯುಸೇವನೆಗೆ ಹೊರಗೆ ಹೋಗುವುದು ಹೈಮವತಿಗೆ ನಿತ್ಯದ ಕೆಲಸವಾಗಿತ್ತು; ಆ ವಾಯುಸೇವನೆಗೆ ಹೋಗುವುದನ್ನು ನಿಲ್ಲಿಸಿಬಿಟ್ಟಳು. ಆಳುಗಳು ಗೊರಿಕೆಹೊಡೆಯುತ್ತ ನಿದ್ದೆಹೋಗುತ್ತಿದ್ದರೂ, ಹೈಮವತಿಯು ಈಗ ಮೊದಲಿನ ಹಾಗೆ ಅವರನ್ನು ತಿರಸ್ಕರಿಸುತ್ತಿರಲಿಲ್ಲ. ಅಥವಾ ಹೊಡೆಯುತ್ತಿರಲಿಲ್ಲ. ಇಷ್ಟು ಅಲ್ಲದೆ ಊಟವಾದಮೇಲೆ ಹಗಲುಹೊತ್ತು ಅಭ್ಯಾಸವಾಗಿದ್ದ ನಿದ್ರೆಯನ್ನು ಈ ಮನಸ್ಸಿನ ವ್ಯಥೆಯ ಸಲುವಾಗಿ ಬಿಟ್ಟಿದ್ದಳು.

ಈ ದಿನ ಹೈಮವತಿಯು ಊಟವಾದ ಬಳಿಕ, ಹಾಸಿಗೆಯಮೇಲೆ ಬಿದ್ದುಕೊಂಡು ಹೊರಳಾಡುತ್ತಿದ್ದಳು ಏನು ಮಾಡಿದರೂ ನಿದ್ದೆ ಹತ್ತದು. ಒಬ್ಬ ಪರಿಚಾರಿಕೆಯು ಬೀಸಣಿಗೆ ಬೀಸುತ್ತ, ಅವಳಿಗೆ ಗಾಳಿಯನ್ನು ಹಾಕುತ್ತಿದ್ದಳು. ಮತ್ತೊಬ್ಬಳು ಅವಳ ತಲೆಗೆ ನೀರುಗಡ್ಡೆಯನ್ನು ಹಾಕುತ್ತ ಒತ್ತುತ್ತಿದ್ದಳು ಇನ್ನೊಬ್ಬಳು ಕೈಯಲ್ಲಿ ಲ್ಯಾವೆಂಡರ್ ಸೀಸೆಯನ್ನು ಹಿಡಿದು ಹತ್ತಿರ ನಿಂತಿದ್ದಳು. ಈ ಸಮಯದಲ್ಲಿ ನವೀನಗೋಪಾಲನು ಆ ಚಿಕ್ಕಮನೆಗೆ ಬಂದನು. ಬಂದವನು ಹೆಂಡತಿಯು ಈ ಪ್ರಕಾರ ಅವಸ್ಥೆಪಡುವುದನ್ನು ಕಂಡು, ಬಹಳ ಮನಗುಂದಿದವನಾದನು. ಮೆಲ್ಲಮೆಲ್ಲಗೆ ಹಾಸಿಗೆಯ ಪಾರ್ಶ್ವದಲ್ಲಿ ಕುಳಿತುಕೊಂಡು, ಬಿಸುಸುಯ್ದು, ಮೊದಲು ತಾನೇ ಮಾತೆತ್ತಿ, "ದುರ್ಗಾವತಿಗೆ ಇಂತಹ ರೋಗವುಂಟಾಗುವುದಕ್ಕೆ ಕಾರಣ—'

ಆ ಕೂಡಲೆ ಗಂಡನ ಮಾತನ್ನು ಪೂರೈಸಗೊಡಿಸದೆ, ಹೈಮವತಿಯು, "ನಿನಗೂ ಆ ರೋಗ ಬಂದು ಹಿಡಿದ ಹಾಗಿದೆ. ನೀನು ಪುತ್ರಿಶೋಕದಿಂದ ಅವಳ ಹೆಸರನ್ನು ಕೂಡ ಮರೆತುಬಿಟ್ಟೆ" ಎಂದು ಹೇಳಿದಳು.

ನವೀನಗೋಪಾಲನು ಹೆಂಡತಿಯ ಮಾತಿಗೆ ಸ್ವಲ್ಪ ಬೇಸರಗೊಂಡು, “ಹೋಗಲಿ, ಹೆಸರಿನಲ್ಲಿ ಏನೂ ಬರುವುದಿಲ್ಲ. ಈಗ ನನಗೆ ಬಹಳ ಅನುತಾಪವುಂಟಾಗಿರುವುದು. ಡಾಕ್ಟರ್ ನಗೇಂದ್ರಬಾಬುವು ದುರ್ಗಾವತಿಯ ತಲೆಯ ಮಿದುಲು ಹೆಚ್ಚು ಆನಂದದಿಂದ ವಿಕೃತವಾಯಿತೆಂದು ಹೇಳಿದ್ದನು. ಅದು ತಪ್ಪು; ದುರ್ಗಾವತಿಗೆ ಮರ್ಮಾಂತಿಕವಾದ ಮನೋಕಷ್ಟವುಂಟಾಗಿ, ಅವಳು ಉನ್ಮಾದಗ್ರಸ್ತೆಯಾಗಿರುವಳು. ಮೊದಲು ನಮ್ಮ ಅಣ್ಣಂದಿರು ಅವಳಿಗೆ ಹಿಂದೂಮತದಪ್ರಕಾರ ವಿವಾಹವನ್ನು ಮಾಡಿದ್ದರು. ನಾವು ಪುನಃ ಅವಳಿಗೆ ನಮ್ಮ ಬ್ರಹ್ಮೋಮತಕ್ಕನುಗುಣವಾಗಿ ಮದುವೆ ಮಾಡಿದೆವು” ಎಂದನು.

ಮಲಗಿದ್ದ ಹೈಮವತಿಯು ನವೀನಗೋಪಾಲನ ಮಾತು ಕಿವಿಗೆ ಬಿದ್ದ ನಿಮಿಷದಲ್ಲಿ ಹಠಾತ್ತಾಗಿ ಎದ್ದು ಕುಳಿತುಕೊಂಡಳು. ತತ್‌ಕ್ಷಣದಲ್ಲಿ ಹೆಚ್ಚು ಅಚ್ಚರಿಯಿಂದ, “ಅದೇನು ? ನಮ್ಮ ಮಗಳಿಗೆ ಹಿಂದೂಮತದ ಪ್ರಕಾರ ಮದುವೆಯೋ ? ಬಾಯಿಬಿಡಬೇಡ ! ಇಂತಹ ಮಾತು ನಮ್ಮ ಸಮಾಜದಲ್ಲಿ ಹೊರಬಿದ್ದರೆ, ಏನೆಂದಾರು ? ಸಾಕು ! ಇನ್ನೂ ಆ ಮಾತು ಬೇಡ ! ” ಎಂದಳು.

ನವೀನಗೋಪಾಲನು ಹೆಂಡತಿಯ ಮಾತು ಕೇಳಿ ಬೇಸರಗೊಂಡು, “ಆ ಮಾತನ್ನು ಗುಟ್ಟಾಗಿಡಬೇಕೆಂದು ನಿನಗೇಕಿಷ್ಟು ಆಗಚಾಟಲೆ ? ನಿನಗೆ ಮದುವೆಯಾದುದು ಯಾವ ಮತದ ಪ್ರಕಾರ ? ಹಿಂದೂಮತದ ಪ್ರಕಾರವಲ್ಲವೆ ? ಈಗ ನಾವು ಮಾಡಿದ ಕೆಲಸ ಎಷ್ಟನರ್ಥಕ್ಕಿಟ್ಟಿತೋ ತಿಳಿದಿರುವೆಯಾ ? ಅದನ್ನು ಹೇಳುವುದಕ್ಕೆ ಇಲ್ಲಿಗೆ ಬಂದೆನು ”! ಎಂದನು.

ಹೈಮವತಿಯು ಆಶ್ಚರ್ಯಪಟ್ಟು, “ಇದರಿಂದ ಕೆಲಸ ಕೆಟ್ಟುದುದೇನು ?” ಎಂದಳು.

ನವೀನಗೋಪಾಲ :—“ನಾವು ಈ ಕೆಲಸವನ್ನು ಮಾಡಿಯೇ ನಮ್ಮ ಮಗಳನ್ನು ಉನ್ಮಾದಿನಿಯಾಗಿ ಮಾಡಿದೆವು. ಅವಳು ಆ ದಿನ ತನ್ನ ಮನಸ್ಸಿನ ಯಾತನೆಯಿಂದ ಹೇಳಿದ ಮರ್ಮಸ್ಪರ್ಶಿಯಾದ ಮಾತುಗಳು ನಿನಗೆ ನೆನಪಿಲ್ಲವೆ ? ಅವಳಾಡಿದ ಮಾತುಗಳೆಲ್ಲಾ ಹುಚ್ಚಿಯ ಮರುಳುಮಾತುಗಳೆಂದು ನಾವು ಅತ್ತಕಡೆ ದೃಷ್ಟಿ ಕೊಡಲಿಲ್ಲ. ಎದೆಗೆ ನಾಟುವ ಉನ್ಮಾದಿನಿಯ ಆ ಮಾತುಗಳನ್ನು ಈಗ ನೆನಪಿಗೆ ತಂದುಕೊಂಡರೆ, ನನ್ನ ಪ್ರಾಣವೇ ಹಾರಿಹೋಗುತ್ತಲಿರುವುದು. ಒಳ್ಳೆಯದು, ಮೊದಲು ನಿನಗೆ ಈ ವಿಚಾರವು ಸ್ವಲ್ಪವೂ ಗೊತ್ತಾಗಲಿಲ್ಲವೇ ?”

ಹೈಮವತಿ :—ಗೊತ್ತಿಲ್ಲದೆ ಉಂಟೆ ? ಅದನ್ನು ತಿಳಿದವಳಾಗಿಯೇ ಬೇಗಬೇಗನೆ ಮದುವೆ ಮಾಡಿದೆನು. ಅವಳಿಗೆ ಮೊದಲು ಏನೋ ಒಂದು ವಿಧವಾದ ಮದುವೆ ಯಾಗಿರಬೇಕೆಂದು ಗೊತ್ತಾಯಿತು. ಆದರೆ ಅದೆಂತಹ ಮದುವೆ ? ಮದುವೆಯಾದವಳಿಗೆ ವರನಲ್ಲಿ ಪ್ರಣಯ ಹುಟ್ಟಿ ಮದುವೆಯಾಗಬೇಕು. ಪ್ರಣಯವು ಹುಟ್ಟಬೇಕಾದರೆ ಪಾತ್ರನಿಗೂ ಪಾತ್ರಿಗೂ ಪರಸ್ಪರ ಕೆಲವು ಕಾಲ ಹೆಚ್ಚು ಅಂತರ್ಯವಾದ ಬಳಕೆ ಬೇಕು. ಅದಾವುದೂ ಇಲ್ಲ. ಅವಳಿಗೆ ಪ್ರಣಯವೆಂಬ ಪದಾರ್ಥವೇ ಗೊತ್ತಿಲ್ಲ. ಪುನಃ ಮತ್ತೊಂದು ಮದುವೆ ಮಾಡಿಬಿಟ್ಟರೆ, ಹಿಂದೆ ಹಿಂದೂಮತದ ಪ್ರಕಾರ ಆಗಿದ್ದೆಂಬ ಪ್ರಣಯಶೂನ್ಯವಾದ ಮದುವೆಯು ತಾನಾಗಿಯೇ ಮರೆತುಹೋಗುವುದೆಂದು ಬೇಗಬೇಗನೆ ಅವಸರಪಟ್ಟು, ಮದುವೆಯ ಕೆಲಸವನ್ನು ಮಾಡಿದೆನು. ''

ನವೀನಗೋಪಾಲ :—'' ಮಾಡಿದ ಕೆಲಸವು ಸರಿಯಾದ ಕೆಲಸವಾಗಲಿಲ್ಲ. ''

ಹೈಮವತಿ :—'' ಮಾಡದೆ ಹೋಗಿದ್ದರೆ—ನೀನೇ ನೋಡು. ಹಣದ ಆಸೆಗೆ ಮಗಳ ಮೇಲಿನ ಮಮತೆಯನ್ನು ತೊರೆದುಬಿಟ್ಟು, ಅವಳನ್ನು ಇದುವರೆಗೂ ಹಿಂದೂಗಳ ಮನೆಯಲ್ಲಿ ಬಿಟ್ಟಿದ್ದೆವು. ಆ ಹಣವೂ ನಮ್ಮ ಕೈಬಿಟ್ಟು ಹೋಗುತ್ತಲಿತ್ತು. ಹುಡುಗಿಯನ್ನು ಒಬ್ಬ ಹಿಂದೂ ಹುಡುಗನು ಮದುವೆಮಾಡಿಕೊಂಡು ಕರೆದುಕೊಂಡು ಹೋಗಿದ್ದರೆ, ಆ ರಾಶಿ ಹಣ ನಮ್ಮ ಕೈಸೇರುತ್ತಲಿತ್ತೇ ? ನಾವು ಪುನಃ ಮದುವೆ ಮಾಡದೆ ಹೋಗಿದ್ದರೆ, ಹಣವೂ ಹೋಗಿ, ಬ್ರಹ್ಮೋಸಮಾಜದಲ್ಲಿ ನಮಗೆ ತಲೆಯೂ ತಗ್ಗಿಹೋಗುತ್ತಲಿತ್ತು. ಉಯಿಲಿನ ಪ್ರಕಾರ ಹಣವೆಲ್ಲಾ ಹಿಂದೂಹುಡುಗನ ಪಾಲಾಗುತ್ತಲಿರಲಿಲ್ಲವೆ ? ನಮ್ಮ ಮಕ್ಕಳಿಗೆ ಏನೂ ಬರುತ್ತಿರಲಿಲ್ಲ. ಮಾಡದೆ ಹೋಗಿದ್ದರೆ—ನೀನು ಹೇಳು, ಏನಾಗುತ್ತಲಿತ್ತು ? ''

ನವೀನಗೋಪಾಲ :—'' ಹಣಕ್ಕೋಸ್ಕರ ಮಗಳನ್ನು ಹೀಗೆ ಉನ್ಮಾದಿನಿಯಾಗಿ ಮಾಡಿದುದು ಒಳ್ಳೆಯ ಕೆಲಸವಾಯಿತೆ ? ನಿನಗೆ ಹಣದಮೇಲೆ ಎಷ್ಟು ಆಸೆ ! ಹಾಳು ಹಣದ ಪಿಶಾಚಿಯಾಗಿ, ಮಕ್ಕಳ ಮೇಲಿನ ಮಮತೆ ಮುಂತಾದುದೆಲ್ಲಾ ತೊಲಗಿ ಹೋಯಿತು. ಮನಸ್ಸಿನಲ್ಲಿ ದುಃಖವುಂಟಾಗಲಿಲ್ಲವೆ ? ಅನುತಾಪ ಬೇಡವೆ ? ''

ಈ ಪರಿಯಾದ ಪತಿಯ ಮಾತಿನಿಂದ, ಹಿಮದಿಂದ ತೊಯಿದು ಅರಳಿದ ಪದ್ಮದ ಹಾಗಿದ್ದ ಹೈಮವತಿಯ ಮುಖವು ಗಂಭೀರಭಾವವನ್ನು ತಾಳಿ, ಅಭಿಮಾನದಿಂದ ತಟಗುಟ್ಟಲಾರಂಭಿಸಿತು. ಹೈಮವತಿಯು ಮುಖವನ್ನು ಬೇರೆ ಕಡೆ ತಿರುಗಿಸಿಕೊಂಡು, ಪಕ್ಕದಲ್ಲಿದ್ದ ಹೆಂಗಸರನ್ನು ನೋಡಿ ಕರುಣಸ್ವರದಿಂದ, '' ನನಗೆ ದುಃಖವಿಲ್ಲವೆ !

ನಾನು ಕಣ್ಣಾರೆ ವಿನೋದಿನಿಯ ಕಷ್ಟಯಾತನೆಗಳನ್ನೆಲ್ಲಾ ನೋಡಿದ ದಿನ ಮೊದಲ್ಗೊಂಡು ಹಾಸಿಗೆಯನ್ನು ಬಿಟ್ಟು ಎದ್ದಿಲ್ಲ. ನೀವು ಹೇಳಿರಿ? ನನಗೆ ಕಷ್ಟವಿಲ್ಲವೆ? ಹಗಲು ರಾತ್ರಿ ನೋಡಿದವರು ನೀವು ಹೇಳಿರಿ? ನಾನು ಸುಖದಲ್ಲಿರುವೆನೊ, ದುಃಖದಲ್ಲಿರುವೆನೊ ನಿಜವನ್ನು ಹೇಳಿರಿ'' ಎಂದು ಅಳವಳಿಸಿದಳು.

ಹೀಗೆಂದು ಹೇಳಿ ತನ್ನ ಮಾನವನ್ನು ಸ್ಥಾಪಿಸುವ ಭಾರವನ್ನು ಇದಿರಿಗೆ ನಿಂತಿದ್ದ ಗೆಳತಿಯಮೇಲೂ ಸೇವಕಿಯರಮೇಲೂ ಹಾಕಿಬಿಟ್ಟು, ಹೈಮವತಿಯು ಉಡುಪಿನ ಜೇಬಿನಲ್ಲಿ ಮಡಿಸಿಟ್ಟಿದ್ದ ಪಟ್ಟು ಕೈವಸ್ತ್ರವನ್ನು ತೆಗೆದು, ಅದರ ಒಂದೆರಡು ಮಡವುಗಳನ್ನು ಮಾತ್ರ ಬಿಚ್ಚಿ, ಅದರಿಂದ ಕಣ್ಣುಗಳನ್ನು ಮರೆಮಾಡಿ ಮುಚ್ಚಿಕೊಂಡು, ನೂತನ ಸಭ್ಯಾಚಾರಪದ್ಧತಿಗನುಸಾರವಾಗಿ ಅಳುತ್ತ ಕುಳಿತಳು. ಹೈಮವತಿಯ ಅಳುವನ್ನು ಕಂಡು, ನವೀನಗೋಪಾಲನಿಗೆ ತಲೆತಿರುಗಿದಹಾಗಾಗಿ, ಅವನು ಗಾಬರಿಪಟ್ಟು' "ನೀನು ಮೊದಲು ವಿವಾಹವಾದುದನ್ನು ನೋಡಿದವಳಲ್ಲ. ನಿನಗೆ ಹೇಗೆ ಗೊತ್ತು? ಮತ್ತೇನುತಾನೇ ಮಾಡಬಲ್ಲವಳಾಗಿದ್ದೆ? ಹುಡುಗಿಯು ಎಲ್ಲಾ ಸಮಾಚಾರವನ್ನು ಹೊರಪಡಿಸಿ ಹೇಳಬೇಕಾಗಿತ್ತು. ಆ ಮಾತು ಹೋಗಲಿ! ಬಿಡು! ಈಗ ಹುಡುಗಿಯ ಮೊದಲಿನ ಗಂಡನು ಬಂದಿರುವನು. ಇತ್ತಲಾಗಿ ಈ ಅವಸ್ಥೆ. ಹುಡುಗಿಯ ಅವಸ್ಥೆ ನೋಡಿದರೆ ಅದು ಹಾಗೆ.........ಈಗ ಮಾಡುವುದೇನು?'' ಎಂದನು.

ಹೈಮವತಿಯು ಆಗಲೂ ಅಭಿಮಾನಭರಿತಳಾಗಿ, "ಅದನ್ನು ನಾನು ಹೇಗೆ ಹೇಳಲಿ? ನನಗೇನು ಗೊತ್ತು?'' ಎಂದಳು.

ನವೀನಗೋಪಾಲನು ಆಶ್ಚರ್ಯಪಟ್ಟು, "ನೀನೇ ಎಲ್ಲವನ್ನು ತಿಳಿದವಳು. ನಿನ್ನ ಮಾತಿಲ್ಲದೆ ನಾನು ಯಾವ ಕೆಲಸವನ್ನು ಮಾಡಿರುವೆನು?'' ಎಂದನು.

ಪತಿಯ ಇಂತಹ ಮಾತುಗಳನ್ನು ಕೇಳಿದ ಪತ್ನಿಯ ದುರಭಿಮಾನವು ಮತ್ತೆಷ್ಟು ಹೊತ್ತುತಾನೇ ಉಳಿದಿರುವುದು? ಹೈಮವತಿಯು ಆಗ ಕಣ್ಣಿಗೆ ಮರೆಮಾಡಿಕೊಂಡಿದ್ದ ಕೈವಸ್ತ್ರವನ್ನು ತೆಗೆದು, ಪುನಃ ಮೊದಲಿನ ಹಾಗೆ ಮಡುಪುಮಾಡಿ, ಅದನ್ನು ಇದ್ದೆಡೆಯಲ್ಲಿಟ್ಟುಕೊಂಡು, ಗೆಳತಿಯನ್ನೂ ಪರಿಚಾರಿಕೆಯನ್ನೂ ಹೊರಗೆ ಹೋಗುವ ಹಾಗೆ ಅಪ್ಪಣೆ ಮಾಡಿ, ಅನುಚ್ಚಸ್ವರದಿಂದ ಮೆಲ್ಲಮೆಲ್ಲಗೆ ಗಂಡನನ್ನು ಕುರಿತು, "ನಮ್ಮ ವಿನೋದಿನಿಯು ಮೊದಲಿನ ಹಾಗೆ ಸುಸ್ಥಳಾಗಿ, ಅದರೊಂದಿಗೆ ನಿನ್ನ ಅಣ್ಣನ ಆಸ್ತಿಯೂ ನಮ್ಮ ಕೈಬಿಟ್ಟು ಹೋಗದಿರುವುದಕ್ಕೆ ಏನು ಉಪಾಯವನ್ನು ಮಾಡಬೇಕೋ ಆ ಉಪಾಯವನ್ನು ಹುಡುಕಿ ಮಾಡಬೇಕು. ಇದರಿಂದ ನಮ್ಮ ಸಮಾಜದವರು ನಿಂದಿಸುವರೆಂದು ಹೆದರಬೇಡ'' ಎಂದು ಹೇಳಿದಳು.

ನವೀನಗೋಪಾಲನು ಸ್ವಲ್ಪಹೊತ್ತು ಚಿಂತಿಸಿ ನೋಡಿ, ಅನಂತರ, “ ಅದೇ ಸರಿಯಾದ ಮಾರ್ಗ. ನಾನು ಜ್ಯೋತಿಪ್ರಕಾಶನಿಗೆ ಹೇಗಾದರೂ ತಿಳಿಯಹೇಳಿ, ಅವನಿಗೆ ಆಗಿರುವ ವಿವಾಹದ ಸಂಬಂಧವನ್ನು ಬಿಡುಗಡೆ ಮಾಡುವಹಾಗೆ ಮಾಡುವೆನು. ಅದಲ್ಲದೆ ಅವನು ಆ ಉನ್ಮಾದಿನಿಯನ್ನು ಕಟ್ಟಿಕೊಂಡು ಏನುತಾನೇ ಮಾಡಲಾಪನು ? ದುರ್ಗಾವತಿಯನ್ನು ಮೊದಲು ಮನೆಗೆ ಕರೆದುಕೊಂಡು ಬಾ ! ಅನಂತರ ಪರಪಕ್ಷದವರು ನಾವು ಹೇಳಿದಹಾಗೆ ಕೆಲಸ ಮಾಡಲೊಪ್ಪಿಕೊಂಡರೆ, ಆಗವರಿಗೆ ಮಗಳನ್ನು ಬಿಟ್ಟುಕೊಟ್ಟು ಬಿಡುವ ” ಎಂದು ಹೇಳಿದನು.

ಹೈಮವತಿಯು ಮುಖವನ್ನು ಅಲ್ಲಾಡಿಸುತ್ತ, “ ಅಹಾ ! ನಿನ್ನ ಬುದ್ಧಿಯು ಎಂತಹ ಯುಕ್ತಿಯುಕ್ತವಾದುದು ! ಮೊದಲು, ನೀನು ಅದನ್ನೆಲ್ಲಾ ವ್ಯವಸ್ಥೆಪಡಿಸು. ಅನಂತರ ಜ್ಯೋತಿಪ್ರಕಾಶನ ಮದುವೆಯ ಸಂಬಂಧವನ್ನು ಬಿಡಿಸಿ, ಹುಡುಗಿಯನ್ನು ಮನೆಗೆ ಕರೆತರಬೇಕು. ಹಾಗೆ ಮಾಡದಿದ್ದರೆ ಹುಡುಗಿಯೂ ಹೋಗಿ, ಅವಳೊಡನೆ ಆಸ್ತಿಯೂ ಕೈಬಿಟ್ಟು ಹೋಗಿಬಿಡುವುದು ” ಎಂದು ಹೇಳಿದಳು.

“ ಒಳ್ಳೆಯದು, ಹಾಗೆಯೇ ಮಾಡುವೆನು ” ಎಂದು ಹೇಳಿ ನವೀನಗೋಪಾಲನು ಜ್ಯೋತಿಪ್ರಕಾಶನ ಮನೆಯ ಕಡೆಗೆ ಬೇಗಬೇಗನೆ ಕಾಲುಹಾಕುತ್ತ ಹೊರಟು ಹೋದನು.

## ಎಂಟನೆಯ ಪರಿಚ್ಛೇದ.

ಜ್ಯೋತಿಪ್ರಕಾಶನು ನಿಟ್ಟುಸಿರನ್ನು ಬಿಟ್ಟು, “ ತಮ್ಮ ಮಾತುಗಳಲ್ಲಿ ನನಗೆ ನಂಬುಗೆ ಇಲ್ಲ. ಆದರೆ ಅವಸ್ಥೆಯನ್ನು ನೋಡಿದರೆ, ಈಗ ನಂಬುಗೆಯುಂಟಾಗುವುದು ” ಎಂದು ಹೇಳಿದನು.

ತರ್ಕಾಲಂಕಾರ ಮಹಾಶಯನು, “ ತಾವು ಇಷ್ಟು ಸಹಜವಾಗಿ ನಂಬವಿರೆಂದು ನಾನು ಯೋಚಿಸಿರಲಿಲ್ಲ ” ಎಂದನು.

ಜ್ಯೋತಿಪ್ರಕಾಶ :—“ ಹಾಗೆ ನಂಬುವುದಕ್ಕೆ ಕಾರಣವುಂಟು ಮೊದಲಿನಿಂದಲೂ ಇಂತಹ ಘಟನೆಯೊಂದು ನಡೆದಿರಬೇಕೆಂದು ಊಹೆಯಿತ್ತು. ಈಗ ಅದು ಖಂಡಿತವಾಯಿತು. ಈಗ ತಾವು ಹೇಳುವುದೇನು ? ”

ತರ್ಕಾಲಂಕಾರ :—“ನೀನು ಶಿಷ್ಯ ಮತ್ತು ಶಾಂತನಾದವನೆಂದು ತೋರುತ್ತಿದೆ. ನಿನ್ನಲ್ಲಿಗೆ ಬರುವುದಕ್ಕೆ ಮೊದಲು ನಮಗೆ ಉಂಟಾಗಿದ್ದ ಭಯಕ್ಕೆ ಕಾರಣವಿಲ್ಲವೆಂದು ಈಗ ಗೊತ್ತಾಯಿತು. ನಾವು ಹಳ್ಳಿಗಾಡಿನಲ್ಲಿರತಕ್ಕ ಹಿಂದೂಗಳು. ಬ್ರಹ್ಮೋಸಮಾಜಕ್ಕೆ ಸೇರಿದವರ ಬಳಿಗೆ ಹೋಗುವುದಕ್ಕೆ ಭಯಪಡುವೆವು. ಅದಲ್ಲದೆ ನವೀನಗೋಪಾಲನು ನಮ್ಮ ವಿಷಯದಲ್ಲಿ ನಡೆಯಿಸಿದ ವ್ಯವಹರಣೆಯನ್ನು ನೋಡಿ, ಹಿಂದೆ ನಡೆದಿರುವ ವೃತ್ತಾಂತವನ್ನೆಲ್ಲಾ ಹೇಳುವುದಕ್ಕೆ ಹೆದರುವೆವು.”

ಜ್ಯೋತಿಪ್ರಕಾಶ :—“ನವೀನಗೋಪಾಲನು ನಿಮ್ಮನ್ನು ಕುರಿತು ನಿಷ್ಠುರ ಮಾಡಿದನೇನು ?”

ತರ್ಕಾಲಂಕಾರ :—“ಮೊದಲು ನಿಷ್ಠುರ ಮಾಡಿದನು. ಅನಂತರ ಕಡೆಕಡೆಗೆ ಸಮಾಧಾನಗೊಂಡನು. ನಾನು, ‘ನೀವೆ ನಿಮ್ಮ ಮಗಳು ಉನ್ಮಾದಿನಿಯಾಗುವುದಕ್ಕೆ ಕಾರಣರಾದಿರಿ’ ಎಂದು ಒತ್ತಿ ಖಂಡಿತವಾಗಿ ಹೇಳಿದಮೇಲೆ ಸ್ವಲ್ಪ ಶಾಂತಮೂರ್ತಿಯನ್ನು ತಾಳಿದನು.”

ಜ್ಯೋತಿಪ್ರಕಾಶ :—“ನೀವು ಅವನಿಗೆ ನಿಜವನ್ನು ಹೇಳಿದಿರಿ. ನನಗೆ ಅದೆಲ್ಲಾ ಮೊದಲು ಗೊತ್ತಾಗಿರಲಿಲ್ಲ. ಈಗ ಆ ಉನ್ಮಾದಿನಿಯು ಹೇಳುವ ಮಾತುಗಳೂ ಮಾಡುವ ಕಾರ್ಯಗಳೂ ಎಲ್ಲಾ ಅರ್ಥವಾಗುತ್ತಲಿವೆ. ನಾನು ಈ ವಿವಾಹವನ್ನು ಮಾಡಿಕೊಂಡು ಎಷ್ಟು ಅನ್ಯಾಯವನ್ನು ಮಾಡಿರುವೆನೊ, ಅದನ್ನು ಇಷ್ಟೆಂದು ಹೇಳಲಾರೆನು. ಅವಳಿಗೆ ಮನಸ್ಸಿಗೆ ಎಷ್ಟು ಕಷ್ಟವಾಗಿ ಹೀಗೆ ಉನ್ಮಾದಿನಿಯಾಗಿರಬೇಕೋ, ಅದನ್ನು ಸುಲಭವಾಗಿ ಊಹಿಸಿಕೊಳ್ಳಬಹುದು. ತಾವು ಏನೂ ಹೇಳಿದರೂ ಅದನ್ನು ಮಾಡುವುದಕ್ಕೆ ಸಿದ್ಧನಾಗಿರುವೆನು.”

ತರ್ಕಾಲಂಕಾರನು ಸ್ವಲ್ಪ ಹೊತ್ತು ಹಾಗೆಯೇ ಯೋಚಿಸಿದನು. ಅನಂತರ ಒಂದು ತಡವೆ ಖಗೇಂದ್ರನ ಮುಖವನ್ನು ನೋಡಿದನು. ಪುನಃ ಸ್ವಲ್ಪ ಯೋಚಿಸಿದನು. ಪುನಃ ಜ್ಯೋತಿಪ್ರಕಾಶನನ್ನು ಕುರಿತು, “ನಾನೇನು ಹೇಳಲಿ? ನನ್ನ ತಲೆ! ನೀನು ಮದುವೆಮಾಡಿಕೊಂಡು ಹೆಣ್ಣನ್ನು ಮನೆಗೆ ಕರೆದುಕೊಂಡು ಬಂದಿರುವಾಗ, ನಾವು ಅವಳನ್ನು ಮನೆಗೆ ಹೇಗೆ ಕರೆದುಕೊಂಡು ಹೋಗಲಾದೀತು ? ಅದು ಆಗಲಾರದು” ಎಂದನು.

ಜ್ಯೋತಿಪ್ರಕಾಶ :—“ಏತಕ್ಕೆ ಕರೆದುಕೊಂಡು ಹೋಗಕೂಡದು ? ನಮ್ಮ ಸಮಾಜದ ಮಂದಿರದಲ್ಲಿ ನಾವಿಬ್ಬರೂ ಪ್ರತಿಜ್ಞಾಬದ್ಧರಾದುದು ಹೊರತು ನಮಗೆ

ಗಂಡಹೆಂಡಂದಿರಿಗೆ ಪುತ್ತಾವವಿಧವಾದ ಸಂಪರ್ಕವೂ ಆಗಿಲ್ಲ. ನಿಮ್ಮ ದುರ್ಗಾವತಿಯು ಮೊದಲು ಹೇಗೆ ಪವಿತ್ರಳಾಗಿ ಸತಿಯಾಗಿದ್ದಳೋ, ಈಗಲೂ ಹಾಗೆಯೇ ಶುದ್ಧಳಾಗಿರುವಳು.''

ತರ್ಕಾಲಂಕಾರ :—'' ಆದರೂ ಈಗ ಆಗಿರುವ ವಿವಾಹದ ಸಮಾಚಾರವು ನಮ್ಮ ಹಿಂದೂಗಳಿಗೆ ತಿಳಿದರೆ, ಬಹಳ ಅನರ್ಥಕ್ಕೆ ಕಾರಣವಾಗುವುದು.''

ಜ್ಯೋತಿಪ್ರಕಾಶ :—'' ಹಾಗಾದರೆ, ಪುತ್ತಾವ ವಿಚಾರದಲ್ಲಿ ನನ್ನೊಡನೆ ಮಾತನಾಡುವುದಕ್ಕೆ ಬಂದಿರುವಿರಿ ? ಮತ್ತು ಹೇಳುವುದಕ್ಕೆ ಸಂಕುಚಿತರಾಗಿರುವಿರಿ ?''

ತರ್ಕಾಲಂಕಾರ :—'' ರಾಮಗೋಪಾಲನು ಸಾಯುವ ಕಾಲದಲ್ಲಿ ರೊಕ್ಕವಾಗಿ ಅರುವತ್ತುಸಾವಿರ ರೂಪಾಯಿಯನ್ನೂ, ಸ್ಥಾವರ ಆಸ್ತಿಯಾಗಿ ಎಪ್ಪತ್ತು, ಎಂಭತ್ತು ಸಾವಿರ ರೂಪಾಯಿಯನ್ನೂ ಬಿಟ್ಟು, ಉಯಿಲಿನ ಮೂಲಕವಾಗಿ ಅದನ್ನೆಲ್ಲಾ ದುರ್ಗಾವತಿಗೆ ಕೊಟ್ಟಿರುವನು. ಅದಕ್ಕೆಲ್ಲಾ ಅವಳ ಈ ಗಂಡನನ್ನು ಅಧಿಕಾರಿಯಾಗಿ ಮಾಡಿರುವನು. ಈಗ ಆ ಆಸ್ತಿಯೆಲ್ಲಾ ಯಾರ ವಶದಲ್ಲಿರುವುದೋ, ಅದನ್ನೂ ಕೇಳುವುದಕ್ಕೆ ಬಂದೆನು.''

ಜ್ಯೋತಿಪ್ರಕಾಶ :—'' ನನಗೆ ಆ ವಿಚಾರವಾವುದೂ ಗೊತ್ತಿಲ್ಲ. ಆ ಹುಡುಗಿಯ ಆಸ್ತಿಯೆಲ್ಲಾ ನವೀನಗೋಪಾಲನ ಸ್ವಾಧೀನದಲ್ಲಿರುವುದಾಗಿ ಮಾತ್ರ ಕೇಳಿರುವೆನು.''

ತರ್ಕಾಲಂಕಾರನು ಸ್ವಲ್ಪ ಯೋಚಿಸಿ, '' ಒಂದುವೇಳೆ ಚಿಕಿತ್ಸೆಯಿಂದ ದುರ್ಗಾವತಿಯು ಆರೋಗ್ಯಲಾಭವನ್ನು ಹೊಂದಿ, ಶಾಸ್ತ್ರಪ್ರಕಾರ ಅವಳನ್ನು ನಾವು ಗ್ರಹಣ ಮಾಡುವುದಾದರೆ, ಅವಳ ಆಸ್ತಿಯನ್ನೆಲ್ಲಾ ಅವಳಿಗೆ ಕೊಡಬೇಕಾಗುವುದು'' ಎಂದನು.

ಖಗೇಂದ್ರನಾಥನು ಆ ಕೂಡಲೆ, '' ನನಗೆ ಆ ಆಸ್ತಿ ಮುಂತಾದುದು ಯಾವುದೂ ಬೇಡ. ನನಗೆ ಹೆಂಡತಿಯು ಆರೋಗ್ಯಸ್ಥಿತಿಯಲ್ಲಿ ಬಂದರೆ ಸಾಕು'' ಎಂದನು.

ಜ್ಯೋತಿಪ್ರಕಾಶ :—'' ನಾನು ತಿಳಿದಿರುವವರೆಗೆ ಅವಳು ನಿಮ್ಮನ್ನು ನೋಡಿದರೆ ಸಾಕು. ಅದರಿಂದಲೇ ಅವಳು ಆರೋಗ್ಯಲಾಭವನ್ನು ಹೊಂದಿ, ರೋಗವೆಲ್ಲಾ ಹೋಗಿ ಬಿಡುವುದು.''

ತರ್ಕಾಲಂಕಾರ ಮಹಾಶಯರು ಖಗೇಂದ್ರನನ್ನು ನೋಡಿ, '' ಇನ್ನು ನಾನು ಹೇಳುವುದು ಏನು ಉಳಿದಿರುವುದು ?'' ಎಂದನು.

ಖಗೇಂದ್ರನಾಥನು ಅವನತ ಮಸ್ತಕನಾಗಿ, '' ನಾನು ಒಂದು ಸಲವೆ ಅವಳನ್ನು ನೋಡಲು ಇಷ್ಟವುಳ್ಳವನಾಗಿರುವೆನು'' ಎಂದನು.

ಜ್ಯೋತಿಪ್ರಕಾಶನು ಕೂಡಲೆ. “ ನಾನು ನಿಮ್ಮನ್ನು ಅದನ್ನೇ ಕೇಳಿಕೊಳ್ಳಬೇಕೆಂದಿದ್ದೆನು, ಬೇಕಾದರೆ, ಈಗಲೇ ನೋಡಬಹುದು ” ಎಂದನು.

ಶರ್ಕರಾಲಂಕಾರ :—“ ಅವಳನ್ನು ಎಲ್ಲಿ ಇರಿಸಿರುವಿರಿ ? ”

ಜ್ಯೋತಿಪ್ರಕಾಶ :—“ ಮನೆಯಲ್ಲಿ ಬೀಗ ಹಾಕಿ ಕೂಡಿಹಾಕಿಡುವುದು ಸರಿಯಲ್ಲವೆಂದು ಡಾಕ್ಟರನು ಹೇಳಿದ ಕಾರಣ, ಅವಳನ್ನು ನಮ್ಮ ಮನೆಯ ಹಿಂದೆ ಇರುವ ತೋಟದಲ್ಲಿ ಬಿಟ್ಟಿದ್ದೇವೆ. ತೋಟಕ್ಕೆ ಸುತ್ತಲೂ ಮನೆಗಳಿರುವುದರಿಂದ, ಅವಳು ಮತ್ತೆಲ್ಲಿಯೂ ಹೋಗುವುದಕ್ಕೆ ಮಾರ್ಗವಿಲ್ಲ, ಆ ತೋಟಕ್ಕೆ ಹೋದರೆ ಅವಳನ್ನು ನೋಡಬಹುದು. ”

ಖಗೇಂದ್ರನಾಥನು ಕೂಡಲೇ ಎದ್ದು ನಿಂತನು. ಅವನೊಂದಿಗೆ ಶರ್ಕರಾಲಂಕಾರ ಮಹಾಶಯನು ಎದ್ದನು. ಈ ಸಮಯದಲ್ಲಿ ನವೀನಗೋಪಾಲನು ಅಲ್ಲಿಗೆ ಬಂದನು; ಬಂದು ಜ್ಯೋತಿಪ್ರಕಾಶನ ಬಾಯಿಯಿಂದ ನಡೆದಿದ್ದ ಮಾತುಕಥೆಗಳನ್ನೆಲ್ಲಾ ಕೇಳಿದನು. ಜ್ಯೋತಿಪ್ರಕಾಶನು ದುರ್ಗಾವತಿಯನ್ನು ಪರಿತ್ಯಾಗ ಮಾಡಲು ಸಮ್ಮತವುಳ್ಳವನಾಗಿರುವ ಸಂಗತಿಯನ್ನು ತಿಳಿದು ಸಂತುಷ್ಟನಾದನು. ಆದರೆ ಮಗಳು ಕಡೆಗೆ ತನ್ನ ಕೈಬಿಟ್ಟು ಹೋಗುವಳೆಂದು ಚಿಂತಿತನಾದನು. ಈ ಸಮಯದಲ್ಲಿ ದುರ್ಗಾವತಿಯನ್ನು ನೋಡಬೇಕೆಂಬ ಮಾತು ಬಂತು. ನವೀನಗೋಪಾಲನು ಅದಕ್ಕೆ ಒಪ್ಪಲಿಲ್ಲ. ಆದರೆ ಜ್ಯೋತಿಪ್ರಕಾಶನು, ನೋಡಿದರೆ ಒಳ್ಳೆಯದಾಗುವುದೆಂದು ಹೇಳಿದಮೇಲೆ ನವೀನಗೋಪಾಲನು ಪುನಃ ಆಕ್ಷೇಪಿಸಲಾರದೆ ಸುಮ್ಮನಿದ್ದನು.

ಅನಂತರ ನಾಲ್ಕು ಮಂದಿಯೂ ತೋಟಕ್ಕೆ ಹೋದರು. ಅಲ್ಲಿ ಹೋಗಿ ನೋಡಲಾಗಿ, ಉನ್ಮಾದಿನಿಯು ವನದೇವಿಯ ಹಾಗೆ ಅಲಂಕೃತಳಾಗಿ ತಿರುಗಾಡುತ್ತಲಿದ್ದಳು. ಹೂವೆಲ್ಲಾ ಮಾಲೆಯಾಗಿ ಕಟ್ಟಿ ಧರಿಸಿಕೊಂಡಿದ್ದಳು. ಈ ದಿನ ಉನ್ಮಾದಿನಿಯು ಹೂವಿನ ಅಂಗಿ ತೊಟ್ಟಿದ್ದ ಹಾಗೆ ಮೈಯೆಲ್ಲಾ ಹೂವಿನಿಂದ ಮುಚ್ಚಿಹೋಗಿತ್ತು. ಕಂಠದಲ್ಲಿ ಹೂವಿನ ಹಾರ—ಶಿರದಲ್ಲಿ ಹೂವಿನ ಕಿರೀಟ—ಮೈಯೆಲ್ಲಾ ಹೂವಿನಿಂದ ಅಲಂಕಾರ. ಉನ್ಮಾದಿನಿಯು ತನ್ನ ಮನಸ್ಸಿಗೆ ಬಂದಹಾಗೆ ಹಾಡುವಳು—ಕುಣಿದಾಡುವಳು—ಅಲ್ಲಲ್ಲಿ ಹೂವನ್ನೆತ್ತುವಳು.

ಖಗೇಂದ್ರನಾಥನು ರೆಪ್ಪೆಹಾಕದೆ ನೋಡಲಾರಂಭಿಸಿದನು ನೋಡುತ್ತಿದ್ದಹಾಗೆ ಅವನ ಕಣ್ಣು ಅಶ್ರುಧಾರಾಕ್ರಾಂತವಾಯಿತು. ಉನ್ಮಾದಿನಿಗೆ ಅತ್ತಕಡೆ ದೃಷ್ಟಿಯಿರಲಿಲ್ಲ. ಅವಳು ಆನಂದದಿಂದ ತನ್ನ ಇಷ್ಟಬಂದ ಕಡೆ ತಿರುಗಾಡುತ್ತಲಿದ್ದಳು.

" ಈ ದಿನ ಉನ್ಮಾದಿನಿಗೆ ಇಷ್ಟು ಆನಂದವೇತಕ್ಕೆ?" ಎಂದು ಅಲ್ಲಿದ್ದ ನಾಲ್ಕು ಮಂದಿಯೂ ಯೋಚಿಸುತ್ತಲಿದ್ದರು. ಆದರೆ ಅವರಿಗೆ ಅದರ ಕಾರಣವನ್ನು ತಿಳಿಯಲಸಾಧ್ಯವಾಗಿತ್ತು.

ಕ್ರಮವಾಗಿ ಅವರು ಉನ್ಮಾದಿನಿಯ ಸಮೀಪ, ಹೋಗಲಾರಂಭಿಸಿದರು. ಆದರೂ ಉನ್ಮಾದಿನಿಯು ಅತ್ತಕಡೆ ನೋಡಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ಅವರೆಲ್ಲರೂ ಉನ್ಮಾದಿನಿಯ ಇದಿರಿಗೆ ಹೋಗಿ ನಿಂತರು. ಆದರೂ ಉನ್ಮಾದಿನಿಯು ಅವರಕಡೆ ಕಣ್ಣೆತ್ತಿ ನೋಡಲಿಲ್ಲ. ಈ ಸಮಯದಲ್ಲಿ ಜ್ಯೋತಿಪ್ರಕಾಶನು, " ಯಾರು ಬಂದಿರುವರು ? ಇತ್ತಕಡೆ ತಿರುಗಿ ನೋಡು ! " ಎಂದನು.

ಉನ್ಮಾದಿನಿಯು ಕಣ್ಣೆತ್ತಿ ನೋಡಿದಳು. ವಿಸ್ಫಾರಿತ ನೇತ್ರಗಳಿಂದ ಸ್ಥಿರದೃಷ್ಟಿಯುಳ್ಳವಳಾಗಿ ಖಗೇಂದ್ರನಾಥನ ಮುಖವನ್ನು ನೋಡಿದಳು. ಶಿಲಾಮಯವಾದ ಮೂರ್ತಿಯ ಹಾಗೆ ನಿಶ್ಚಲವಾಗಿ ಸ್ಥಿರಭಾವದಿಂದ ಹಾಗೆಯೇ ಸ್ವಲ್ಪ ಹೊತ್ತು ನಿಂತಿದ್ದಳು. ಅವಳು ಈ ಪ್ರಕಾರ ನಿಂತಿರುವುದನ್ನು ನೋಡಿ ನಾಲ್ಕು ಮಂದಿಯೂ ವಿಸ್ಮಿತರಾಗಿ ಸ್ತಂಭಿತರಾದರು. ಆ ಮೂರ್ತಿಯನ್ನು ನೋಡಿ ಯಾರೂ ಕಣ್ಣೆವೆಯನ್ನು ಅಲುಗಾಡಿಸಲಾರದೆ ನಿಂತಿದ್ದರು. ಯಾರ ಬಾಯಿಯಿಂದಲೂ ಒಂದು ಮಾತು ಇಲ್ಲ. ಅನಂತರ ಉನ್ಮಾದಿನಿಯು ಉನ್ಮತ್ತಭಾವದಿಂದ ಓಡಿಬಂದು ಖಗೇಂದ್ರನಾಥನನ್ನು ಆಲಿಂಗನೆ ಮಾಡಿಕೊಂಡಳು. ಖಗೇಂದ್ರನಾಥನೂ ಉನ್ಮತ್ತಭಾವದಿಂದ ಉನ್ಮಾದಿನಿಯನ್ನು ಆಲಿಂಗನೆ ಮಾಡಿ ಹಿಡಿದುಕೊಂಡನು. ಉನ್ಮಾದಿನಿಯು ಖಗೇಂದ್ರನಾಥನ ಈ ಪ್ರಕಾರವಾದ ಪ್ರಗಾಢವಾದ ಆಲಿಂಗನೆಯಲ್ಲಿ ಸ್ವಲ್ಪಹೊತ್ತು ಸ್ಥಿರಭಾವದಿಂದ ನಿಶ್ಚಲಳಾಗಿದ್ದಳು. ಆದರೆ ಇದೇನು ? ಕ್ರಮವಾಗಿ ಉನ್ಮಾದಿನಿಯ ಶರೀರವು ಬಿರುಸಾಗುತ್ತ ಬಂದುದೇಕೆ ?

ಎಲ್ಲರೂ ವಿಸ್ಮಿತರಾಗಿ ನೋಡುತ್ತಿದ್ದಹಾಗೆ ಉನ್ಮಾದಿನಿಯ ಪ್ರಾಣವಾಯುವು ಹಾರಿಹೋಗಿತ್ತು. ಖಗೇಂದ್ರನಾಥನು ಮೂರ್ಛಿತನಾಗಿ ಅಲ್ಲಿಯೇ ಬಿದ್ದನು. ನವೀನಗೋಪಾಲನು ಆರ್ತನಾದ ಮಾಡಿದನು. ತರ್ಕಾಲಂಕಾರನು ಬುದ್ಧಿಹೋದವನ ಹಾಗಾಗಿ ಅಲ್ಲಿಯೇ ನಿಂತಿದ್ದನು. ಜ್ಯೋತಿಪ್ರಕಾಶನು ಚೀತ್ಕಾರ ಮಾಡುತ್ತ, ಸತಿಯು ಪುಷ್ಪಾಲಂಕೃತಳಾಗಿ ಪತಿವಕ್ಷದಲ್ಲಿ ಸ್ವರ್ಗಕ್ಕೆ ಹೋದಳೆಂದು ಕೂಗಿದನು.

## ಸಂಪೂರ್ಣಂ.

## ಮ॥ ರಾ॥ ಬಿ. ವೆಂಕಟಾಚಾರ್ಯರಿಂದ
ರಚಿತವಾದ

# ಪುಸ್ತಕಗಳು.

(ಪರಿಶೋಧಿತವಾಗಿ ಪರಿವರ್ಧಿತವಾಗಿ ನಮ್ಮಲ್ಲಿ ದ್ವಿತೀಯ ಮುದ್ರಣವಾಗಿರುತ್ತವೆ)

| ಪುಸ್ತಕದ ಹೆಸರು. | | ಕ್ರಯ. |
|---|---|---|
| ಅಡವಿ ಹುಡುಗಿ | ... | ೦ ೮ ೦ |
| ಅತ್ತಿಗೆ | ... | ೦ ೩ ೦ |
| ಅಮೃತಪುಲಿನ | ... | ೦ ೧೦ ೧ |
| ಅಹಲ್ಯಾಬಾಯಿ * | ... | ೦ ೮ ೦ |
| ಆನಂದಮಠ* | ... | ೧ ೦ ೦ |
| ಇಂದಿರಾ | ... | ೦ ೬ ೧ |
| ಉನ್ಮಾದಿನೀ | ... | ೦ ೬ ೧ |
| ಉಪವಾಸ | ... | ೦ ೦ ೬ |
| ಕಪಾಲಕುಂಡಲಾ* | ... | ೦ ೧೨ ೦ |
| ಕಮಲಾಕಾಂತ | ... | ೦ ೨ ೦ |
| ಕರ್ಮಕ್ಕೆತಕ್ಕಫಲ | ... | ೦ ೧ ೦ |
| ಕೃಷ್ಣಕಾಂತನ ಉಯಿಲು* | ... | ೧ ೦ ೦ |
| ಕಾಗೆ | ... | ೦ ೧ ೦ |
| ಕೋಹಿನುರು * | ... | ೦ ೧೨ ೦ |
| ಗೀತೋಕ್ತಧರ್ಮ | ... | ೦ ೦ ೬ |
| ಚಂದ್ರಶೇಖರ* | ... | ೧ ೦ ೦ |
| ಚಿತ್ರವಿಚಿತ್ರಾವಳಿ 1 ಭಾಗ | ... | ೦ ೮ ೦ |
| ಡಿ 2 ಭಾಗ | ... | ೦ ೮ ೦ |
| ಚಿರತ್ನನಾಟಕರತ್ನ* | ... | ೦ ೮ ೦ |
| ದಾಡಿಯ ಹೇಳಿಕೆ | ... | ೦ ೨ ೦ |
| ದೇವೀಚೌಧುರಾಣಿ | ... | ೧ ೪ ೦ |
| ದೇಶಾಂತರಗಳಲ್ಲಿ ಪ್ರಾಚೀನಭಾರತ ಉಪನಿವೇಶಗಳು | ... | ೦ ೪ ೦ |
| ದುರ್ಗೇಶನಂದಿನಿ | ... | ೧ ೪ ೦ |
| ನವಾಬನಂದಿನಿ(ದುರ್ಗೇಶನಂದಿನಿಯ2ನೆಭಾಗ) | | ೧ ೮ ೦ |
| ನೀರದೆ | ... | ೧ ೮ ೦ |
| ನೀಳಾಗೀತ | ... | ೦ ೨ ೬ |
| ನೊಂದನುಡಿ | ... | ೦ ೨ ೦ |
| ಪರಿಮಳಾ(Detective Novel) | | ೦ ೧೦ ೦ |
| ಪ್ರಾಚೀನ ನವೀನ ಸ್ತ್ರೀಪುರುಷರು* | ... | ೦ ೩ ೦ |
| ಭರತಖಂಡದ ಪೂರ್ವ ವೃತ್ತ* | ... | ೦ ೮ ೦ |

| ಪುಸ್ತಕದ ಹೆಸರು | | ಕ್ರಯ |
|---|---|---|
| ಭ್ರಾಂತಿವಿಲಾಸ | ... | ೦ ೮ |
| ಭಾರತಮಹಿಳಾ* | ... | ೦ ೮ |
| ಮನೋರಮಾ (Detective Novel) | | ೧ ೦ |
| ಮರಕ | ... | ೦ ೧ |
| ಮಾಲತಿ | ... | ೦ ೩ |
| ಮಾಧವೀಲತಾ* | ... | ೧ ೦ |
| ಮೃಣ್ಮಯಿ(ಕಪಾಲಕುಂಡಲ 2ನೆ ಭಾಗ)* | | ೧ ೦ |
| ಯುಗಳಾಂಗುರೀಯ | ... | ೦ ೩ |
| ರಜನೀ | ... | ೦ ೧೨ |
| ರಮಾಬಾಯಿ | ... | ೦ ೪ |
| ರಾಜಸಿಂಹ* | .. | ೧ ೪ |
| ರಾಧಾರಾಣೀ | ... | ೦ ೩ |
| ರಾಮೇಶ್ವರನ ಅದೃಷ್ಟ | ... | ೦ ೨ |
| ಲೀಲೆ (ಹೊಸ ಕಾದಂಬರಿ) | ... | ೦ ೪ |
| ಲೋಕರಹಸ್ಯ 1ನೆ ಭಾಗ | ... | ೦ ೬ |
| ಲೋಕರಹಸ್ಯ 2ನೆ ಭಾಗ | ... | ೦ ೦ |
| ವಂಗವಿಜೇತ | ... | ೧ ೪ |
| ವಿಷವೃಕ್ಷ | ... | ೧ ೪ |
| ವೆನಿಸುನಗರದ ವಣಿಕ* | ... | ೦ ೧ |
| ವೈಜ್ಞಾನಿಕ ಪ್ರಹಸನ | ... | ೦ ೪ |
| ಸಾಧನೆ | ... | ೦ ೮ |
| ಸೀತಾರಾಮ* | ... | ೧ ೮ |
| ಸೀತಾವನವಾಸ* | ... | ೦ ೮ |
| ಸುಶಿಕ್ಷಿತರೆಂಬ ಸಭ್ಯರಾದ ಹಿಂದೂಗಳು | | ೦ ೦ |
| ಸ್ತ್ರೀ ಶಿಕ್ಷೆಯ ಸಮಸ್ಯೆ* | | ೦ ೪ |
| ಶಕುಂತಲಾ* | ... | ೦ ೧೦ |
| ಶಾಂತಿ* | ... | ೦ ೧೨ |
| ಶಾಂತಿ 2ನೆ ಭಾಗ* | ... | ೧ ೦ |
| ಶಾರದಾಸ್ತೋತ್ರ ಕದಂಬಕಂ | ... | ೦ ೨ |
| ಶಾರದಾಸ್ತೋತ್ರ ಮಂಡಲಂ | ... | ೦ ೧ |
| ಕ್ಷತ್ರಿಯರಮಣಿ | ... | ೦ ೧ |

* ಈ ಗುರುತುಹಾಕಿರುವ ಪುಸ್ತಕಗಳು ಅಚ್ಚಾಗುತ್ತಿವೆ. ಈಗಲೇ ಆರ್ಡರುಕೊಟ್ಟರೆ ವಿಳಾಸವನ್ನ ರಿಜಿಸ್ಟರ್ ಮಾಡಿಕೊಂಡು ಸಿದ್ಧವಾದ ಕೂಡಲೇ ವಿ. ಪಿ. ಮಾಡುತ್ತೇವೆ.

ಮ್ಯಾನೇಜರ್—ರಾಯಲ್ ಪ್ರೆಸ್, ಮೈಸೂರು

